
Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ


JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–36 | ಸೆಪ್ಟೆಂಬರ್ 2–8, 2024 | ಪುಟ 16 | ರೂ.10/–
Volume-18 | Issue-36 | September 2-8, 2024 | Pages:16 | Price: 10/-




'ವಚನದರ್ಶನ' ಎಂಬ ಕೋಮುವಾದಿ ರಾಜಕಾರಣದ ದುಷ್ಟ ಉತ್ಪಾದನೆ

ಏಕೀಕೃತ ಪಿಂಚಣಿ ಯೋಜನೆ: ಕೇಂದ್ರ ಸರ್ಕಾರದ ವಂಚನೆ



- ಜೈಲುಗಳು ಅಪರಾಧಗಳ ಕೇಂದ್ರವಾಗದಿರಲಿ
- ರಾಜ್ಯಗಳಿಗೆ ಶೇ. 50 ತೆರಿಗೆ ಪಾಲು: ಕೇಂದ್ರ ಹಣಕಾಸು ಆಯೋಗಕ್ಕೆ ಮನವಿ
- ಅಮೇರಿಕಾ ಮೆಚ್ಚಿಸಲು ಉಕ್ರೇನಿಗೆ ಪ್ರಧಾನಿ

ಸಾವರ್ಕರ್ 'ವೀರತ್ವ' ಭಂಗ ಮಾಡಿದ ನೂರಾಣಿ



ವಸಂತರಾಜ ಎನ್.ಕೆ.

ಯಾವುದಾದರೂ ಒಂದು ಲೇಖನ ದಶಕಗಳ ಕಾಲ 'ಬಿಲ್ಡ್ ಅಪ್' ಮಾಡಿದ್ದ ವ್ಯಕ್ತಿತ್ವವನ್ನು ಕೆಡವಿದ ಉದಾಹರಣೆಗಳು ಕಡಿಮೆ. ಫ್ರಂಟ್ ಲೈನ್ ಪಾಕ್ಷಿಕದ 2005ರ ಏಪ್ರಿಲ್ 8ರ ಸಂಚಿಕೆಯಲ್ಲಿ ಪ್ರಕಟವಾದ 'ಸಾವರ್ಕರ್ ಅವರ ತಪ್ಪೊಪ್ಪಿಗೆ ಪತ್ರ' ಎಂಬ ಎ.ಜಿ.ನೂರಾಣಿ ಅವರ ಲೇಖನ, ಸಾವರ್ಕರ್ 'ವೀರತ್ವ'ವನ್ನು ಭಂಗ ಮಾಡಿದ್ದು ಅಂತಹದೊಂದು ಉದಾಹರಣೆ. ಈ ಲೇಖನದಲ್ಲಿ ತಮ್ಮ ವಿಶಿಷ್ಟ ಶೈಲಿಯಲ್ಲಿ ಎಲ್ಲ ಸಾಕ್ಷ್ಯಾಧಾರಗಳೊಂದಿಗೆ ಅತ್ಯಂತ ತರ್ಕಬದ್ಧವಾಗಿ, ಸ್ವಾತಂತ್ರ್ಯ ಚಳುವಳಿಯ ಸ್ವಲ್ಪ ಹತ್ತಿರವಾದರೂ ಸುಳಿದಿದ್ದ ತನ್ನ ಏಕಮಾತ್ರ ನಾಯಕ ಸಾವರ್ಕರ್ ಅವರ 'ವೀರತ್ವ' ಮತ್ತು 'ಸ್ವಾತಂತ್ರ್ಯ ಚಳುವಳಿಗೆ ಕನೆಕ್ಶನ್' ಗಳ ಸಂಘ ಪರಿವಾರದ 'ಬಿಲ್ಡ್ ಅಪ್'ನ ಹಿಂದಿನ ಪೊಳ್ಳುತನವನ್ನೂ ನೂರಾಣಿ ಬಯಲು ಮಾಡಿದರು. ಅವರು ಸಾವರ್ಕರ್ ಮತ್ತು ಸಂಘ ಪರಿವಾರದ ಅಪಾಯದ ಕುರಿತ (RSS : A Menace to India, The RSS and the BJP: A Division of Labour, Savarkar and Hindutva: The Godse Connection) ಹಲವು ಅತ್ಯಂತ ಮಹತ್ವದ ವಿದ್ವತ್ ಪೂರ್ಣ ಪುಸ್ತಕಗಳನ್ನು ಬರೆದರು.

ಪ್ರಸಿದ್ಧ ಸುಪ್ರೀಂ ಕೋರ್ಟ್ ನ್ಯಾಯವಾದಿ, ಸಂವಿಧಾನದ ಪರಿಣತ, ಮಹತ್ವದ ವಿದ್ವತ್ ಪೂರ್ಣ ರಾಜಕೀಯ ಪುಸ್ತಕಗಳ ಲೇಖಕ, ರಾಜಕೀಯ ವೀಕ್ಷಕ–ವಿಶ್ಲೇಷಕ, ಅಂಕಣಕಾರ ಅಬ್ದುಲ್ ಗಫೂರ್ ಮಜೀದ್ ನೂರಾಣಿ (1930–2024) ಆಗಸ್ಟ್ 29, 2024ರಂದು ನಿಧನರಾಗಿದ್ದಾರೆ, ಅವರು ಮುಂಬಯಿಯ ಹೈಕೋರ್ಟು ಮತ್ತು ಸುಪ್ರೀಂ ಕೋರ್ಟಿನಲ್ಲಿ ವಕೀಲರಾಗಿ ಸೇವೆ ಸಲ್ಲಿಸಿದ್ದರು. ಹಲವು ಪ್ರಸಿದ್ಧ ಮೊಕದ್ದಮೆಗಳಲ್ಲಿ, ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳ ಪರ ವಾದ ಮಂಡಿಸಿದ್ದರು. ಆಗಿನ ಕೇಂದ್ರ ಸರಕಾರದ ಕೆಂಗಣ್ಣಿಗೆ ಗುರಿಯಾಗಿದ್ದ ಶೇಕ್ ಅಬ್ದುಲ್ ಮತ್ತು ಕರುಣಾನಿಧಿ ಅವರ ಪರವಾಗಿ ವಕಾಲತ್ತು ವಹಿಸಿದ್ದರು. ಅವರು ಪ್ರಸಿದ್ಧ ನ್ಯಾಯವಾದಿಯಾಗಿದ್ದರೂ ಯಾವುದೇ 'ಅಧಿಕೃತ ಹುದ್ದೆ' (ಸಾಲಿಸಿಟರ್ ಜನರಲ್ ಇತ್ಯಾದಿ) ಹೊಂದಿರದಿದ್ದರೂ 'ಸಂವಿಧಾನದ ವ್ಯಾಖ್ಯಾನ'ದ ಯಾವುದೇ ವಿವಾದದ ಕುರಿತು ಅವರ ಅಭಿಪ್ರಾಯಕ್ಕೆ ವ್ಯಾಪಕ ಮನ್ನಣೆಯಿತ್ತು.


ನೂರಾಣಿ

ಆದರೆ ಅವರು ಪ್ರಸಿದ್ಧರಾಗಿದ್ದು ಅವರ ಹಲವು ಆಳವಾದ ರಾಜಕೀಯ ವಿಶ್ಲೇಷಣೆಗಳ ಅತ್ಯಂತ ಗಂಭೀರ ವಿದ್ವತ್ ಪೂರ್ಣ ಪುಸ್ತಕಗಳ ಲೇಖಕರಾಗಿ. 'ಬಾಬ್ರಿ ಮಸೀದಿ ಪ್ರಶ್ನೆ'ಯನ್ನು 1528–2003 ಅವಧಿಯ ದಾಖಲೆಗಳ ಮೂಲಕ ವಿಶ್ಲೇಷಿಸುವ ಅವರ ಎರಡು ಸಂಪುಟಗಳ ಪುಸ್ತಕ ಪ್ರಸಿದ್ಧವಾಗಿದೆ. 'ಕಾಶ್ಮೀರ ವಿವಾದ'ದ ಬಗೆಗಿನ ಎರಡು ಸಂಪುಟಗಳು ಮತ್ತು 'ಕಲಂ 370' ಅವರ ಪುಸ್ತಕ ಈ ವಿಷಯದ ಮೇಲಿನ ಮೇರುಕೃತಿಗಳು. 'ಭಾರತದ ಸಂವಿಧಾನಿಕ ಪ್ರಶ್ನೆಗಳು', 'ನಾಗರಿಕ ಹಕ್ಕುಗಳು, ನ್ಯಾಯವಾದಿಗಳು ಮತ್ತು ಪ್ರಭುತ್ವ' ಈ ವಿಷಯಗಳ ಕುರಿತ ಮಹತ್ವದ ಪುಸ್ತಕಗಳು. ಅವರ ಬರವಣಿಗೆ ವಿದ್ವತ್ತು ಭಾರತಕ್ಕೆ ಸೀಮಿತವಾಗಿರಲಿಲ್ಲ. 'ಇಸ್ಲಾಂ, ದಕ್ಷಿಣ ಏಶ್ಯಾ ಮತ್ತು ಶೀತಸಮರ', 'ಇಂಡಿಯಾ–ಚೀನಾ ಗಡಿ ವಿವಾದ–1846–1947', 'ಇಸ್ಲಾಂ ಮತ್ತು ಜಿಹಾದ್'–ಅಂತರರಾಷ್ಟ್ರೀಯ ವಿಷಯಗಳ ಕುರಿತು ಅವರ ಪುಸ್ತಕಗಳು. 'ಭಗತ್ ಸಿಂಗ್ ವಿಚಾರಣೆಯ ರಾಜಕಾರಣ' ಮತ್ತು 'ಭಾರತದ ರಾಜಕೀಯ ಮೊಕದ್ದಮೆಗಳು 1775–1947' ಬ್ರಿಟಿಷ್ ವಸಾಹತುಶಾಹಿಯ ರಾಜಕಾರಣ ಬಯಲು ಮಾಡುವ ಅತ್ಯಂತ ಅಪರೂಪದ ಪುಸ್ತಕಗಳು. ಬದ್ರುದ್ದೀನ್ ತಯ್ಯಬ್ಜಿ, ಡಾ. ಜಾಕೀರ್ ಹುಸೇನ್ ರಂತಹ ನಾಯಕರ ಜೀವನ ಚರಿತ್ರೆಯನ್ನು ಸಹ ಬರೆದಿದ್ದರು.

"ಮುಂಬಯಿ ಹೈಕೋರ್ಟಿನ ಬಾರ್ ಕೌನ್ಸಿಲ್ ಲೈಬ್ರರಿಯಲ್ಲಿ ತಮ್ಮ ಇಳಿವಯಸ್ಸಿನಲ್ಲಿ ಸಹ ಪುಸ್ತಕಗಳಲ್ಲಿ ಮುಳುಗಿದ್ದರೂ ಯಾರೂ ಕೇಳದ, ಉತ್ತರಿಸದ ಪ್ರಶ್ನೆಗಳನ್ನು ಕೇಳಿ ಉತ್ತರಿಸಿದ ನೂರಾಣಿಯ ಜತೆ ಚರ್ಚಿಸುವುದು ಮರೆಯಲಾಗದ ಅನುಭವ" ಎನ್ನುವ ಪ್ರಸಿದ್ಧ ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ ವಾಡ್ "ಜಮ್ಮು–ಕಾಶ್ಮೀರ, ಕೋಮುವಾದದ ಪ್ರಶ್ನೆಗಳನ್ನು ಎದುರಿಸುವಲ್ಲಿ ಭಾರತೀಯ ಪ್ರಭುತ್ವದ ನಡೆಗಳು ಮತ್ತು ವೈಫಲ್ಯಗಳ ಅವರ ವಿಶ್ಲೇಷಣೆಗಳು, ಆರೆಸ್ಸೆಸ್ ಮತ್ತು ಹಿಂದುತ್ವ ಸಿದ್ಧಾಂತಿ ಸಾವರ್ಕರ್ ಕುರಿತ ಅವರ ವಿಶ್ಲೇಷಣೆಗಳು, ಪ್ರೊಟೊ–ಫ್ಯಾಸಿಸ್ಟ್ ಶಕ್ತಿಯೊಂದು ಪ್ರಜಾಪ್ರಭುತ್ವವನ್ನು ಇಂಚು ಇಂಚಾಗಿ ವಶಪಡಿಸಿಕೊಂಡ ಪ್ರಯತ್ನಗಳೂ ಮತ್ತು ಅದರ ಪರಿಣಾಮಗಳನ್ನು ಜಾಗರೂಕತೆಯಿಂದ ಚಾರಿತ್ರೀಕರಿಸುವ ಉತ್ಕೃಷ್ಟ ಉದಾಹರಣೆ" ಎನ್ನುತ್ತಾ ಅವರ ಪುಸ್ತಕಗಳ ಮಹತ್ವವನ್ನು ಸಾರುತ್ತಾರೆ.

ಪ್ರಸಿದ್ಧ ಇತಿಹಾಸಕಾರರಾದ ರೊಮಿಲ್ಲ ಥಾಪರ್ ಅವರನ್ನು "ಉತ್ಕೃಷ್ಟ ಸಾರ್ವಜನಿಕ ಬುದ್ಧಿಜೀವಿ" ಎಂದು ಕರೆಯುತ್ತಾರೆ. "ಅವರು ತಮ್ಮ 80–90ರ ವಯಸ್ಸಿನಲ್ಲಿ ಸಹ ಒಂದಾದ ನಂತರ ಇನ್ನೊಂದು ಮಹತ್ವದ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದು ನೋಡಿದರೆ ನಾನು ದಂಗಾಗುತ್ತೇನೆ. ಅವರು ಎಲ್ಲ ವಿಷಯಗಳ ಬಗ್ಗೆ ಬರೆದ ಪುಸ್ತಕಗಳು ವಿಸ್ತಾರವಾದ ಚಾರಿತ್ರಿಕ ಅವಧಿಯನ್ನು ವಿಶ್ಲೇಷಿಸುತ್ತವೆ ಮತ್ತು ಅಪ್ರತಿಮ ಸಂಕೀರ್ಣತೆ, ದೋಷರಹಿತ ಸಾಕ್ಷ್ಯಾಧಾರಗಳನ್ನು ಹೊಂದಿರುತ್ತವೆ, ತಾರ್ಕಿಕವಾಗಿ ಪ್ರಶ್ನಾತೀತವಾದವು ಆಗಿರುತ್ತವೆ. ಅವರು ಎಂದೂ ತಾನು ತಟಸ್ಥ, ನಿಷ್ಪಕ್ಷಪಾತದ ಸೋಗು ಹಾಕುವುದಿಲ್ಲ. ಅವರು ಯಾವಾಗಲೂ ಸಾಂವಿಧಾನಿಕ ಮೌಲ್ಯಗಳಾದ ಜಾತ್ಯತೀತತೆ, ಪ್ರಜಾಪ್ರಭುತ್ವ, ನಾಗರಿಕ ಸ್ವಾತಂತ್ರ್ಯಗಳ ಪಕ್ಷಪಾತಿಯಾಗಿರುತ್ತಾರೆ" ಎನ್ನುತ್ತಾರೆ ಪ್ರಸಿದ್ಧ ಪತ್ರಕರ್ತ ಪಿ.ಸಾಯಿನಾಥ್.

ನೂರಾಣಿ ಅವರು "ಸಂಶೋಧನೆಯಲ್ಲಿ ಅವಿರತವಾಗಿ ಸಮಗ್ರವಾಗಿರುವುದು, ಸತ್ಯದ ಅನ್ವೇಷಣೆಯಲ್ಲಿ ಭಯ ರಹಿತವಾಗಿರುವುದು ಮತ್ತು ಅಂತಿಮ ತೀರ್ಮಾನಗಳಲ್ಲಿ ಮೊನಚಾಗಿರುವುದು ಅಂದರೆ ಏನು ಎಂಬುದನ್ನು ತಮ್ಮ ಬರಹಗಳ ಮೂಲಕ ನಮಗೆ ಕಲಿಸುತ್ತಾರೆ" ಎಂದಿದ್ದಾರೆ ಪ್ರಸಿದ್ಧ ಲೇಖಕಿ ಗೀತಾ ಹರಿಹರನ್. "ನೂರಾಣಿ ಜಾತ್ಯತೀತವಾದ, ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಸಂರಕ್ಷಿಸಿದ ಅದಮ್ಯ ವಿಕ್ರಮವುಳ್ಳ ಚಾಂಪಿಯನ್" ಎನ್ನುತ್ತಾರೆ ಸಿಪಿಐ(ಎಂ) ನಾಯಕ ಪ್ರಕಾಶ್ ಕಾರಟ್.

ಈ ಎಲ್ಲ ಹೇಳಿಕೆಗಳು ನೂರಾಣಿ ಅವರ 90ನೇ ಜನ್ಮದಿನದಂದು ನಡೆದ ಸಭೆಯೊಂದರಲ್ಲಿ ಹೇಳಿದ ಮಾತುಗಳು. ನೂರಾಣಿ ಅವರು ಇನ್ನಿಲ್ಲವಾದರೂ ಅವರ ಪುಸ್ತಕಗಳು ಮಾತನಾಡುತ್ತಲೇ ಇರುತ್ತವೆ. ಹಿಂದೆಂದಿಗಿಂತಲೂ ಅವು ಇಂದು ಪ್ರಸ್ತುತವಾಗಿವೆ. ಅವರ ಪುಸ್ತಕಗಳು ಕನ್ನಡ ಸೇರಿದಂತೆ ಎಲ್ಲ ಭಾಷೆಗಳಲ್ಲಿ ಬಂದು ಅವು ಭಾರತದ ಭವಿಷ್ಯತ್ತನ್ನು ರೂಪಿಸಲಿ.



ಸಂಪಾದಕೀಯ

ಅಪರಾಧ ನಿವಾರಿಸುವ ಉದ್ದೇಶದ ಜೈಲುಗಳು ಅಪರಾಧಗಳ ಕೇಂದ್ರವಾಗದಿರಲಿ

ಚಿತ್ರದುರ್ಗದ ರೇಣುಕಾಸ್ವಾಮಿಯ ಕೊಲೆ ಆರೋಪದಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರದ ಕಾರಾಗೃಹದಲ್ಲಿದ್ದ ವಿಚಾರಣಾಧೀನ ಖೈದಿ, ಚಿತ್ರನಟ ದರ್ಶನ್ ಜೈಲಿನೊಳಗೆ ರೌಡಿಪಟ್ಟಿಯಲ್ಲಿರುವ ರೌಡಿಗಳು ಹಾಗೂ ತನ್ನ ಮೇನೇಜರ್ ಮುಂತಾದವರೊಂದಿಗೆ ಆರಾಮವಾಗಿ ಕುಳಿತು ಸಿಗರೇಟು ಸೇದುತ್ತಾ, ಹರಟೆ ಹೊಡೆಯುತ್ತಿರುವ ಚಿತ್ರವೊಂದು ಬಹಿರಂಗವಾಗಿದೆ. ದರ್ಶನ್ ಮೊಬೈಲ್ ಮೂಲಕ ವಿಡಿಯೋ ಕಾಲ್ ಮಾಡಿ ಜೈಲಿನ ಹೊರಗಿರುವ ರೌಡಿಗಳೊಂದಿಗೆ ಮಾತನಾಡಿರುವುದಕ್ಕೂ ಸಾಕ್ಷ್ಯಗಳು ದೊರೆತಿವೆ. ಈ ಹಿನ್ನೆಲೆಯಲ್ಲಿ ವ್ಯಕ್ತವಾದ ತೀವ್ರ ಆಕ್ಷೇಪ, ಅಕ್ರಮಗಳ ವಿರುದ್ಧದ ಕ್ರಮಕ್ಕಾಗಿನ ಆಗ್ರಹಗಳಿಂದಾಗಿ ಜೈಲಿನ ಒಂಬತ್ತು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ. ದರ್ಶನ್ ನನ್ನು ಬಳ್ಳಾರಿ ಸೆಂಟ್ರಲ್ ಜೈಲಿಗೂ ಮತ್ತು ಆ ಪ್ರಕರಣದಲ್ಲಿದ್ದ ಇತರೆ 15 ಕ್ರಿಮಿನಲ್ ಆರೋಪಿಗಳನ್ನು ರಾಜ್ಯದ ವಿವಿಧ ಕಡೆಗಳ ಜೈಲುಗಳಿಗೆ ಸ್ಥಳಾಂತರಿಸಲಾಗಿದೆ. ಇಷ್ಟನ್ನು ಮಾಡಿ ಎಲ್ಲವನ್ನೂ ಸರಿಪಡಿಸಲಾಗಿದೆ ಎಂದು ಸರಕಾರ ಕೈ ಕಣ್ಣು ಮುಚ್ಚಿದರೆ ಅದು ಘೋರ ಅಕ್ಷಮ್ಯ ಅಪರಾಧವಾದೀತು. ಯಾಕೆಂದರೆ ಈ ಪ್ರಕರಣವನ್ನು ಒಂದು ಬಿಡಿ ಘಟನೆ ಎನ್ನುವಂತೆ ನೋಡುವುದೇ ಪ್ರಸಕ್ತವಾಗಿ ಜೈಲುಗಳಲ್ಲಿ ನಡೆಯುತ್ತಿವೆ ಎನ್ನಲಾಗುತ್ತಿರುವ ಅಥವಾ ಆಗೀಗ ಹೊರ ಬರುವ ಅಕ್ರಮಗಳ ಮುಂದುವರಿಕೆಗೆ ಒಂದು ರೀತಿಯ ಸಮ್ಮತಿ ನೀಡಿದಂತೆ ಆಗುತ್ತದೆ.

ದರ್ಶನ್ ಜೈಲು ಪ್ರಕರಣದ ಬೆನ್ನ ಹಿಂದೆಯೇ ಮಾಜಿ ಖೈದಿಗಳ ಮೂಲದಿಂದ ಕೇಳಿ ಬರುತ್ತಿರುವ ಹಲವು ಸುದ್ದಿಗಳು ಆಘಾತಕಾರಿಯಾಗಿವೆ. ರಾಜಕೀಯ ಪ್ರಭಾವ ಇರುವವರಿಗೆ ಮತ್ತು ದೊಡ್ಡ ಪ್ರಮಾಣದ ಹಣವನ್ನು ಕೊಡಲು ಶಕ್ತರಾಗಿರುವವರಿಗೆ ಜೈಲಿನಲ್ಲಿಯೇ ಅಕ್ರಮವಾಗಿ ಪ್ರತ್ಯೇಕ ಕೋಣೆಗಳಲ್ಲಿ ಐಶಾರಾಮಿ ಜೀವನದ ಸೌಲಭ್ಯಗಳನ್ನು ಒದಗಿಸಲಾಗುವುದಂತೆ. ಇದೇ ಜೈಲಿನಲ್ಲಿರುವ ಖೈದಿಗಳು ಹೊರಗಿನ ಜನರಿಗೆ ವಿಡಿಯೋ ಫೋನ್ ಕರೆ ಮಾಡಿ, ಬೆದರಿಕೆ ಹಾಕುವ, ಹಣ ವಸೂಲಿ ಮಾಡುವ ದುಷ್ಕೃತ್ಯಗಳ ಬಗೆಗೂ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗಿವೆ.

ದರ್ಶನ್‌ಗೆ ಮಾಡಲಾಗಿದ್ದ 'ವ್ಯವಸ್ಥೆಗಳ' ಮಾಹಿತಿಗಳು ಬಹಿರಂಗ ಆಗಿರುವುದು ಗೃಹ ಇಲಾಖೆಯ ದಕ್ಷ ಪರಿಶೀಲನೆಯಿಂದಲೋ, ಅಥವಾ ಹಿರಿಯ ಪೊಲೀಸ್ ಅಧಿಕಾರಿಗಳ ತನಿಖೆಯಿಂದಲೋ ಅಲ್ಲ. ಜೈಲಿನಲ್ಲಿರುವ ದರ್ಶನ್‌ಗೆ ಮೊದಲು ಭೋಗ ಜೀವನದ ಸೌಲಭ್ಯಗಳನ್ನು ಪೂರೈಸುತ್ತಿದ್ದ ರೌಡಿಗೂ, ಇದೀಗ ಹೊಸದಾಗಿ ಪರಿಚಯವಾಗಿ ಹಳಬನಿಗಿಂತಲೂ ಹೆಚ್ಚು ಸೌಲಭ್ಯಗಳನ್ನು ಒದಗಿಸಿ ದರ್ಶನ್‌ನ ಪರಮಾಪ್ತನಾಗಿರುವ ರೌಡಿಗೂ ನಡುವಿನ ಪೈಪೋಟಿ ಮತ್ತು ಜಗಳದಿಂದ.

ಈ ಒಟ್ಟು ವಿದ್ಯಮಾನ ಕಾರಾಗೃಹದ ನಿರ್ವಹಣೆಗೆ ಸಂಬಂಧಿಸಿದಂತೆ ಹಲವಾರು ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಜೈಲಿನ ಹೊರಗೆ ಅಪರಾಧಿಗಳಿಗೆ ಸಿಗುವ ಐಷರಾಮಿ ಮತ್ತು ಕಾನೂನು ಬಾಹಿರ ಸೌಕರ್ಯಗಳೆಲ್ಲಾ ಜೈಲಿನಲ್ಲೇ ದೊರೆಯುವುದಾದರೆ, 'ಜೈಲುವಾಸ' ಎಂಬುದು ಒಂದು ಶಿಕ್ಷೆ, ಮೂಲಕ ಶಿಕ್ಷಣ ಎಂದು ಅನಿಸದೇ ಹೋಗುತ್ತದೆ. ಇದು ಸಮಾಜದಲ್ಲಿ ಕಾನೂನು ವ್ಯವಸ್ಥೆಯ ಬಗೆಗೆ ಇರುವ ಗೌರವ, ಘನತೆಯನ್ನು ನಾಶ ಮಾಡಿ ಸಮಾಜವನ್ನು ಅಧೋಗತಿಗೆ ಒಯ್ಯುತ್ತದೆ. ಮತ್ತು ಇಂತಹ ಒಂದು ಪರಿಸ್ಥಿತಿಯು ಕೊಳೆತು ಹೋಗಿರುವ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯ ಸೂಚನೆಯಾಗಿದೆ. ಅಲ್ಲದೇ ಸಮಾಜದ ಭವಿಷ್ಯಕ್ಕೆ ಅಪಾಯಕಾರಿಯೂ ಆಗಿದೆ. ಮಾದಕವಸ್ತುಗಳ ಬಳಕೆ, ಅಪರಾಧಗಳಿಗೆ ಸಂಬಂಧಿಸಿದ ಸಾಕ್ಷ್ಯ ನಾಶ, ಜೀವ, ಬೆದರಿಕೆ, ಹಫ್ತಾ ವಸೂಲಿ, ದರೋಡೆ, ಲೈಂಗಿಕ-ಹಗರಣ, ದೌರ್ಜನ್ಯ, ರೌಡಿ ತಂಡಗಳ ನಿರ್ವಹಣೆ ಮುಂತಾದ ಹಲವು ಬಗೆಯ ಅಪರಾಧಗಳಿಗೆ ಕುಮ್ಮಕ್ಕು-ಅವಕಾಶ ನೀಡುವ ವ್ಯವಸ್ಥೆಯ ಈ ದೋಷವು ಆಳುವವರು ಮತ್ತು ಅಪರಾಧಿಗಳ ನಡುವಿನ ಸಖ್ಯತೆಯನ್ನು ಬೆಸೆದು ಸಮಾಜದಲ್ಲಿನ ಅಪರಾಧೀಕರಣ ಇನ್ನಷ್ಟು ಉಲ್ಬಣಗೊಳ್ಳಲು ಕಾರಣವಾಗುತ್ತದೆ.

ಜೈಲಿನ ಒಳಗಿರುವ ದರ್ಶನ್ ಅವರ ಬಗೆಗೆ, ಹೊರಗೆ ಬಿಂಬಿಸಲಾಗಿದ್ದ ಚಿತ್ರವೇ ಬೇರೆ. ದರ್ಶನ್ ಅವರಿಗೆ ಮನೆ ಊಟ ನೀಡಲು, ಮನೆಯಿಂದ ಹಾಸಿಗೆ ತಂದು ಬಳಸಲು ನ್ಯಾಯಾಲಯವನ್ನು ಕೋರಲಾಗುತ್ತಿದೆ.., ಆದರೆ ಅನುಮತಿ ಸಿಗುತ್ತಿಲ್ಲ.. ಅವರ ದೇಹ ತೂಕ ತುಂಬಾ ಕಡಿಮೆಯಾಗಿ ಸೊರಗಿದ್ದಾರೆ.... ಪುಸ್ತಕಗಳನ್ನು ಓದುತ್ತಿದ್ದಾರೆ.... ಜೈಲಿನ ಆವರಣದಲ್ಲಿ ಮೊಬೈಲ್ ಸಿಗ್ನಲ್‌ಗಳು ಸಿಗಲಾರದಂತೆ ಜಾಮರ್ ಅಳವಡಿಲಾಗಿದೆ... ಇತ್ಯಾದಿ ಇತ್ಯಾದಿ. ಆದರೆ ಜೈಲ್ ಒಳಗಿನ ಪರಿಸ್ಥಿತಿ ಬಹಳ ಭಿನ್ನವಾಗಿರುವಂತೆ ಕಾಣುತ್ತಿದೆ. ಮತ್ತು ಈ ಅಕ್ರಮದಲ್ಲಿ ರಾಜ್ಯದ ಉನ್ನತ ಹಂತದ ರಾಜಕಾರಣಿಗಳು ಪ್ರಭಾವ ಬೀರಿದ್ದಾರೆ ಎಂಬ ಆರೋಪಗಳೂ ಕೇಳಿಬರುತ್ತಿರುವುದು ನಿರಾಕರಿಸಲಾಗದು.

ಇದರ ಅರ್ಥ ಜೈಲಿನಲ್ಲಿರುವ ಖೈದಿಗಳನ್ನೆಲ್ಲಾ ಕ್ರೂರವಾಗಿ ನಡೆಸಿಕೊಳ್ಳಬೇಕು ಎಂದೇನೂ ಅಲ್ಲ. ಆರೋಪಿಗಳನ್ನು ನ್ಯಾಯಾಲಯಗಳು ಅಪರಾಧಿಗಳೆಂದು ತೀರ್ಮಾನಿಸಿ ಶಿಕ್ಷೆ ನೀಡಿದ ನಂತರವಷ್ಟೆ ಅವರು ಅಪರಾಧಿಗಳಿರುತ್ತಾರೆ. ಅಲ್ಲಿಯವರೆಗೂ ವಿಚಾರಣಾಧೀನ ಖೈದಿಗಳಿರುತ್ತಾರೆ. ಅಪರಾಧಿಗಳಲ್ಲೂ ಯಾವುದೋ ನಿರ್ದಿಷ್ಟ ಸಮಯ-ಸಂದರ್ಭದ ಒತ್ತಡಗಳಲ್ಲಿ ದುಡುಕಿ ಅಪರಾಧಗಳನ್ನು ಎಸಗಿ ಪಶ್ಚಾತ್ತಾಪ ಪಡುತ್ತಿರುವವರು ಇರುತ್ತಾರೆ. ಪ್ರಜ್ಞಾಪೂರ್ವಕವಾಗಿ ಅಪರಾಧ ಮಾಡಿರುವವರೂ ಸಹ ನಮ್ಮ ದೋಷಪೂರಿತ ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ಬಲಿಪಶುಗಳೇ ಆಗಿರುತ್ತಾರೆ. ಅದೇನೇ ಇರಲಿ ವ್ಯಕ್ತಿಯು ಎಸಗಿದ ಅಪರಾಧಕ್ಕೆ ತಕ್ಕಂತೆ ಕಾನೂನಾತ್ಮಕ ಶಿಕ್ಷೆಯನ್ನು ಅನುಭವಿಸಲೇ ಬೇಕು. ಅಪರಾಧಗಳಿಗೆ ಅನುಗುಣವಾಗಿ ಅಪರಾಧಿಗಳನ್ನು ಸಮಾನವಾಗಿ ನೋಡಬೇಕು. ತಾರತಮ್ಯಕ್ಕೆ ಅವಕಾಶ ಇರಬಾರದು. ಆದರೆ ವ್ಯಕ್ತಿ ಯಾರೇ ಇರಲಿ ಮನುಷ್ಯತ್ವದ ಘನತೆಗೆ ಧಕ್ಕೆಯಾಗದಂತಹ ಕನಿಷ್ಠ ಸೌಲಭ್ಯಗಳು ಮತ್ತು ನಡತೆಗಳನ್ನು ಜೈಲುಗಳು ಒಳಗೊಂಡಿರಬೇಕು. ಇದಕ್ಕಾಗಿಯೇ ರೂಪಿಸಲಾದ ನೀತಿ ನಿಯಮಗಳ ಪಾಲನೆ ಕಟ್ಟುನಿಟ್ಟಾಗಿ ಆಗಬೇಕು. ಮಾನವ ಹಕ್ಕುಗಳ ಉಲ್ಲಂಘನೆಗೆ ಅವಕಾಶ ಇರಕೂಡದು.

ನ್ಯಾಯಾಲಯಗಳು ಅಪರಾಧಿಗಳಿಗೆ ಶಿಕ್ಷೆ ವಿಧಿಸುವುದರ ಹಿಂದೆ ಸಮಾಜದಲ್ಲಿ ಅಪರಾಧಗಳನ್ನು ಕಡಿಮೆ ಮಾಡುವ ಉದ್ದೇಶವಿದೆ. ಅಂದರೆ ಶಿಕ್ಷೆಯು, ಶಿಕ್ಷೆ ಅನುಭವಿಸುವ ವ್ಯಕ್ತಿಯ ಮನಪರಿವರ್ತನೆಗೂ, ಶಿಕ್ಷೆಯ ಅವಧಿಯ ಮುಗಿದ ನಂತರ ಹೊಸ ಬದುಕು ರೂಪಿಸಿಕೊಳ್ಳಲು ಅವಕಾಶ ಪುಟ 7 ಕ್ಕೆ

ನ್ಯಾಯಾಲಯದ ಆದೇಶಕ್ಕಾಗಿ ಕಾದ ನಾಯಕರು

ಈ ವಾರ

ಎಸ್.ವೈ.ಗುರುಶಾಂತ್

'ಮುಡಾ'ದಲ್ಲಿ ನಡೆದಿದೆ ಎನ್ನಲಾಗಿರುವ ಹಗರಣಗಳ ಕುರಿತಾದ ದೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ವಿರುದ್ಧ ತನಿಖೆಯ ಪ್ರಾಸಿಕ್ಯೂಶನ್ ಗೆ ಅನುಮತಿ ನೀಡಿರುವ ರಾಜ್ಯಪಾಲರ ಆದೇಶವನ್ನು ರದ್ದುಗೊಳಿಸುವಂತೆ ಕೋರಿದ ಅರ್ಜಿಯ ವಿಚಾರಣೆ ನಡೆಸಿದ ಕರ್ನಾಟಕ ಹೈಕೋರ್ಟ್ ತನ್ನ ತೀರ್ಪನ್ನು ಇದೇ 2024 ಸೆಪ್ಟೆಂಬರ್ 2 ಕ್ಕೆ ಮುಂದೂಡಿದೆ. ದೂರುದಾರರು ಮತ್ತು ಮನವಿದಾರರ ವಾದಗಳನ್ನು ಆಲಿಸಿದ ಏಕ ಸದಸ್ಯ ಪೀಠ ಹೀಗೆ ನಿರ್ಧಾರ ಪ್ರಕಟಿಸಿರುವುದು ಇನ್ನಷ್ಟು ಕುತೂಹಲದಿಂದ ಕಾಯುವಂತೆ ಮಾಡಿದೆ. ಈ ವಾದಗಳಲ್ಲಿ ಕೆಲವು ಹೊಸ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ. ಸಿದ್ದರಾಮಯ್ಯನವರ ಪತ್ನಿ ಜಮೀನನ್ನು ಕಳೆದುಕೊಳ್ಳದೇ ಕೊಡದ ಜಮೀನಿಗೆ ಪ್ರತಿಯಾಗಿ ನಿವೇಶನಗಳನ್ನುಪಡೆದಿದ್ದಾರೆ ಎಂಬುದು. ಸೈಟ್ ನೀಡಲು ನಿರ್ಧರಿಸಿದ ಸಭೆಯಲ್ಲಿ ಅವರ ಮಗ ಹಾಜರಿದ್ದರು, ಹೀಗಾಗಿ ಪ್ರಭಾವ ಬೀರಿದ್ದಾರೆ ಎನ್ನುವುದು ಮತ್ತೊಂದು. ಆಗ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿ, ಮುಖ್ಯಮಂತ್ರಿಯೂ ಆಗಿದ್ದರು ಎನ್ನುವುದೂ ಕೂಡ ಮೂಡಾ ಸೈಟ್ ಗಳನ್ನು ಹಂಚಿಕೆಯ ಮೇಲೆ ಪ್ರಭಾವ ಬೀರದೇ ಇರಲಾದೀತೇ ಎನ್ನುವುದು. ಆದರೆ ಸಿದ್ದರಾಮಯ್ಯನವರ ಭಾಗಿತ್ವದ ನೇರ ಸಾಕ್ಷಿ, ದಾಖಲೆಗಳನ್ನು ನೀಡಲಾಗಿಲ್ಲ.

ಈ ಪ್ರಕರಣ ಆರಂಭಗೊಂಡ ರೀತಿ, ತೊಡಗಿದ ಹಲವು ಪಾತ್ರಗಳು ಕೇಂದ್ರದಲ್ಲಿ ಅಧಿಕಾರದಲ್ಲಿರುವ ರಾಜ್ಯದಲ್ಲಿ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಪ್ರಕರಣವನ್ನು ಬೆಳಸಿದ ಹಾಗೂ ಬಳಸಿದ ರೀತಿ, ರಾಜ್ಯಪಾಲರ ಕಛೇರಿಯನ್ನೂ ಬಿಡದ ಅವರ ಪಿತೂರಿಗಳನ್ನು ಕಂಡ ಜನರಿಗೆ ನ್ಯಾಯಾಲಯವಾದರೂ ನ್ಯಾಯ ಕೊಡಬಹುದೇ ಎಂಬ ಕುತೂಹಲದ ನಿರೀಕ್ಷೆಯಲ್ಲಿದ್ದಾರೆ. ವಿರೋಧ ಪಕ್ಷಗಳ ಸರ್ಕಾರಗಳನ್ನು ದುಷ್ಟ ಸಂಚುಗಳ ಮೂಲಕ ಉರುಳಿಸುವ ಬಿಜೆಪಿ ಕೇಂದ್ರ ಸರ್ಕಾರದ ವಿರುದ್ಧದ ಹೋರಾಟದಲ್ಲಿ ನ್ಯಾಯಾಲಯದ ತೀರ್ಪು ಸಹ ಮಹತ್ವವನ್ನು ಪಡೆಯಲಿದೆ. ಒಂದು ವೇಳೆ ತೀರ್ಪು ವ್ಯತಿರಿಕ್ತವಾಗಿ ಬಂದರೂ ಕಾನೂನು ಮತ್ತು ರಾಜಕೀಯ ಸಮರ ಮುಂದುವರಿಯುವುದು ಶೇ.100 ಗ್ಯಾರಂಟಿ.



ಬಿಜೆಪಿ-ಜೆಡಿಎಸ್

* * *

ಅತ್ತ ಹೈಕೋರ್ಟಿನಲ್ಲಿವಾದ ಪ್ರತಿವಾದ, ವಿವಾದಗಳು ನಡೆಯುತ್ತಿದ್ದರೆ ಇತ್ತ ರಾಜ್ಯಪಾಲರ ಕಡೆಗೆ ಕಾಂಗ್ರೆಸ್ಸಿನ ನಾಯಕರ ನಡಿಗೆಯೂ ನಡೆಯಿತು. ಅವರ ಮುಖ್ಯ ತಕರಾರು ಈಗಾಗಲೇ ಹಗರಣಗಳಲ್ಲಿ ಭಾಗಿಯಾಗಿದ್ದಾರೆ ಎನ್ನಲಾಗಿರುವ ಹಾಲಿ ಕೇಂದ್ರ ಕೈಗಾರಿಕಾ ಸಚಿವರು, ಮಾಜಿ ಮುಖ್ಯಮಂತ್ರಿಗಳಾದ ಎಚ್.ಡಿ. ಕುಮಾರಸ್ವಾಮಿ, ಅಂದಿನ ಮಂತ್ರಿಗಳಾಗಿದ್ದ, ಇಂದಿನ ಶಾಸಕರಾಗಿರುವ ಗಾಲಿ ಜನಾರ್ದನ ರೆಡ್ಡಿ ಮತ್ತು ಹಿಂದಿನ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಶಶಿಕಲಾ ಜೊಲ್ಲೆ ಹಾಗೂ ಹಿಂದಿನ ಮಂತ್ರಿ, ಹಾಲಿ ಶಾಸಕ ಮುರುಗೇಶ್ ನಿರಾಣಿ ಅವರ ಮೇಲೆ ಪ್ರಾಸಿಕ್ಯೂಶನ್ ಗೆ ರಾಜ್ಯಪಾಲರು ಕೂಡಲೇ ಅನುಮತಿ ಕೊಡಬೇಕು ಎಂಬ ಅಗ್ರಹ. ಹಾಗೆ ಇನ್ನು ಯಾಕೆ ಅದನ್ನು ಶೈತ್ಯಾಗಾರದಲ್ಲಿ ಕೊಳೆಯುವಂತೆ ಇಡಲಾಗಿದೆ ಎನ್ನುವ ಪ್ರಶ್ನೆ. ಅಂದರೆ ರಾಜ್ಯಪಾಲರು ಆಡಳಿತದಲ್ಲಿರುವ ವಿರೋಧ ಪಕ್ಷಗಳಿಗೆ ಒಂದು ರೀತಿ, ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವ ರಾಜ್ಯದಲ್ಲಿನ ವಿರೋಧ ಪಕ್ಷಗಳಿಗೆ ಇನ್ನೊಂದು ರೀತಿ ತಾರತಮ್ಯ ಮಾಡುತ್ತಿದ್ದಾರೆ ಎನ್ನುವ ಅಂಶವನ್ನು ಬಯಲಿಗಿಡುತ್ತಲೇ ತಮ್ಮ ಮೇಲಿನ ದಾಳಿಗೆ ಪ್ರತಿ ದಾಳಿ ನಡೆಸಲು ಮುಂದಾಗಿದ್ದಾರೆ. ಉಪಮುಖ್ಯಮಂತ್ರಿ, ಮುಖ್ಯಮಂತ್ರಿ ಸೇರಿದಂತೆ ಕ್ಯಾಬಿನೆಟ್ಟಿನ ಹಲವು ಹಿರಿಯ ಸಚಿವರು ಮತ್ತು ಕಾಂಗ್ರೆಸ್ಸಿನ ನಾಯಕರು ಮಹಾತ್ಮ ಗಾಂಧಿ ಪ್ರತಿಮೆ ಬಳಿ ಧರಣಿ ನಡೆಸಿದ ಬಳಿಕ ರಾಜ್ಯಪಾಲರ ಭವನದತ್ತ ಹೆಜ್ಜೆ ಹಾಕಿದ್ದಾರೆ. ಅವರ ಬೇಡಿಕೆ ಈ ಮೇಲೆ ಸೂಚಿಸಲಾದವರ ಮೇಲೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಾಯ್ದೆ ಕಲಂ-218 ರಂತೆ ಹಾಗೂ ಭ್ರಷ್ಟಾಚಾರ ತಡೆ ಕಾಯಿದೆ ಅನುಗುಣವಾಗಿ ಅದರ ಸೆಕ್ಷನ್ 19ರ ಅಡಿಯಲ್ಲಿ ಕ್ರಮ ವಹಿಸಲು, 17ಎ ಹಾಗೂ 1988 (ತಿದ್ದುಪಡಿ ಕಾಯ್ದೆ 2018) ಆಧಾರದಲ್ಲಿಯೂ ಲೋಕಾಯುಕ್ತ ಪೊಲೀಸರಿಗೆ ಪರವಾನಿಗೆ ಕೊಡಬೇಕು ಎನ್ನುವುದಾಗಿದೆ.



ಕಾಂಗ್ರೆಸ್

ಈ ಆಗ್ರಹವೇನೂ ಇಂದು ಎತ್ತಿರುವುದೇನಲ್ಲ. ಈಗಾಗಲೇ ಕಳೆದ ಹಲವು ದಿನಗಳ ಹಿಂದಿನಿಂದಲೂ ಈ ಪ್ರಶ್ನೆಯನ್ನು ಕೇಳುತ್ತಲೇ ಬರಲಾಗುತ್ತಿದೆ ಮತ್ತು ಕ್ರಮ ವಹಿಸಲು ಒತ್ತಾಯವನ್ನು ಮಾಡಲಾಗುತ್ತಿದೆ. ಆದಾಗ್ಯೂ ರಾಜ್ಯಪಾಲರು ಯಾವುದೇ ಕ್ರಮಗಳನ್ನು ವಹಿಸದೆ ಮೌನವಾಗಿದ್ದಾರೆ! ಹಾಗೆ ನೋಡಿದರೆ ರಾಜ್ಯಪಾಲರನ್ನು ತನಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳಲು ಕೇಂದ್ರ ಸರ್ಕಾರ ಖುಲ್ಲಂ ಖುಲ್ಲಾ ಪುಟ 7 ಕ್ಕೆ

ರಾಜ್ಯಗಳಿಗೆ ಶೇ.50 ರಷ್ಟು ತೆರಿಗೆ ಪಾಲು

16ನೇ ಹಣಕಾಸು ಆಯೋಗಕ್ಕೆ ಸಿಪಿಐ(ಎಂ) ಮನವಿ

ಒಕ್ಕೂಟ ಸರ್ಕಾರವು ಡಾ.ಅರವಿಂದ್ ಪನಗೇರಿಯಾ ಅವರ ಅಧ್ಯಕ್ಷತೆಯಲ್ಲಿ 16 ನೇ ಹಣಕಾಸು ಆಯೋಗವನ್ನು (2026–27 ರಿಂದ 2031–32 ರ ಅವಧಿಗೆ) ರಚಿಸಿದೆ. ಈ ಆಯೋಗವು 2024 ಆಗಸ್ಟ್ 29 ಮತ್ತು 30 ರಂದು ಬೆಂಗಳೂರಿಗೆ ಭೇಟಿ ನೀಡಿತ್ತು. ಆಗಸ್ಟ್ 29 ರಂದು ರಾಜಕೀಯ ಪಕ್ಷಗಳು ಅಭಿಪ್ರಾಯವನ್ನು ಪಡೆಯಲು ಸಭೆಯನ್ನು ಕರೆಯಲಾಗಿತ್ತು. ಸಿಪಿಐ(ಎಂ) ರಾಜ್ಯ ಸಮಿತಿಯ ಪರವಾಗಿ ರಾಜ್ಯ ಕಾರ್ಯದರ್ಶಿ ಯು.ಬಸವರಾಜ ಮತ್ತು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪ್ರಕಾಶ್ ಕೆ. ಇವರುಗಳ ನಿಯೋಗ ಹಣಕಾಸು ಆಯೋಗದ ಮುಂದೆ ಸಲಹೆಗಳನ್ನು ಮಂಡಿಸಿತು. ಆಯೋಗಕ್ಕೆ ನೀಡಲಾದ ಮನವಿಯ ಅಂಶಗಳನ್ನು ಇಲ್ಲಿ ನೀಡಲಾಗಿದೆ.

1. ಭಾರತದಲ್ಲಿ ಹಣಕಾಸು ಒಕ್ಕೂಟ ವ್ಯವಸ್ಥೆಯು ಯಾವಾಗಲೂ ಸಮಸ್ಯಾತ್ಮಕವಾಗಿದೆ. ಲಂಬ ಮತ್ತು ಸಮತಲ (**Vertical and Horizontal**) ಅಸಮತೋಲನವು ಇಂದಿಗೂ ಮುಂದುವರೆದಿದೆ ಮತ್ತು ಉಲ್ಬಣಗೊಳ್ಳುತ್ತಿದೆ. ಸಂಪನ್ಮೂಲಗಳು ಯಾವಾಗಲೂ ಒಕ್ಕೂಟ ಸರ್ಕಾರದ ಕೈಯಲ್ಲಿ ಕೇಂದ್ರೀಕೃತವಾಗಿವೆ. ರಾಜ್ಯಗಳು ತಮ್ಮ ಅಭಿವೃದ್ಧಿ ಅಗತ್ಯಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲಗಳ ಸಂಪೂರ್ಣ ಅಸಮರ್ಪಕತೆಯಿಂದ ಬಳಲುತ್ತಿವೆ. GST–ನಂತರದ ಅವಧಿಯಲ್ಲಿ ರಾಜ್ಯಗಳ ಈಗಾಗಲೇ ಸೀಮಿತವಾಗಿದ್ದ ಹಣಕಾಸು ಮತ್ತು ಆರ್ಥಿಕ ನಿರ್ಧಾರ ತೆಗೆದುಕೊಳ್ಳುವ ಅಧಿಕಾರಗಳು ಮತ್ತಷ್ಟು ನಿರ್ಬಂಧಿತವಾಗಿವೆ.

2. ಅಭಿವೃದ್ಧಿ ವೆಚ್ಚದ ವಲಯಗಳಾದ ನೀರಾವರಿ, ರಸ್ತೆಗಳು, ವಿದ್ಯುತ್, ಶಿಕ್ಷಣ, ಆರೋಗ್ಯ, ಇತ್ಯಾದಿಗಳು ಮತ್ತು ಆಡಳಿತಾತ್ಮಕ ವೆಚ್ಚಗಳಾದ ಕಾನೂನು ಮತ್ತು ಸುವ್ಯವಸ್ಥೆ, ಸಾಮಾನ್ಯ ಆಡಳಿತ, ಇತ್ಯಾದಿ ಪ್ರಮುಖ ಜವಾಬ್ದಾರಿಗಳನ್ನು ರಾಜ್ಯಗಳಿಗೆ ನೀಡಲಾಗಿದ್ದು, ಆದಾಯ ಸಂಗ್ರಹಿಸುವ ಪ್ರಮುಖ ಅಧಿಕಾರಗಳನ್ನು ಒಕ್ಕೂಟಕ್ಕೆ ನೀಡಲಾಗಿದೆ ಎಂಬ ಅಂಶದಿಂದ ಕೇಂದ್ರ–ರಾಜ್ಯ ಸಂಬಂಧಗಳಿಗೆ ಸಂಬಂಧಿಸಿದಂತೆ ಭಾರತೀಯ ಸಂವಿಧಾನದಲ್ಲಿನ ಮೂಲಭೂತ ಅಸಮತೋಲನವು ಉದ್ಭವಿಸುತ್ತದೆ.

3. ಒಟ್ಟು ಆದಾಯದ ಸ್ವೀಕೃತಿಗಳಲ್ಲಿ ಒಕ್ಕೂಟದ ಪಾಲು ಶೇ. 62.7 ಮತ್ತು ರಾಜ್ಯಗಳ ಪಾಲು ಶೇ. 37.3 ಎಂದು 15ನೇ ಹಣಕಾಸು ಆಯೋಗವು ಗಮನಿಸಿದೆ. ಮತ್ತೊಂದೆಡೆ, ವೆಚ್ಚದ ಹೊರೆಯಲ್ಲಿ ರಾಜ್ಯಗಳು ಶೇ. 62.4 ಮತ್ತು ಒಕ್ಕೂಟವು ಶೇ. 37.6ರಷ್ಟು ಹೊರೆಯ ಜವಾಬ್ದಾರಿಯನ್ನು ಹೊಂದಿವೆ. (ಉಲ್ಲೇಖ: 15ನೇ ಹಣಕಾಸು ಆಯೋಗದ ಅಂತಿಮ ವರದಿ). ಅಧ್ಯಾಯ 6, ಪುಟ 150).

4. ಹಲವು ಹಣಕಾಸು ಆಯೋಗಗಳು ರಾಜ್ಯಗಳ ಬೇಡಿಕೆಗಳಿಗೆ ಅನುಗುಣವಾಗಿ ಅಲ್ಲದಿದ್ದರೂ ವಿವಿಧ ಪ್ರಮಾಣದಲ್ಲಿ ರಾಜ್ಯಗಳ ಪಾಲನ್ನು ಶಿಫಾರಸು ಮಾಡಿವೆ. ಆ ಶಿಫಾರಸುಗಳನ್ನು ಸಹ ಕೇಂದ್ರ ಸರ್ಕಾರ ಜಾರಿಗೆ ತಂದಿಲ್ಲ. ಉದಾಹರಣೆಗೆ, 13ನೇ ಹಣಕಾಸು ಆಯೋಗ ಶೇ. 32, 14ನೇ ಆಯೋಗ ಶೇ. 42 ಮತ್ತು 15ನೇ ಆಯೋಗ ಶೇ. 41 ಶಿಫಾರಸು ಮಾಡಿದ್ದರೆ, ಕರ್ನಾಟಕ ರಾಜ್ಯವು ಅನುಕ್ರಮವಾಗಿ ಶೇ. 28, ಶೇ. 35 ಮತ್ತು ಶೇ. 30ರಷ್ಟನ್ನು ಮಾತ್ರ ಪಡೆದಿದೆ. ಇದು ಶಿಫಾರಸುಗಳ ಸಂಪೂರ್ಣ ಉಲ್ಲಂಘನೆಯಾಗಿದೆ.

5. ಕೇಂದ್ರ ತೆರಿಗೆಗಳನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳಲು ನ್ಯಾಯೋಚಿತ ತತ್ವವನ್ನು ರೂಪಿಸುವುದು ಅತ್ಯಗತ್ಯ. ರಾಜ್ಯಗಳಿಗೆ ವರ್ಗಾಯಿಸುವ ಕೇಂದ್ರ ತೆರಿಗೆಗಳು ಮತ್ತು ಕೇಂದ್ರ ತೆರಿಗೆಗಳಲ್ಲಿ ರಾಜ್ಯಗಳ ಪಾಲು ಸೇರಿದಂತೆ ರಾಜ್ಯ ತೆರಿಗೆಗಳು ಕ್ರಮವಾಗಿ ಕೇಂದ್ರ ಮತ್ತು ರಾಜ್ಯಗಳು ಮಾಡಿದ ಅಭಿವೃದ್ಧಿ ವೆಚ್ಚಗಳಿಗೆ ಅನುಗುಣವಾಗಿರಬೇಕು.

6. ಈ ತತ್ವದ ಆಧಾರದ ಮೇಲೆ, ಕೇಂದ್ರ ತೆರಿಗೆಗಳ ಒಟ್ಟು ಸಂಗ್ರಹದಲ್ಲಿ ರಾಜ್ಯಗಳ ಪಾಲನ್ನು ಶೇ. 50ಕ್ಕೆ ಹೆಚ್ಚಿಸಲು 16ನೇ ಹಣಕಾಸು ಆಯೋಗವು ದಿಟ್ಟ ಹೆಜ್ಜೆ ಇಡಬೇಕಾಗಿದೆ. ಕೇಂದ್ರ ತೆರಿಗೆಯ ಶೇ.50 ಅನ್ನು ರಾಜ್ಯಗಳಿಗೆ ವರ್ಗಾಯಿಸುವುದನ್ನು ತುರ್ತು ಆಧಾರದ ಮೇಲೆ ಮಾಡಬೇಕಾಗಿದೆ.

7. ಜಿಎಸ್‌ಟಿ ಜಾರಿಗೆ ಬಂದ ನಂತರ ತೆರಿಗೆ ಆದಾಯವನ್ನು ನಿರ್ಧರಿಸುವ ರಾಜ್ಯ ಸರ್ಕಾರದ ಅಧಿಕಾರಗಳು ಕೊನೆಗೊಂಡಿವೆ. ಜಿಎಸ್‌ಟಿ ನಿಗದಿ ಪಡಿಸಿದ ಆದಾಯ ಮತ್ತು ಜಿಎಸ್‌ಟಿ ನೈಜ ಸಂಗ್ರಹದ ವ್ಯತ್ಯಾಸವನ್ನು ಸರಿದೂಗಿಸುವ ಕೇಂದ್ರ ಸರ್ಕಾರದ ಭರವಸೆಯು ರಾಜ್ಯಕ್ಕೆ ದುಃಸ್ವಪ್ನವಾಗಿ ಪರಿಣಮಿಸಿದೆ. 2017–18 ಮತ್ತು 2023–24ರ ನಡುವೆ ಕರ್ನಾಟಕವು ಶೇ. 34 ಜಿಎಸ್‌ಟಿ ಆದಾಯವನ್ನು ಕಳೆದುಕೊಂಡಿದೆ. ಒಕ್ಕೂಟ ಸರ್ಕಾರವು ರಾಜ್ಯಗಳಿಗೆ ವ್ಯತ್ಯಾಸವನ್ನು ತುಂಬಿಕೊಡುವುದನ್ನು ಮುಂದುವರಿಸುವುದು ಅಗತ್ಯವಾಗಿದೆ.

8. ಸೆಸ್ ಮತ್ತು ಸರ್ಚಾರ್ಜ್: ಒಕ್ಕೂಟ ಸರ್ಕಾರದ ಸೆಸ್ ಮತ್ತು ಸರ್ಚಾರ್ಜ್‌ಗಳು ವಿಭಜಿಸುವ ಮೊತ್ತದ (Divisible Pool) ಭಾಗವಾಗಿರುವುದಿಲ್ಲ. ಇದು ನಮ್ಮ ಫೆಡರಲ್ ಹಣಕಾಸಿನ ವ್ಯವಸ್ಥೆಯ ಬಗ್ಗೆ ಬಹಳ ಅಪಾಯಕಾರಿ ವಿಷಯವಾಗಿದೆ. ಇಂದು ಈ ಎರಡರ ಆದಾಯವು ಒಕ್ಕೂಟದ ಒಟ್ಟು ತೆರಿಗೆ ಆದಾಯದ ಸುಮಾರು ಶೇ. 30ರಷ್ಟಿದೆ. ಪ್ರತಿ ವರ್ಷ ಕೇಂದ್ರ ಸರ್ಕಾರವು ಉದ್ದೇಶಪೂರ್ವಕವಾಗಿ ಈ ಎರಡರ ಪಾಲನ್ನು ಹೆಚ್ಚಿಸುವಲ್ಲಿ ತೊಡಗಿದೆ. ಉದಾಹರಣೆಗೆ, 2014–15ರಲ್ಲಿ ಒಟ್ಟು ತೆರಿಗೆ ಆದಾಯದಲ್ಲಿ ಈ ಎರಡರ ಪಾಲನ್ನು 1,67,960 ಕೋಟಿ ರೂ., 2019–20 ರಲ್ಲಿ ಇದು 2,55,275 ಕೋಟಿ ರೂ. ಮತ್ತು 2023–24ರಲ್ಲಿ 5,98,069 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಕೇಂದ್ರ ಸರ್ಕಾರದ ಇಂತಹ ಏಕಸ್ವಾಮ್ಯದಿಂದಾಗಿಯೇ ಕರ್ನಾಟಕ ಸರ್ಕಾರವು 2017–18 ಮತ್ತು 2023–24ರ ನಡುವೆ ಸುಮಾರು 53,382 ಕೋಟಿ ರೂ.ಗಳನ್ನು ಕಳೆದುಕೊಂಡಿದೆ. ಇದು ಸಂವಿಧಾನದ ಒಕ್ಕೂಟ ಮನೋಭಾವಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ.

9. ಸೆಸ್ ಮತ್ತು ಸರ್ಚಾರ್ಜ್‌ಗಳನ್ನು ವಿಭಜಿಸುವ ಮೊತ್ತದ ಭಾಗವಾಗಿ ಸೇರಿಸಲು ಬಲವಾಗಿ ಶಿಫಾರಸು ಮಾಡುವಂತೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ 16ನೇ ಹಣಕಾಸು ಆಯೋಗವನ್ನು ಒತ್ತಾಯಿಸುತ್ತದೆ. ಸೆಸ್ ಮತ್ತು ಸರ್ಚಾರ್ಜ್‌ಗಳ ಆದಾಯವನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೊಳ್ಳಲು 16ನೇ ಹಣಕಾಸು ಆಯೋಗವು ಅನುಚ್ಛೇದ 270ರ ತಿದ್ದುಪಡಿಯನ್ನು ಶಿಫಾರಸು ಮಾಡಬೇಕು.

10. 2011ರ ಜನಗಣತಿಯ ಮಾನದಂಡಗಳು ಮತ್ತು 15ನೇ ಹಣಕಾಸು ಸಮಿತಿಯು ಸೂಚಿಸಿದಂತೆ ಸಾಮಾಜಿಕ ಕ್ಷೇತ್ರಗಳಲ್ಲಿ ಮಾಡಿದ ಪ್ರಗತಿಯನ್ನು ತೆಗೆದುಕೊಂಡರೆ, ಕರ್ನಾಟಕವು ಸಮತಲ ವಿಕೇಂದ್ರೀಕರಣದಲ್ಲಿ ಹೊಡೆತ ಅನುಭವಿಸಿದೆ ಮತ್ತು 1.066 ವೇಟೇಜ್ ಪಾಯಿಂಟುಗಳ ನಿವ್ವಳ ನಷ್ಟವನ್ನು ಅನುಭವಿಸಿದೆ. ದಕ್ಷಿಣದ ಬಹುತೇಕ ರಾಜ್ಯಗಳ ಸ್ಥಿತಿಯೂ ಇದೇ ಆಗಿದೆ. 16ನೇ ಹಣಕಾಸು ಆಯೋಗವು ಸಾಮಾಜಿಕ ಮತ್ತು ಮಾನವ ಅಭಿವೃದ್ಧಿ ಸೂಚಕಗಳಲ್ಲಿನ ಸಾಧನೆಗಳಿಗಾಗಿ ರಾಜ್ಯವನ್ನು ಶಿಕ್ಷಿಸದೆ ಹೊಸ ವಿಧಾನವನ್ನು ರೂಪಿಸಬೇಕು.

11. ಕೇಂದ್ರ ಪ್ರಾಯೋಜಿತ ಯೋಜನೆಗಳ ಪ್ರಸರಣ, ಅವುಗಳ ವಿನ್ಯಾಸ ಮತ್ತು ಅನುಷ್ಠಾನವನ್ನು ರಾಜ್ಯ ಸರ್ಕಾರಗಳೊಂದಿಗೆ ಸಾಕಷ್ಟು ಸಮಾಲೋಚಿಸದೆ ಕೇಂದ್ರವು ಏಕಪಕ್ಷೀಯವಾಗಿ ನಿರ್ಧರಿಸುವುದು ಮತ್ತೊಂದು ಗಂಭೀರ ಸಮಸ್ಯೆಯಾಗಿದೆ. ಈ ಯೋಜನೆಗಳ ಈ ಅತಿಯಾದ ಕೇಂದ್ರೀಕೃತ ಮತ್ತು ಕಟ್ಟುನಿಟ್ಟಾದ ಸ್ವರೂಪಗಳು ಅನೇಕ ವೇಳೆ ರಾಜ್ಯಗಳ ನಿರ್ದಿಷ್ಟ ಅಗತ್ಯಗಳಿಗೆ ಸೂಕ್ತವಾಗಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಇಂತಹ ಯೋಜನೆಗಳ ಹಿಂದಿನ ವೆಚ್ಚದ ಹೆಚ್ಚಿನ ಭಾಗವನ್ನು ರಾಜ್ಯ ಸರ್ಕಾರಗಳು ಭರಿಸಬೇಕಾಗಿರುವುದರಿಂದ, ರಾಜ್ಯಗಳು ತಮ್ಮದೇ ಆದ ಆದ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮದೇ ಆದ ಸಂಪನ್ಮೂಲಗಳನ್ನು ಸರಿಯಾಗಿ ಹಂಚಿಕೆ ಮಾಡುವುದು ಕಷ್ಟಕರವಾಗಿದೆ. ಇದಲ್ಲದೆ, ರಾಜ್ಯಗಳ ಸ್ವಾಯತ್ತತೆಗೆ ಅಡ್ಡಿಪಡಿಸುವ ಷರತ್ತುಗಳನ್ನು ಈ ಯೋಜನೆಗಳ ಮೂಲಕ ಆಗಾಗ್ಗೆ ವಿಧಿಸಲಾಗುತ್ತದೆ.

12. 1996ರ ಮೇ 4ರಂದು ಆಗಿನ ಪ್ರಧಾನಿಯವರು ಕರೆದಿದ್ದ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ರಾಜ್ಯ ಪಟ್ಟಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದ ಎಲ್ಲ ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ನಿಧಿಯೊಂದಿಗೆ ರಾಜ್ಯಗಳಿಗೆ ವರ್ಗಾಯಿಸಲು ನಿರ್ಧರಿಸಲಾಯಿತು. ಅಂದಿನಿಂದ, ಈ ನಿಟ್ಟಿನಲ್ಲಿ ಹಲವಾರು ಪ್ರಯತ್ನಗಳನ್ನು ನಡೆಸಲಾಗಿದ್ದರೂ, ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಪರಿಹರಿಸಲಾಗಿಲ್ಲ. ಬದಲಾಗಿ, ಹೆಚ್ಚೆಚ್ಚು ಷರತ್ತುಗಳನ್ನು ಲಗತ್ತಿಸುವುದರೊಂದಿಗೆ ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ.

13. ಸಂವಿಧಾನದ ಒಕ್ಕೂಟ ತತ್ವವನ್ನು ಕೇಂದ್ರ ಸರ್ಕಾರ ಪಾಲಿಸಬೇಕು. ಒಕ್ಕೂಟ ಸರ್ಕಾರವು ಒಕ್ಕೂಟ ವ್ಯವಸ್ಥೆಯ ಹಣಕಾಸಿನ ಕರ್ತವ್ಯಗಳು ಮತ್ತು ರಾಜ್ಯಗಳ ಹಕ್ಕುಗಳನ್ನು ಅತಿಕ್ರಮಿಸುತ್ತಿರುವುದು ದುರದೃಷ್ಟಕರ. ರಾಜ್ಯಗಳು ಜಾರಿಗೆ ತರಬೇಕಾದ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರದ ಹಣಕಾಸಿನ ಪಾಲನ್ನು ಕಡಿತಗೊಳಿಸಲಾಗಿದೆ. ಇದರ ಪರಿಣಾಮವಾಗಿ, ರಾಜ್ಯಗಳ ಮೇಲಿನ ಹಣಕಾಸಿನ ಹೊರೆ ದೊಡ್ಡ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಉದಾಹರಣೆಗೆ, ICDS ನಲ್ಲಿ ರಾಜ್ಯಗಳ ಪಾಲು 2014ಕ್ಕಿಂತ ಮೊದಲು ಶೇ. 40 ಇದ್ದದ್ದು ಈಗ ಶೇ. 60ಕ್ಕೆ ಏರಿದೆ, ಆದರೆ ಕೇಂದ್ರವು ತನ್ನ ಪಾಲನ್ನು ಶೇ. 60ರಿಂದ ಶೇ. 40ಕ್ಕೆ ಇಳಿಸಿದೆ.

14. ಕರ್ನಾಟಕದಲ್ಲಿ PMAY–ಗ್ರಾಮೀಣ (ಪ್ರಧಾನ ಮಂತ್ರಿ ಆವಾಸ್ ಯೋಜನೆ–ಗ್ರಾಮೀಣ) ಯೋಜನೆಯಲ್ಲಿ, 2019–20 ಮತ್ತು 2023–24 ರಲ್ಲಿ ರಾಜ್ಯ ಸರ್ಕಾರದ ಪಾಲು ಶೇ. 93.41 ಆಗಿದ್ದರೆ, ಕೇಂದ್ರ ಸರ್ಕಾರದ ಪಾಲು ಶೇ. 6.59 ಆಗಿದೆ. PMAY–ನಗರ (ಪ್ರಧಾನ ಮಂತ್ರಿ ಆವಾಸ್ ಯೋಜನೆ–ನಗರ) ಯೋಜನೆಯಲ್ಲಿ ಇದು ಇದೇ ಅವಧಿಯಲ್ಲಿ ಕ್ರಮವಾಗಿ ಶೇ. 62.76 ಮತ್ತು ಶೇ. 37.24 ಆಗಿದೆ. 2023–24ರಲ್ಲಿ ಪಿಎಂ ಜನ ಆರೋಗ್ಯ ಮಿಷನ್ ನಲ್ಲಿ ರಾಜ್ಯದ ಪಾಲು ಶೇ. 77.97 ಮತ್ತು ಕೇಂದ್ರದ ಪಾಲು ಶೇ. 22.03 ರಷ್ಟಿದೆ. 2023–24ರಲ್ಲಿ ಜಲ ಜೀವನ್ ಮಿಷನ್‌ನಲ್ಲಿ ರಾಜ್ಯದ ಪಾಲು ಶೇ. 58.03 ಮತ್ತು ಕೇಂದ್ರದ ಪಾಲು ಶೇ. 41.97 ಆಗಿದೆ. ಇತರ ಅನೇಕ ಕಾರ್ಯಕ್ರಮಗಳು ಈ ರೀತಿಯ ಕಡಿತವನ್ನು ಎದುರಿಸುತ್ತಿವೆ.

15. ರಾಜ್ಯ ಪಟ್ಟಿಯ ಅಡಿಯಲ್ಲಿ ಬರುವ ಎಲ್ಲಾ ಕೇಂದ್ರ ಪ್ರಾಯೋಜಿತ ಯೋಜನೆಗಳು ಮತ್ತು ಪಂಚಾಯತಿಗಳು ಮತ್ತು ಪುರಸಭೆಗಳ ಅಡಿಯಲ್ಲಿ ಬರುವ ಯೋಜನೆಗಳನ್ನು ಸಾಕಷ್ಟು ಹಣದೊಂದಿಗೆ ರಾಜ್ಯಗಳಿಗೆ ವರ್ಗಾಯಿಸಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ. ಈ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಚರ್ಚೆಗಳ ಆಧಾರದ ಮೇಲೆ ವಿಶಾಲ ಮಾರ್ಗಸೂಚಿಗಳನ್ನು ರೂಪಿಸಬಹುದು. ಆದಾಗ್ಯೂ, ಯೋಜನೆಗಳ ರಚನೆ ಮತ್ತು ಅನುಷ್ಠಾನವನ್ನು ಹಣದ ವರ್ಗಾವಣೆಯೊಂದಿಗೆ ರಾಜ್ಯಗಳಿಗೆ ಬಿಡಬೇಕು. ವಿಕೇಂದ್ರೀಕರಣವನ್ನು ಖಚಿತಪಡಿಸುವುದರ ಜೊತೆಗೆ, ಕೇಂದ್ರ ಯೋಜನೆಗಳನ್ನು ರಾಜ್ಯಗಳಿಗೆ ವರ್ಗಾಯಿಸುವುದರಿಂದ ಕಾರ್ಯಕ್ರಮ ಅನುಷ್ಠಾನದ ವೆಚ್ಚ ಕಡಿಮೆಯಾಗುತ್ತದೆ ಮತ್ತು ಒಕ್ಕೂಟದ ಸಂಪನ್ಮೂಲಗಳನ್ನು ಉಳಿಸುತ್ತದೆ.

16. ಕೇಂದ್ರ ಪ್ರಾಯೋಜಿತ ಯೋಜನೆಗಳ ಪ್ರಸರಣವು ಪಂಚಾಯತಿಗಳು ಮತ್ತು ಮುನಿಸಿಪಾಲಿಟಿಗಳ ಕಾರ್ಯಾಚರಣೆಯ ಕ್ಷೇತ್ರಕ್ಕೆ ಒಕ್ಕೂಟ ಸರ್ಕಾರದ ಒಳ ನುಸುಳುವಿಕೆಯನ್ನು ಅರ್ಥೈಸುತ್ತದೆ. ಕೆಲವು ಸಂದರ್ಭಗಳಲ್ಲಿ ರಾಜ್ಯ ಸರ್ಕಾರಗಳನ್ನು ಕಡೆಗಣಿಸಿ ಕೇಂದ್ರದಿಂದ ಸ್ಥಳೀಯ ಸಂಸ್ಥೆಗಳಿಗೆ ನೇರ ಹಣಕಾಸಿನ ನಿಬಂಧನೆಗಳನ್ನು ಮಾಡಲಾಗುತ್ತದೆ. ಇದು ವಿಕೇಂದ್ರೀಕರಣದ ಅತ್ಯಂತ ಕೇಂದ್ರೀಕೃತ ಕಲ್ಪನೆಗೆ ಸಮನಾಗಿದೆ. ಅಂತಹ ಸಂದರ್ಭಗಳಲ್ಲಿ ನಿಜವಾದ ನಿರ್ಧಾರಗಳನ್ನು ರಾಜ್ಯಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ವಹಿಸುವ ಬದಲು ಕೇಂದ್ರದಲ್ಲಿ ಮಾಡಲಾಗುತ್ತದೆ ಮತ್ತು ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳುವ ಮಾದರಿಯನ್ನು ಕೇಂದ್ರದಿಂದ ನಿರ್ಧರಿಸುವ ಪ್ರಯತ್ನಗಳು ಇದರಲ್ಲಿವೆ. ವಿಕೇಂದ್ರೀಕರಣದ ಈ ವಿಕೃತ ದೃಷ್ಟಿಕೋನವನ್ನು ಉತ್ತೇಜಿಸಬಾರದು ಮತ್ತು ಸ್ಥಳೀಯ ಸಂಸ್ಥೆಗಳು ಕಾರ್ಯನಿರ್ವಹಿಸಬಹುದಾದ ಒಟ್ಟಾರೆ ಸಂದರ್ಭವನ್ನು ರಚಿಸುವ ಸ್ವಾತಂತ್ರ್ಯವನ್ನು ರಾಜ್ಯಗಳಿಗೆ ನೀಡಬೇಕು. ಜಿಡಿಪಿ ಅಥವಾ (ಕೇಂದ್ರ ಮತ್ತು ರಾಜ್ಯಗಳ) ಸಂಯೋಜಿತ ಸರ್ಕಾರಿ ವೆಚ್ಚದ ಆಧಾರದಲ್ಲಿ ಪಂಚಾಯತ್ ಮತ್ತು ಮುನಿಸಿಪಾಲಿಟಿಗಳ ವೆಚ್ಚದ ಕಡ್ಡಾಯ ಕನಿಷ್ಠ ಮಟ್ಟದ ಗುರಿಯನ್ನು ಹಣಕಾಸು ಆಯೋಗವು ನಿಗದಿಪಡಿಸಬೇಕಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯಾಗುವ ಕೇಂದ್ರ ಅನುದಾನವನ್ನು ಕಡ್ಡಾಯವಾಗಿ ರಾಜ್ಯ ಸರ್ಕಾರಗಳ ಮೂಲಕವೇ ರವಾನಿಸಬೇಕು.

17. ರಾಜ್ಯಗಳ ಮಾರುಕಟ್ಟೆ ಸಾಲ: ಮಾರುಕಟ್ಟೆ ಸಾಲಕ್ಕೆ ಸಂಬಂಧಿಸಿದಂತೆ ರಾಜ್ಯಗಳಿಗೆ ಹೆಚ್ಚಿನ ನಮ್ಯತೆ ಮತ್ತು ಸ್ವಾಯತ್ತತೆಯನ್ನು ಒದಗಿಸಲು ಸಂವಿಧಾನದ 293ನೇ ವಿಧಿಯನ್ನು ತಿದ್ದುಪಡಿ ಮಾಡಬೇಕು. FRBM (ಫಿಸ್ಕಲ್ ರೆಸ್ಪಾನ್ಸಿಬಿಲಿಟಿ ಅಂಡ್ ಬಜೆಟ್ ಪುಟ 6 ಕ್ಕೆ





ಕಾಮ್ರೆಡ್ ಎಸ್.ಸೂರ್ಯನಾರಾಯಣ ರಾವ್ ಅವರ ಜನ್ಮ ಶತಮಾನೋತ್ಸವ

ಸಮರಧೀರ ಐಕ್ಯ ಹೋರಾಟಗಳಲ್ಲಿ ಕಾಂ.ಸೂರಿಯವರ ಪರಂಪರೆಯನ್ನು ಮುನ್ನಡೆಸಿ: ತಪನ್ ಸೇನ್

ವಸಂತರಾಜ್ ಎನ್.ಕೆ.

"ಕಾರ್ಮಿಕ ವರ್ಗದ ರಾಜಿಯಿಲ್ಲದ ಸಮರಧೀರ ಐಕ್ಯ ಹೋರಾಟಗಳನ್ನು ಮುನ್ನಡೆಸುವಲ್ಲಿ ನಾವು ಕಾಂ. ಸೂರಿಯವರ ಪರಂಪರೆಯನ್ನು ಮುಂದುವರಿಸಬೇಕಾಗಿದೆ" ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಮತ್ತು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಕಾಂ. ತಪನ್ ಸೇನ್ ಕರೆ ನೀಡಿದರು. ಆಗಸ್ಟ್ 24 ರಂದು "ಕಾರ್ಮಿಕ ವರ್ಗದ ಚಳವಳಿ ಮತ್ತು ಕರ್ನಾಟಕದ ಅಭಿವೃದ್ಧಿ" ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರಿನ ಟೌನ್ ಹಾಲ್‌ನಲ್ಲಿ 'ಕಾಮ್ರೇಡ್ ಎಸ್.ಸೂರ್ಯನಾರಾಯಣ ರಾವ್ ಶತಮಾನೋತ್ಸವ ಆಚರಣಾ ಸಮಿತಿ' ವತಿಯಿಂದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಕಾಂ. ಎಸ್.ಸೂರ್ಯನಾರಾಯಣ ರಾವ್ ಅವರು ರಾಜ್ಯದ ಪ್ರಮುಖ ಟ್ರೇಡ್ ಯೂನಿಯನ್ ಮತ್ತು ಕಮ್ಯೂನಿಸ್ಟ್ ನಾಯಕರಾಗಿದ್ದರು ಮತ್ತು ಸಿಐಟಿಯು ಕರ್ನಾಟಕದ ಸ್ಥಾಪಕ ಅಧ್ಯಕ್ಷರಾಗಿದ್ದರು. ಅವರು 1990ರ ದಶಕದ ಅಂತ್ಯದಲ್ಲಿ ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮತ್ತು ಕೇಂದ್ರ ಸಮಿತಿ ಸದಸ್ಯರಾಗಿದ್ದರು. ಇದು ಕಾಂ. ಸೂರಿಯವರ ಜನ್ಮ ಶತಮಾನೋತ್ಸವದ ಎರಡನೇ ಕಾರ್ಯಕ್ರಮವಾಗಿದೆ.

ರಾಜಿಯಾಗದ ಸಮರದೀರ ನಾಯಕತ್ವ

ಕಾಂ. ಸೂರಿಯವರ ರಾಜಿಯಾಗದ ಸಮರದೀರ ನಾಯಕತ್ವದ ಗುಣವು, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ದ ಹೋರಾಡುವ ಮತ್ತು ಅದನ್ನು ಬೇರುಸಹಿತ ಕಿತ್ತುಹಾಕುವ ಮತ್ತು ಬದಲಾಯಿಸುವ ಅವರ ಸೈದ್ಧಾಂತಿಕ ಬದ್ಧತೆಯಿಂದ ಬಂದಿದೆ ಎಂದು ಕಾಂ. ತಪನ್ ಸೇನ್ ಪ್ರತಿಪಾದಿಸಿದರು. ದುಡಿಯುವ ವರ್ಗ ದಿನನಿತ್ಯ ಎದುರಿಸುತ್ತಿರುವ ಸಮಸ್ಯೆಗಳ ಹಿಂದೆ ಬಂಡವಾಳಶಾಹಿ ವರ್ಗ ಮತ್ತು ಅದು ಅನುಸರಿಸುವ ನೀತಿಗಳಿವೆ ಎಂಬ ತಿಳುವಳಿಕೆಯಿಂದ ಸಹ ಅವರ ಬದ್ಧತೆ ಬಂದಿದೆ ಎಂದು ಕಾಂ. ತಪನ್ ಸೇನ್ ಹೇಳಿದರು.

ಕೈನೆಸಿಯನ್ ಅಭಿವೃದ್ಧಿ ಮಾದರಿಯ (Keynesian Development model) ಒಮ್ಮತದ ಅವಧಿಯ ನಂತರದ ಭಾರತದ ಅಭಿವೃದ್ಧಿಯ ಹಂತದಲ್ಲಿ ಸಿಐಟಿಯು ಹುಟ್ಟಿಕೊಂಡಿತು. ಈ ಹಂತದಲ್ಲಿ ಕಾರ್ಮಿಕ ವೆಚ್ಚವನ್ನು ಕನಿಷ್ಟಗೊಳಿಸುವತ್ತ ಮತ್ತು ಲಾಭವನ್ನು ಗರಿಷ್ಠಗೊಳಿಸುವತ್ತ ಗುರಿಯನ್ನು ಬಂಡವಾಳಶಾಹಿ ವರ್ಗ ಪ್ರತಿಪಾದಿಸುತ್ತಾ ತನ್ನ ಬಲದ ಕ್ರೋಢೀಕರಣಕ್ಕೆ ಪ್ರಯತ್ನಿಸುತ್ತಿತ್ತು. ಸಿಐಟಿಯು ಮತ್ತು ಅದರ ಸ್ಥಾಪಕರಲ್ಲಿ ಒಬ್ಬರಾಗಿದ್ದ ಕಾಂ. ಸೂರಿ ಈ ಅವಧಿಯಲ್ಲಿ ಪ್ರವರ್ಧಮಾನಕ್ಕೆ ಬಂದರು. ಹಿಂದಿನ ಹಂತದ ರಾಜಕೀಯ ಅಭಿವ್ಯಕ್ತಿಯು ಕಲ್ಯಾಣ ರಾಜ್ಯವಾಗಿತ್ತು. ಇದು ಸ್ವಾತಂತ್ರ್ಯ ಹೋರಾಟದ ಅಂತಿಮ ಹಂತದೊಂದಿಗೆ



ಪ್ರಾರಂಭವಾಯಿತು ಮತ್ತು ಸ್ವಾತಂತ್ರ್ಯದ ನಂತರದ ದಶಕದ ಆರಂಭದಲ್ಲಿ ಮುಂದುವರೆಯಿತು. ಈ ಹಂತದಲ್ಲಿ ಹೆಚ್ಚಿನ ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಲಾಯಿತು ಮತ್ತು ಸಮಾಜದಲ್ಲಿ ಕಾರ್ಮಿಕರ ಪಾತ್ರವನ್ನು ಗುರುತಿಸಲಾಯಿತು ಎಂದು ಕಾಂ. ಸೇನ್ ವಿವರಿಸಿದರು.

ಮೊದಲ ಹಂತದ ಅಂತ್ಯದ ವೇಳೆಗೆ, ರಾಜಕೀಯವನ್ನು ದೂರವಿಡುವ ಹೆಸರಿನಲ್ಲಿ ಅನೇಕ ಟ್ರೇಡ್ ಯೂನಿಯನ್‌ಗಳು ರಾಜಿ ಮಾತುಕತೆ ಮತ್ತು ಸಹಯೋಗದಲ್ಲಿ ಕಳೆದುಹೋಗಿದ್ದವು. ಕಾಂ. ಸೂರಿ ಮತ್ತು ಸಿಐಟಿಯು ಬಂಡವಾಳಶಾಹಿ ವರ್ಗ ಮತ್ತು ಪ್ರಭುತ್ವವನ್ನು ಎದುರಿಸುವ ರಾಜಿಯಾಗದ ಸಮಧೀರ ವರ್ಗಹೋರಾಟದೊಂದಿಗೆ 1960ರ ದಶಕದ ಮಧ್ಯಭಾಗದಿಂದ ಪ್ರಾರಂಭವಾಗುವ ಎರಡನೇ ಹಂತಕ್ಕೆ ಪ್ರತಿಕ್ರಿಯಿಸಿದರು. ಕಾಂ. ಸೂರಿ ನೇತೃತ್ವದ ಬೆಂಗಳೂರು ಮೂಲದ ಸಾರ್ವಜನಿಕ ವಲಯದ ಮತ್ತು ಮೈಕೊ, ಐಟಿಸಿ ಯಂತಹ ಪ್ರಮುಖ ಖಾಸಗಿ ಕಾರ್ಖಾನೆಗಳ ಸಮರಧೀರ ಮುಷ್ಕರ, ಹೋರಾಟಗಳು ರಾಷ್ಟ್ರೀಯವಾಗಿ ಸಹ ಇಂತಹ ಹೋರಾಟಗಳಿಗೆ ಮಾದರಿಯಾದವು. ಕಾರ್ಮಿಕರ ವೇತನವನ್ನು ಉತ್ಪಾದಕತೆಗೆ ಜೋಡಿಸುವ ವಿರುದ್ಧದ ಹೋರಾಟವು ಒಂದು ನಿರ್ದಿಷ್ಟ ಉದಾಹರಣೆಯಾಗಿದೆ ಎಂದು ಕಾಂ. ಸೇನ್ ಮಾಹಿತಿ ನೀಡಿದರು.

ಅಭಿವೃದ್ಧಿಯಲ್ಲಿ ಕಾರ್ಮಿಕವರ್ಗದ ಚಳವಳಿಯ ಪಾತ್ರವನ್ನು ವಿವರಿಸಿದ ಕಾಂ. ತಪನ್ ಸೇನ್, 'ಸಮಾಜದಲ್ಲಿನ ಮೌಲ್ಯವು ಉತ್ಪಾದಿಸುವ (ಕಾರ್ಮಿಕರು ಮತ್ತು ರೈತರು) ವರ್ಗಗಳಿಂದ ಉತ್ಪತ್ತಿಯಾಗುತ್ತದೆ ಮತ್ತು ಉಳಿದವರು ಅದರ ಉಚಿತ ಪ್ರಯೋಜನವನ್ನು ಪಡೆಯುತ್ತಾರೆ' ಎಂದು ಹೇಳಿದರು.

ಕಾಂ. ಸೂರಿ ರಾಜಿಯಾಗದ ಹೋರಾಟಗಾರರಾಗಿದ್ದರು: ಸಿಎಂ

ಕಾಂ. ಸೂರಿ ಅವರೊಂದಿಗಿನ ತಮ್ಮ ಒಡನಾಟವನ್ನು ಸ್ಮರಿಸಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಅವರು ಅನುಭವಿ ಹಿರಿಯ ನಾಯಕರಾಗಿದ್ದರು, 1983ರಲ್ಲಿ ಕರ್ನಾಟಕ ವಿಧಾನಸಭೆಗೆ ನಾವಿಬ್ಬರೂ ಒಟ್ಟಿಗೇ ಮೊದಲ ಬಾರಿಗೆ ಪ್ರವೇಶಿಸಿದ್ದೆವು. ಕಾಂ. ಸೂರಿ ಅವರು ಶಾಸಕಾಂಗದ ಒಳಗೆ ಮತ್ತು ಹೊರಗೆ ರಾಜಿಯಾಗದ ಹೋರಾಟಗಾರರಾಗಿದ್ದರು. ಸೂರಿಯವರು ಕೇವಲ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮಾತ್ರವಲ್ಲ, ಸಮಾಜದ ಎಲ್ಲಾ ಸಮಸ್ಯೆಗಳ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡಿದರು. ಸದನದಲ್ಲಿ ಅವರ ಭಾಷಣಗಳಲ್ಲಿ ಅದರ ಹಿಂದಿನ ಅಧ್ಯಯನ ಮತ್ತು ಸಿದ್ಧತೆಯನ್ನು ನೋಡಬಹುದು. ಅವರು ಯಾವುದೇ ವಿಷಯದ ಬಗ್ಗೆ ವಿವಿಧ ಸಮಯಗಳಲ್ಲಿ ವಿವಿಧ ಪಾತ್ರಗಳಲ್ಲಿದ್ದ ನನ್ನ ಕಚೇರಿಗೆ ಬಂದಾಗಲೆಲ್ಲಾ ಅವರು ಸಮಸ್ಯೆಯನ್ನು ಪರಿಹರಿಸದ ಹೊರತು ಅಲ್ಲಿಂದ ಹೊರಡುತ್ತಿರಲಿಲ್ಲ" ಎಂದು ಅವರು ನೆನಪಿಸಿಕೊಂಡರು. ಸಿದ್ದರಾಮಯ್ಯನವರು ಸೂರಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಐತಿಹಾಸಿಕ ಹೋರಾಟಗಳಿಂದ ಸ್ಫೂರ್ತಿ ಪಡೆಯಬೇಕು: ಪ್ರೊ. ಜಾನಕಿ ನಾಯರ್

ವಿಚಾರ ಸಂಕಿರಣದ ಮುಖ್ಯ ಪ್ರಬಂಧ ಮಂಡಿಸಿ ಪ್ರೊ.ಜಾನಕಿ ನಾಯರ್ ಅವರು ಮಾತನಾಡಿದರು, 1930ರ ದಶಕದಲ್ಲಿ ಕೆಜಿಎಫ್‌ನ ಚಿನ್ನದ ಗಣಿ ಕಾರ್ಮಿಕರ ಸ್ವಯಂಪ್ರೇರಿತ ಹೋರಾಟದಿಂದ, ನಂತರದಲ್ಲಿ ಬೆಂಗಳೂರು ಹತ್ತಿ ಗಿರಣಿಗಳ ಕಾರ್ಮಿಕರ ಹೋರಾಟಗಳು, ಐತಿಹಾಸಿಕ ಮೈಕೊ ಕಾರ್ಮಿಕರ ಮತ್ತು ಸಾರ್ವಜನಿಕ ವಲಯದ ಮುಷ್ಕರ, ಇಂದಿನ ಗಿಗ್ ಕೆಲಸಗಾರರ ಪರಿಸ್ಥಿತಿಯವರೆಗೆ, ನಿರ್ದಿಷ್ಟ ಉದಾಹರಣೆಗಳೊಂದಿಗೆ ಕರ್ನಾಟಕದಲ್ಲಿ ನಡೆದ ಕಾರ್ಮಿಕರ ಚಳುವಳಿಯ ಹಾದಿಯನ್ನು ಗುರುತಿಸಿದರು. ಐತಿಹಾಸಿಕ ಕಾರ್ಮಿಕ ಹೋರಾಟಗಳಿಂದ ಸ್ಫೂರ್ತಿ ಪಡೆಯಬೇಕು ಮತ್ತು ವೈಫಲ್ಯಗಳಿಂದ ಕಲಿಯಬೇಕು ಮತ್ತು ಅವುಗಳ ಹಿಂದಿನ ದೌರ್ಬಲ್ಯಗಳನ್ನು ಗುರುತಿಸಬೇಕು ಎಂಬುದು ಕಾರ್ಮಿಕ ಇತಿಹಾಸಕಾರರಾಗಿ ತಮ್ಮ ಅಭಿಮತವೆಂದು ಒತ್ತಿ ಹೇಳಿದರು. ಕಾರ್ಮಿಕರ ಹೋರಾಟದ ಯಶಸ್ಸಿಗೆ ವರ್ಗದ ಆಧಾರದ ಮೇಲೆ ಸಜ್ಜುಗೊಳಿಸುವುದು ಮುಖ್ಯವಾದರೂ, ಲಿಂಗ, ಜಾತಿ, ಭಾಷೆಯ ಇತರ ಸಾಮಾಜಿಕ ವಾಸ್ತವಗಳನ್ನು ಗುರುತಿಸದಿರುವುದು ಅನೇಕ ದೌರ್ಬಲ್ಯಗಳು ಮತ್ತು ತಪ್ಪುಗಳಿಗೆ ಕಾರಣವಾಗಬಹುದು ಎಂದು ಅವರು ತಿಳಿಸಿದರು.

ಈ ನಿಟ್ಟಿನಲ್ಲಿ ಕೆಜಿಎಫ್ ಗಣಿ ಕಾರ್ಮಿಕರ ಜಾತಿ ಸಮಸ್ಯೆಗಳು, ಬೆಂಗಳೂರಿನ ಮಿಲ್‌ಗಳಲ್ಲಿ ಜಾತಿ ಮತ್ತು ಲಿಂಗ ಸಮಸ್ಯೆಗಳು, ಸಾರ್ವಜನಿಕ ವಲಯದ ಮುಷ್ಕರದಲ್ಲಿ ಭಾಷಾ ಸಮಸ್ಯೆಗಳ ಕುರಿತು ಅವರು ಮಾತನಾಡಿದರು. ಬ್ರಿಟಿಷ್ ಇಂಡಿಯಾ ಮತ್ತು ಮೈಸೂರು ರಾಜಪ್ರಭುತ್ವದ ಕಾರ್ಮಿಕ ಕಾನೂನುಗಳ ಇತಿಹಾಸವನ್ನು ಸಹ ಗುರುತಿಸಿದರು. ಗಿಗ್ ಕೆಲಸಗಾರರಂತಹ ಹೆಚ್ಚಿನ ಕಾರ್ಮಿಕರಿಗೆ 'ದಿನದ ಕೆಲಸದ ಅವಧಿ'ಯನ್ನು ವ್ಯಾಖ್ಯಾನಿಸುವ ಸ್ಥಿತಿಯಲ್ಲಿಲ್ಲ ಎಂದು ವಿಷಾದಿಸಿದ ಅವರು, ದಶಕಗಳ ಹಿಂದೆ ಗೆದ್ದಿದ್ದ 'ದಿನದ ಕೆಲಸದ ಅವಧಿ'ಯ ವಿಷಯದ ಬಗ್ಗೆ ಮತ್ತೆ ಹೋರಾಡಬೇಕಾದ ದುಃಖದ ಸ್ಥಿತಿಗೆ ಇಂದಿನ ದುಡಿಯುವ ವರ್ಗ ಬಂದಿದೆ ಎಂದರು.

ಕಾರ್ಮಿಕ ವರ್ಗದ ಚಳುವಳಿಯು ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ: ವಿಜೆಕೆ ನಾಯರ್

ಸಿಐಟಿಯು ಕರ್ನಾಟಕ ಉಪಾಧ್ಯಕ್ಷರಾದ ಕಾಂ. ವಿಜೆಕೆ ನಾಯರ್ ವಿಚಾರ ಸಂಕಿರಣದ ಅಧ್ಯಕ್ಷೀಯ ಭಾಷಣ ಮಾಡಿ, ಕಾರ್ಮಿಕ ವರ್ಗದ ಚಳುವಳಿ ಮತ್ತು ಕರ್ನಾಟಕದ ಅಭಿವೃದ್ಧಿಯ ನಡುವಿನ ಸಂಬಂಧದ ಹಲವು ಆಯಾಮಗಳನ್ನು ಅನಾವರಣಗೊಳಿಸಿದರು. ಮೂಲಭೂತ ಮಟ್ಟದಲ್ಲಿ, ಬಲವಾದ ಕಾರ್ಮಿಕವರ್ಗದ ಚಳುವಳಿಯು ಕಾರ್ಮಿಕರ ಆದಾಯದಲ್ಲಿ ಹೆಚ್ಚಳಕ್ಕೆ ಕಾರಣವಾಗುತ್ತದೆ, ಇದು ಸರಕು ಮತ್ತು ಸೇವೆಗಳ ಮಾರುಕಟ್ಟೆಯನ್ನು ವಿಸ್ತರಿಸುತ್ತದೆ, ಮೌಲ್ಯವರ್ಧನೆ ಮತ್ತು ಬಂಡವಾಳ ರಚನೆಗೆ ಕಾರಣವಾಗುತ್ತದೆ ಮತ್ತು ಹೆಚ್ಚಿನ ಉತ್ಪಾದನೆಯಲ್ಲಿ ಹೂಡಿಕೆಗೆ ಕಾರಣವಾಗುತ್ತದೆ, ಪುಟ 10 ಕ್ಕೆ

“ಲೈಂಗಿಕ ಹಿಂಸಾಚಾರವನ್ನು ಆವರಿಸಿರುವ ಮೌನವನ್ನು ಮುರಿಯಿರಿ”

ಕೋಲ್ಕತ್ತಾ, ಉತ್ತರಪ್ರದೇಶ, ಉತ್ತರಾಖಂಡ, ಮಹಾರಾಷ್ಟ್ರ, ಮಣಿಪುರ, ಗುಜರಾತ್ ಇತರೆಡೆಗಳಲ್ಲಿ ದೇಶಾದ್ಯಂತ ಕ್ರೂರ ಅತ್ಯಾಚಾರ ಮತ್ತು ಅತ್ಯಾಚಾರಿಗಳಿಗೆ ಅಭಯ ನೀಡುವ ಸಂಸ್ಕೃತಿಯ ಪ್ರಕರಣಗಳ ತುರ್ತು, ನಿಷ್ಪಕ್ಷಪಾತ ಮತ್ತು ಸ್ವತಂತ್ರ ತನಿಖೆಗೆ ಕಾರ್ಮಿಕ ಸಂಘಟನೆಗಳು, ಮಹಿಳಾ ಮತ್ತು ವಿದ್ಯಾರ್ಥಿ ಗುಂಪುಗಳು ಮತ್ತು ವ್ಯಕ್ತಿಗಳು ಸೇರಿದಂತೆ ೯೦೦ ಕ್ಕೂ ಹೆಚ್ಚು ಸಂಘಟನೆಗಳು ಒತ್ತಾಯಿಸಿವೆ.

“ಮಹಿಳೆಯರ ಹಕ್ಕುಗಳು ಇದೀಗಲೇ! ಕೋಲ್ಕತ್ತಾದಿಂದ ಮಣಿಪುರದಿಂದ, ಗುಜರಾತಿನಿಂದ, ಉತ್ತರಾಖಂಡದಿಂದ, ಬಿಹಾರದಿಂದ, ಉತ್ತರ ಪ್ರದೇಶದಿಂದ... ಲೈಂಗಿಕ ಹಿಂಸಾಚಾರದ ಕ್ರೂರ ಪ್ರಕರಣಗಳ ವಿರುದ್ಧ ನಾಗರಿಕರು ಮಾತನಾಡುತ್ತಾರೆ...

ತುರ್ತು, ಸ್ವತಂತ್ರ ಮತ್ತು ನಿಷ್ಪಕ್ಷಪಾತೀ ತನಿಖೆಗಳು ಮತ್ತು ಸಾಂಸ್ಥಿಕ ಹೊಣೆಗಾರಿಕೆಗೆ ಆಗ್ರಹಿಸುತ್ತಾರೆ!

ದುಷ್ಕರ್ಮಿಗಳು ಮತ್ತು ಅವರ ರಕ್ಷಕರ ರಕ್ಷಣೆ ಸಲ್ಲದು!

ಸಂತ್ರಸ್ತರಿಗೆ ಮತ್ತು ಅವರ ಕುಟುಂಬಗಳಿಗೆ ನ್ಯಾಯ ಸಿಗಬೇಕು!”

ಈ ಘೋಷಣೆಗಳೊಂದಿಗೆ ಈ ಸಂಘಟನೆಗಳು ಆಗಸ್ಟ್ 26 ರಂದು ಒಂದು ಜಂಟಿ ಹೇಳಿಕೆ ನೀಡಿವೆ.

“ಕೋಲ್ಕತ್ತಾದಲ್ಲಿ ಈ ಯುವತಿಯ ನೋವು ಮತ್ತು ಸಾವು ಇಂತಹ ಭಯಾನಕ ಘಟನೆಗಳ ಸರಣಿಯಲ್ಲಿ ಇತ್ತೀಚಿನದು ಎಂಬುದನ್ನು ನಾವು ಮರೆಯಬಾರದು. ಅವುಗಳಲ್ಲಿ ಪ್ರತಿಯೊಂದೂ ಪ್ರಭುತ್ವದ ಕರ್ತವ್ಯಲೋಪದ ಸಂಕೇತವಾಗಿದೆ. ಮಹಿಳೆಯರನ್ನು ರಕ್ಷಿಸಲು ರೂಪಿಸಲಾದ ಕಾನೂನುಗಳನ್ನು ಅವರ ಮನೆಗಳಲ್ಲಿ, ಬೀದಿಗಳಲ್ಲಿ, ಅವರ ಕೆಲಸದ ಸ್ಥಳಗಳಲ್ಲಿ–ನಿರ್ಭಯದಿಂದ ಉಲ್ಲಂಘಿಸಲಾಗಿದೆ. ಈ ಕಾನೂನುಗಳ ಅನುಷ್ಠಾನದ ಉಸ್ತುವಾರಿಯ ಮೇಲ್ವಿಚಾರಣೆ ಮಾಡುವ ಕಾರ್ಯವಿಧಾನಗಳು ಕಾಗದದ ಮೇಲೆ ಮಾತ್ರ ಅಸ್ತಿತ್ವದಲ್ಲಿವೆ. ಕೇಂದ್ರದಲ್ಲಾಗಲಿ ಅಥವಾ ರಾಜ್ಯಗಳಲ್ಲಾಗಲಿ–ಲೈಂಗಿಕ ಹಿಂಸಾಚಾರಕ್ಕೆ ಅನುವು ಮಾಡಿಕೊಡುವ ವಾತಾವರಣವನ್ನು ಸೃಷ್ಟಿಸುವುದು ಮತ್ತು ದುಷ್ಕರ್ಮಿಗಳು ಮುಕ್ತರಾಗಿ ಓಡಾಡುವಂತೆ ಖಚಿತಪಡಿಸದಿರುವುದು ಪ್ರಭುತ್ವವೇ” ಎಂದು ಈ ಹೇಳಿಕೆ ಖಾರವಾಗಿ ಹೇಳಿದೆ.

ಸಂಸ್ಥೆಗಳು, ಚುನಾಯಿತ ಪ್ರತಿನಿಧಿಗಳು, ಪೊಲೀಸ್ ಮತ್ತು ಅಧಿಕಾರಶಾಹಿಯ ವೈಫಲ್ಯಕ್ಕೆ ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಸುಪ್ರೀಂಕೋರ್ಟ್‌ನ ಮಧ್ಯಸ್ಥಿಕೆ ಸಹಾಯ ಮಾಡುತ್ತದೆ ಎಂದು ಹೇಳಿಕೆಯು ಆಶಿಸಿದೆ.

ಕೋಲ್ಕತ್ತಾದ ಆರ್‌ಜಿ ಕರ್ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನಲ್ಲಿ ವರದಿಯಾದ ವೈದ್ಯಕೀಯ ವೃತ್ತಿಯಲ್ಲಿ ತೊಡಗಿರುವವರ ಮೇಲೆ ಹೇಯ ಅತ್ಯಾಚಾರ ಮತ್ತು ಕೊಲೆ ಮತ್ತು ಅದನ್ನು ಮುಚ್ಚಿ ಹಾಕಲು ಸಂಸ್ಥೆಗಳು ಮತ್ತು ಅಧಿಕಾರಿಗಳು ನಡೆಸಿರುವ ಪ್ರಯತ್ನಗಳು ಸಾಮಾಜಿಕ ನಿಲುವುಗಳ ನಿರ್ಲಕ್ಷ್ಯ ಮತ್ತು ವ್ಯವಸ್ಥೆಯ ವೈಫಲ್ಯಗಳನ್ನು ನಿಷ್ಠುರವಾಗಿ ನೆನಪಿಸುತ್ತವೆ, ಅವು ವಾಸ್ತವವಾಗಿ ಅಂತಹ ಹಿಂಸಾಚಾರವನ್ನು ಶಾಶ್ವತಗೊಳಿಸುತ್ತವೆ. ಕೋಲ್ಕತ್ತಾ ಅತ್ಯಾಚಾರ ಮತ್ತು ಕೊಲೆಯ ಕೆಲವೇ ದಿನಗಳಲ್ಲಿ, ಉತ್ತರಾಖಂಡ, ಬಿಹಾರ ಮತ್ತು ಉತ್ತರ ಪ್ರದೇಶದಿಂದ ಹಲವಾರು ಭೀಕರ ಲೈಂಗಿಕ ದೌರ್ಜನ್ಯ ಪ್ರಕರಣಗಳು ವರದಿಯಾಗಿವೆ. ಪ್ರತಿಯೊಂದೂ, ದೇಶಾದ್ಯಂತ ಮಹಿಳೆಯರು ಮತ್ತು ಯುವತಿಯರ ಮೇಲಿನ ದೌರ್ಜನ್ಯವು ಅಡೆತಡೆಯಿಲ್ಲದೆ ಮುಂದುವರಿದಿದೆ ಎಂಬುದನ್ನು ಕಠೋರವಾಗಿ ಜ್ಞಾಪಿಸಿವೆ ಎಂದಿರುವ ಹೇಳಿಕೆ, ಚುನಾಯಿತ ಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು ಮತ್ತು ಕೆಲವು ರಾಜಕೀಯ ಪಕ್ಷಗಳು ನ್ಯಾಯ ಒದಗಿಸಲಿಕ್ಕಾಗಿ ಧಾವಿಸುವ ಬದಲು, ಅಥವ ಅಪರಾಧ ತನಿಖೆ, ಕಾನೂನು ಮತ್ತು ಆಡಳಿತದ ಜವಾಬುದಾರಿಕೆ ಇರುವ ವ್ಯವಸ್ಥೆಗಳು ತಮ್ಮ ಕೆಲಸ ಮಾಡುವಂತೆ ಖಚಿತಪಡಿಸುವ ಬದಲು, ಹೆಚ್ಚಾಗಿ ಪ್ರಕರಣಗಳನ್ನು ರಾಜಕೀಯ ಬಂಡವಾಳ ಮಾಡಿಕೊಳ್ಳಲು ಧಾವಿಸುತ್ತಿವೆ ಎಂದು ಖೇದ ವ್ಯಕ್ತಪಡಿಸಿದೆ.

“ಮಮತಾ ಬ್ಯಾನರ್ಜಿ ನೇತೃತ್ವದ ಪಶ್ಚಿಮ ಬಂಗಾಳ ಸರ್ಕಾರದ ಕ್ರಮಗಳು ಮತ್ತು ನಿಷ್ಕ್ರಿಯತೆಗಳನ್ನು ನಾವು ಖಂಡಿಸುತ್ತೇವೆ, ಅದು ಈ ವಿಷಯವನ್ನು ಆತ್ಮಹತ್ಯೆ ಪ್ರಕರಣ ಮತ್ತು ರಾಜಕೀಯ ಪಿತೂರಿ ಎಂದು ಮಬ್ಬುಗೊಳಿಸಲು ಪ್ರಯತ್ನಿಸುತ್ತಿದೆ” ಎಂದಿರುವ ಜಂಟಿ ಹೇಳಿಕೆ, ಪಶ್ಚಿಮ ಬಂಗಾಳ ಸರಕಾರದ ಕ್ರಮಗಳು ಇಂತಹ ಘೋರ ಅಪರಾಧಗಳನ್ನು ಎಸಗಿದ ಅಪರಾಧಿಗಳನ್ನು ಕಾನೂನಿನ ಒತ್ತಡ ಅಥವಾ ಭಯ ಏಕೆ ಕಾಡುವುದಿಲ್ಲ ಎಂಬುದನ್ನು ನಿಖರವಾಗಿ ಬಹಿರಂಗಪಡಿಸುತ್ತದೆ ಎಂದು ಹೇಳಿದೆ.

ಕೋಲ್ಕತ್ತಾ ಪ್ರಕರಣವನ್ನು ಈಗ ತನಿಖೆ ನಡೆಸುತ್ತಿರುವ ಕೇಂದ್ರೀಯ ತನಿಖಾ ದಳ (ಸಿಬಿಐ) ರಾಜಕೀಯ ಹಿತಾಸಕ್ತಿಗಳನ್ನು ಮೀರಿ ಮತ್ತು ನ್ಯಾಯಯುತ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಒತ್ತಾಯಿಸಿರುವ ಹೇಳಿಕೆ, ಒಕ್ಕೂಟ ಸರ್ಕಾರವು ಮಹಿಳೆಯರನ್ನು 'ರಕ್ಷಿಸಲು' ಹೆಚ್ಚು ಕಟ್ಟುನಿಟ್ಟಾದ ಕಾನೂನುಗಳನ್ನು ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಿರುವಾಗಲೇ, ಸಾಮೂಹಿಕ ಅತ್ಯಾಚಾರಿಗಳು ಮತ್ತು ಹಲವು ಕೊಲೆಗಳನ್ನು ಮಾಡಿದವರು ಎಂದು ಸಾಬೀತಾಗಿ ಶಿಕ್ಷೆಗೊಳಗಾದವರನ್ನು ವ್ಯವಸ್ಥಿತವಾಗಿ ಬಿಡುಗಡೆ ಮಾಡುತ್ತಿರುವಾಗ, ಮತ್ತು ತಪ್ಪಿತಸ್ಥರನ್ನು ಗೌರವಿಸುತ್ತಿರುವಾಗ ನ್ಯಾಯಯುತ ವಿಚಾರಣೆ ಮತ್ತು ಕಾನೂನಿನ ಅನುಷ್ಠಾನದ ಬೇಡಿಕೆಯು ಹೆಚ್ಚು ಸವಾಲಿನದ್ದಾಗಿದೆ ಎಂದೂ ಗುರುತಿಸಿದೆ. ಈ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಬಿಲ್ಕಿಸ್ ಬಾನೊ ಪ್ರಕರಣ (ಗುಜರಾತ್ 2002), ಮುಝುಫ್ಫರ್‌ನಗರ (2013), ಅರಿಯಲೂರ್ (2016), ಕಥುವಾ ಪ್ರಕರಣ (2018), ಅಥವಾ ಹತ್ರಾಸ್ (2020), ಮುಝಫರ್‌ಪುರ (2024) ಪ್ರಕರಣಗಳನ್ನು ಉಲ್ಲೇಖಿಸಿದೆ ಮತ್ತು ಮಣಿಪುರದಲ್ಲಿ ಮಹಿಳೆಯರ ಮೇಲೆ ಅಮಾನುಷ ಹಲ್ಲೆ, ಅತ್ಯಾಚಾರ ಮತ್ತು ಬೆತ್ತಲೆ ಮೆರವಣಿಗೆ ನಡೆಸಿದ ವ್ಯಾಪಕ ಪುರಾವೆಗಳ ಹೊರತಾಗಿಯೂ ಮೌನವಾಗಿರುವುದು ಇದೇ ಕೇಂದ್ರ ಸರ್ಕಾರ, ಮತ್ತು ಅದೇ ಕೇಂದ್ರ ಸರ್ಕಾರವು ಮಹಿಳಾ (ಮತ್ತು ಪುರುಷ) ಕುಸ್ತಿಪಟುಗಳು ಭಾರತೀಯ ಕುಸ್ತಿ ಫೆಡರೇಶನ್ ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರಿಂದ ಕಿರುಕುಳಕ್ಕೊಳಗಾಗುವುದರ ವಿರುದ್ಧ ಆಂದೋಲನ ಮಾಡಿದಾಗ ಅವರ ಮೇಲೆ ಹಲ್ಲೆ ನಡೆಸಿತು ಎಂದೂ ಹೇಳಿದೆ. ಅಲ್ಲದೆ, ಲೈಂಗಿಕ ಅಪರಾಧಗಳಿಗೆ ಶಿಕ್ಷೆಗೊಳಗಾಗಿರುವ ಅಸಾರಾಂ ಬಾಪು ಮತ್ತು ಗುರ್ಮೀತ್ ರಾಮ್ ರಹೀಮ್ ಅವರು ನಿರಂತರವಾಗಿ ಜಾಮೀನಿನ ಮೇಲೆ ಹೊರಬರಲು ಈ 'ಆಧ್ಯಾತ್ಮಿಕ ನಾಯಕರಿಗೆ' ಅವರು ನೀಡುವ ರಾಜಕೀಯ ಬೆಂಬಲವನ್ನು ಉಲ್ಲೇಖಿಸದಿರಲು ಸಾಧ್ಯವಿಲ್ಲ ಎಂದಿದೆ.

CCTV ಕ್ಯಾಮೆರಾಗಳನ್ನು ಅಳವಡಿಸುವುದು ಅಥವಾ ಅತ್ಯಾಚಾರಿಗಳಿಗೆ ಮರಣದಂಡನೆಗೆ ಕರೆ ನೀಡುವುದು ಸುರಕ್ಷತೆಯನ್ನು ಹೆಚ್ಚಿಸುವುದಿಲ್ಲ ಅಥವಾ ಅಪರಾಧಿಗಳಿಗೆ ವ್ಯವಸ್ಥಿತ ಅಭಯದ ಪ್ರಶ್ನೆಯನ್ನು ಎದುರಿಸುವುದಿಲ್ಲ. ಸತ್ಯವನ್ನು ಮರೆಮಾಚುವುದು, ಗುಪ್ತ ಸಂಗತಿಗಳನ್ನು ಹೊರತರುವವರ ಬಾಯಿ ಮುಚ್ಚಿಸುವುದು ಮತ್ತು ನ್ಯಾಯಕ್ಕಾಗಿ ದನಿಯೆತ್ತುವವರನ್ನು ಹತ್ತಿಕ್ಕುವುದು (ಇವುಗಳನ್ನು ಪ್ರಕರಣಗಳ ನಂತರದ ಪ್ರಕರಣಗಳಲ್ಲಿ ನಾವು ನೋಡಿದ್ದೇವೆ) ಇವುಗಳು ಸುರಕ್ಷತೆ ಅಥವಾ ನ್ಯಾಯವನ್ನು ತರಲು ಸಾಧ್ಯವಿಲ್ಲ ಎನ್ನುತ್ತ, ಈ 900ಕ್ಕೂ ಹೆಚ್ಚು ಸಂಘಟನೆಗಳು ಮತ್ತು ವ್ಯಕ್ತಿಗಳ ಜಂಟಿ ಹೇಳಿಕೆಯು, ಸುಪ್ರೀಂ ಕೋರ್ಟ್‌ನ ಮಧ್ಯಪ್ರವೇಶವು ಸಂಸ್ಥೆಗಳು, ಚುನಾಯಿತ ಪ್ರತಿನಿಧಿಗಳು, ಪೊಲೀಸ್ ಮತ್ತು ಅಧಿಕಾರಶಾಹಿಯ ವೈಫಲ್ಯಕ್ಕೆ ಹೊಣೆಗಾರಿಕೆಯನ್ನು ಖಚಿತಪಡಿಸಲು ಸಹಾಯ ಮಾಡುತ್ತದೆ ಎಂದು ಆಶಿಸಿದೆ.

“ಮಹಿಳೆಯರ ಹಕ್ಕುಗಳ ವಿಷಯದಲ್ಲಿ ರಾಜಿ–ಸಂಧಾನಕ್ಕೆ ಅವಕಾಶವಿಲ್ಲದ ಒಂದು ಸಮಾಜವನ್ನು ನಿರ್ಮಿಸಲು ನಾವು ಒಂದಾಗುತ್ತೇವೆ ಮತ್ತು ನಮ್ಮ ಸುರಕ್ಷತೆಯು ಒಂದು ಮೂಲಭೂತ ಗ್ಯಾರಂಟಿಯಾಗಿದೆ. ಆ ಬದಲಾವಣೆಯ ಸಮಯ ಈಗ ಬಂದಿದೆ” ಎಂದಿರುವ ಈ ಹೇಳಿಕೆ, ಕೊನೆಯಲ್ಲಿ,.

“ಲೈಂಗಿಕ ಹಿಂಸಾಚಾರವನ್ನು ಆವರಿಸಿರುವ ಮೌನವನ್ನು ಮುರಿಯಿರಿ,

ಸಾಂಸ್ಥಿಕ, ವೈಯಕ್ತಿಕ ಮತ್ತು ಸಾಮುದಾಯಿಕ ಪಿತೃಪ್ರಾಧಾನ್ಯದ ವ್ಯವಸ್ಥೆಗೆ ಸವಾಲು ಹಾಕಿ,

ನ್ಯಾಯ ಮತ್ತು ಜವಾಬುದಾರಿಕೆಯ ಪರವಾಗಿ ಎದ್ದು ನಿಲ್ಲಿ,

ನಾವೆಲ್ಲ ಒಂದಾದರೆ, ಇದು ಸಾಧ್ಯ" ಎಂದು ಘೋಷಿಸುತ್ತದೆ. ●

ರಾಜ್ಯಗಳಿಗೆ ಶೇ.50 ರಷ್ಟು ತೆರಿಗೆ ಪಾಲು.... ಪುಟ 4 ರಿಂದ

ಮೇನೇಜ್‌ಮೆಂಟ್) ಕಾಯ್ದೆಯ ಮೂಲಕ ರಾಜ್ಯಗಳ ಮೇಲೆ ವಿಧಿಸಿರುವ ಷರತ್ತುಗಳನ್ನು ಹಿಂಪಡೆಯಬೇಕು. ರಾಜ್ಯಗಳು ಶೇ.3 ವಿತ್ತೀಯ ಕೊರತೆಯ ಮಿತಿಯೊಂದಿಗೆ ಬಂಧಿಸಲ್ಪಟ್ಟಿವೆ, ಆದರೆ ಕೇಂದ್ರ ಸರ್ಕಾರಕ್ಕೆ ಮುಕ್ತ ಹಸ್ತವನ್ನು ಅನುಮತಿಸಲಾಗಿದೆ. ನವ ಉದಾರವಾದಿ ಖಾಸಗೀಕರಣ ಕಾರ್ಯಕ್ರಮಗಳನ್ನು ಜಾರಿಗೆ ತರಲು ರಾಜ್ಯಗಳು ಸಿದ್ಧರಿದ್ದರೆ ವಿತ್ತೀಯ ಕೊರತೆಯ 3% ಮಿತಿಯನ್ನು ದಾಟಲು ಅವಕಾಶ ನೀಡಲಾಗುವುದು ಎಂದು ರಾಜ್ಯ ಸರ್ಕಾರಗಳ ಕೈಗಳನ್ನು ತಿರುಚಲು ಕೇಂದ್ರ ಸರ್ಕಾರ ಇದನ್ನು ಬಳಸುತ್ತಿದೆ. ಇದು ಸಂವಿಧಾನದ ಒಕ್ಕೂಟ ತತ್ವಕ್ಕೆ ವಿರುದ್ಧವಾಗಿದೆ.

18. ಕೇಂದ್ರ ಸಾಲಗಳ ಕಾರಣದಿಂದಾಗಿ ರಾಜ್ಯಗಳಿಗೆ ಸಾಲ ಪರಿಹಾರವನ್ನು ಯಾವುದೇ ಷರತ್ತುಗಳಿಗೆ ಕಟ್ಟಿಹಾಕಬಾರದು. ರಾಜ್ಯಗಳ ಸಾಲದ ಹೊರೆಯನ್ನು ಕಡಿಮೆ ಮಾಡಲು ಮತ್ತು ಕೇಂದ್ರ ಸಾಲಗಳ ಮೇಲೆ ಅನ್ಯಾಯವಾಗಿ ಹೆಚ್ಚಿನ ಬಡ್ಡಿದರವನ್ನು ವಿಧಿಸುವ ಒಕ್ಕೂಟ ಸರ್ಕಾರದ ನೀತಿಯನ್ನು ಬದಲಾಯಿಸಲು ಒಂದು ಕಾರ್ಯವಿಧಾನ ರೂಪಿಸಬೇಕು. ವೇತನ ಆಯೋಗದ ಪರಿಷ್ಕರಣೆಯಿಂದ ರಾಜ್ಯಗಳ ಮೇಲೆ ಉಂಟಾಗುವ ಹೆಚ್ಚುವರಿ ಆರ್ಥಿಕ ಹೊರೆಯ ಕನಿಷ್ಠ 50% ಅನ್ನು ಕೇಂದ್ರ ಸರ್ಕಾರ ಭರಿಸಬೇಕು.

19. ತೆರಿಗೆ ರಿಯಾಯಿತಿಗಳು: ಶ್ರೀಮಂತ ವರ್ಗಗಳಿಗೆ ಒಕ್ಕೂಟ ಸರ್ಕಾರದ ತೆರಿಗೆ ವಿನಾಯಿತಿಗಳನ್ನು ತುರ್ತಾಗಿ ಪರಿಶೀಲಿಸಬೇಕು ಮತ್ತು ವಿನಾಯಿತಿಗಳ ಹೇರಳತೆಯನ್ನು ಹಂತಹಂತವಾಗಿ ತೆಗೆದು ಹಾಕಬೇಕು. ತೆರಿಗೆ ವಿನಾಯಿತಿಗಳಿಂದ ಉಂಟಾಗುವ ನಷ್ಟ ಮತ್ತು ವಿರೂಪಗಳಿಗೆ ಒಕ್ಕೂಟ ಸರ್ಕಾರವು ರಾಜ್ಯಗಳಿಗೆ ಪರಿಹಾರ ನೀಡಬೇಕು. ಕಾರ್ಪೊರೇಟ್ ವರ್ಗಗಳಿಗೆ ನೀಡಲಾಗುತ್ತಿರುವ ತೆರಿಗೆ ವಿನಾಯಿತಿಗಳಲ್ಲಿ ಅನಿಯಮಿತ ಪೈಪೋಟಿಯನ್ನು ತಡೆಯಲು ಕೆಲವು ಸಾಮೂಹಿಕ ಮಿತಿಗಳಗಳನ್ನು ವಿಧಿಸಲು ಒಕ್ಕೂಟ ಮತ್ತು ರಾಜ್ಯಗಳು ನಿಗದಿಪಡಿಸಬೇಕು.

20. ನೈಸರ್ಗಿಕ ವಿಪತ್ತುಗಳಿಗೆ ಪರಿಹಾರ ನಿಧಿಗೆ ಸಂಬಂಧಿಸಿ ರಾಜ್ಯಗಳ ಕಾರ್ಪಸ್ ನಿಧಿಯನ್ನು ಹೆಚ್ಚಿಸಲು ಈಗಿರುವ ಯೋಜನೆಯನ್ನು ಸೂಕ್ತವಾಗಿ ಬದಲಾಯಿಸಬೇಕಾಗಿದೆ. ಕೇಂದ್ರ ಸಾರ್ವಜನಿಕ ಉದ್ದಿಮೆಗಳು, ರೈಲ್ವೆ, ರಾಷ್ಟ್ರೀಯ ಹೆದ್ದಾರಿಗಳು, ಬಂದರುಗಳು, ವಿಮಾನ ನಿಲ್ದಾಣಗಳು, ಪ್ರಮುಖ ನೀರಾವರಿ ಯೋಜನೆಗಳು ಇತ್ಯಾದಿಗಳಲ್ಲಿ ಒಕ್ಕೂಟ ಮತ್ತು ರಾಜ್ಯಗಳ ಹಿತಾಸಕ್ತಿಗಳು ಒಳಗೊಂಡಿವೆ. ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಅಂತರ–ರಾಜ್ಯ ಸಮತೋಲನವನ್ನು ಖಚಿತಪಡಿಸಿಕೊಳ್ಳುವುದು ಅವಶ್ಯಕವಾಗಿದೆ.

21. 16ನೇ ಹಣಕಾಸು ಆಯೋಗವು ಕರ್ನಾಟಕ ಸರ್ಕಾರದ ಕರ್ನಾಟಕ ಪರಿಶಿಷ್ಟ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು–ಉಪ ಹಂಚಿಕೆ ಕಾಯ್ದೆ 2013ರ ಮಾದರಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಉನ್ನತಿಗಾಗಿ ಶಾಸನವನ್ನು ಜಾರಿಗೆ ತರಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು.

22. ಕೊನೆಯದಾಗಿ, ಭಾರತದ ಏಕತೆ ಮತ್ತು ಸಮಗ್ರತೆ ನಮ್ಮ ಸಂವಿಧಾನದ ಒಕ್ಕೂಟ ತತ್ವದ ಮೇಲೆ ನಿಂತಿದೆ. ಇದು 2014ರ ನಂತರದ ಅವಧಿಯಲ್ಲಿ ಸವೆತಕ್ಕೆ ಒಳಗಾಗಿದೆ. ಒಕ್ಕೂಟ ಸರ್ಕಾರವು ಒಕ್ಕೂಟ ವ್ಯವಸ್ಥೆಯ ಸಾಂವಿಧಾನಿಕ ತತ್ವಗಳಿಗೆ ಬದ್ಧವಾಗಿಲ್ಲ. ಕರ್ನಾಟಕ, ಕೇರಳ ಮುಂತಾದ ಅನೇಕ ರಾಜ್ಯಗಳು ಹಣಕಾಸು ಆಯೋಗದ ಶಿಫಾರಸಿನ ಆಧಾರದ ಮೇಲೆ ತೆರಿಗೆ ಆದಾಯದ ವರ್ಗಾವಣೆಯ ಬಗ್ಗೆ ನ್ಯಾಯಕ್ಕಾಗಿ ಭಾರತದ ಸುಪ್ರೀಂ ಕೋರ್ಟಿನ ಬಾಗಿಲು ತಟ್ಟಬೇಕಾಯಿತು. ಇದು ಭಾರತೀಯ ಸಂವಿಧಾನದ ಒಕ್ಕೂಟ ತತ್ವದ ಸವೆತದ ಬಲವಾದ ಸೂಚನೆಯಾಗಿದೆ. 16ನೇ ಹಣಕಾಸು ಆಯೋಗವು ಸಾಂವಿಧಾನಿಕ ಫೆಡರಲ್ ಮೌಲ್ಯಗಳನ್ನು ರಕ್ಷಿಸಬೇಕು. ಹಣಕಾಸಿನ ಒಕ್ಕೂಟ ವ್ಯವಸ್ಥೆಯು ಪ್ರಜಾಪ್ರಭುತ್ವ ಮತ್ತು ರಾಜಕೀಯ ಒಕ್ಕೂಟ ವ್ಯವಸ್ಥೆಗೆ ಅಡಿಪಾಯವಾಗಿದೆ. ಸಂವಿಧಾನವು ಮೊದಲ ಅನುಚ್ಛೇದದ ಮಾತುಗಳಲ್ಲಿ ಅದಕ್ಕೆ ಅತ್ಯುತ್ತಮ ಅಭಿವ್ಯಕ್ತಿಯನ್ನು ನೀಡಿದೆ, ಅದು, ಇಂಡಿಯಾ ಎಂದರೆ ಭಾರತವು ರಾಜ್ಯಗಳ ಒಕ್ಕೂಟವಾಗಿದೆ. ●

ಅಮೆರಿಕ ಮೆಚ್ಚಿಸಲು ಉಕ್ರೇನ್‌ಗೆ ಮೋದಿ ಭೇಟಿ

ಪ್ರಕಾಶ್ ಕಾರತ್



ಪ್ರಧಾನಿ ನರೇಂದ್ರ ಮೋದಿ ಉಕ್ರೇನ್‌ಗೆ ನೀಡಿದ್ದ ಸಂಕ್ಷಿಪ್ತ ಭೇಟಿ ಒಂದು ದೊಡ್ಡ ಯಶಸ್ಸು ಎಂದು ಅಮೆರಿಕ-ಪರ ವಲಯಗಳು ಮತ್ತು ಕಾರ್ಪೊರೇಟ್ ಮಾಧ್ಯಮ ಶ್ಲಾಘಿಸಿವೆ. ದೆಹಲಿಯಲ್ಲಿ ಜಿ20 ಶೃಂಗಸಭೆಯನ್ನು ನಡೆಸಿ ಹಾಗೂ ದಕ್ಷಿಣಾರ್ಧ ಗೋಳದ (ಗ್ಲೋಬಲ್ ಸೌತ್) ನಾಯಕನೆಂಬ ಮಾನ್ಯತೆಯನ್ನು ಪಡೆಯುವ ಮೂಲಕ ತನ್ನ ಅಂತಾರಾಷ್ಟ್ರೀಯ ಪ್ರತಿಷ್ಠೆಯನ್ನು ಇನ್ನಷ್ಟು ಎತ್ತರಕ್ಕೆ ಒಯ್ದಿರುವ ನಾಯಕ ಇವರಾಗಿದ್ದು ಕಿಯೆವ್‌ಗೆ ಐತಿಹಾಸಿಕ ಭೇಟಿ ನೀಡಿ ರಷ್ಯಾ-ಉಕ್ರೇನ್ ಕದನದಲ್ಲಿ ಶಾಂತಿಯನ್ನು ಸ್ಥಾಪಿಸಲು ಭಾರತ ಮಧ್ಯಸ್ಥಿಕೆದಾರನ ಪಾತ್ರ ವಹಿಸಲು ಹಾದಿ ಸುಗಮಗೊಳಿಸಿದ್ದಾರೆಂಬುದು ಇವರೆಲ್ಲರ ಅಂಬೋಣವಾಗಿದೆ.

ಭಾರತ ಪಾತ್ರದ ತಿರಸ್ಕಾರ

ಆದರೆ, ದುರದೃಷ್ಟವಶಾತ್, ಬಹುಪರಾಕಿನ ಮಾಧ್ಯಮ ಮತ್ತು ಅಮೆರಿಕ-ಪರ ವಿಶ್ಲೇಷಕರಿಗೆ ಆಘಾತಕಾರಿ ಸುದ್ದಿಯೊಂದನ್ನು ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ನೀಡಿದ್ದಾರೆ. ಮೋದಿ ಭೇಟಿಯ ನಂತರದ ಮಾಧ್ಯಮಗೋಷ್ಠಿಯಲ್ಲಿ ಝೆಲೆನ್‌ಸ್ಕಿ ಕೆಲವು ಕಟುವಾದ ಟಿಪ್ಪಣಿಗಳನ್ನು ಮಾಡಿದ್ದಾರೆ. ರಷ್ಯಾದಿಂದ ಭಾರತ ತೈಲ ಖರೀದಿಸುತ್ತಿರುವುದು ಮತ್ತು ರಷ್ಯಾದ ಶಸ್ತ್ರಾಸ್ತ್ರ ಕೈಗಾರಿಕೆಗೆ ಭಾರತ ನೆರವಾಗುತ್ತಿರುವುದಕ್ಕೆ ಝೆಲೆನ್‌ಸ್ಕಿ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಶಾಂತಿ ಶೃಂಗಸಭೆಯನ್ನು ಏರ್ಪಡಿಸುವಲ್ಲಿ ಭಾರತ ವಹಿಸಬಹುದಾದ ಯಾವುದೇ ಪಾತ್ರವಿರುವುದನ್ನು ಅವರು ತಿರಸ್ಕರಿಸಿದ್ದಾರೆ. 'ಶಾಂತಿ ಶೃಂಗಸಭೆಯ ಹೇಳಿಕೆಗೆ ಕೈಜೋಡಿಸದ' ದೇಶವೊಂದರಲ್ಲಿ ಶಾಂತಿ ಶೃಂಗವನ್ನು ನಡೆಸಲು ತಮಗೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಈ ವರ್ಷ ಜೂನ್‌ನಲ್ಲಿ ಸ್ವಿಜರ್ಲೆಂಡ್‌ನಲ್ಲಿ ನಡೆದ ಪ್ರಥಮ ಶಾಂತಿ ಸಭೆಯನ್ನು ಉಲ್ಲೇಖಿಸಿ ಅವರು ಈ ಪ್ರಸ್ತಾಪ ಮಾಡಿದ್ದಾರೆ. ಸ್ವಿಜರ್ಲೆಂಡ್ ಸಭೆಯಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿಯೊಬ್ಬರು ಭಾಗವಹಿಸಿದ್ದರು. ಆದರೆ ಆ ಅಧಿಕೃತ ಹೇಳಿಕೆಗೆ ಭಾರತ ಸಹಿ ಹಾಕಿರಲಿಲ್ಲ. ತಾವು ಭಾರತಕ್ಕೆ ಭೇಟಿ ಕೊಟ್ಟಾಗ, ಭಾರತ ತಮ್ಮ ಪರವಾಗಿ ನಿಲ್ಲಬೇಕು ಹಾಗೂ 'ಅಮೆರಿಕ-ರಷ್ಯಾ ನಡುವೆ ಬ್ಯಾಲೆನ್ಸ್ ಮಾಡಬಾರದು' ಎಂದೂ ಝೆಲೆನ್‌ಸ್ಕಿ ಹೇಳಿದ್ದಾರೆ. ತಮ್ಮಂತೆ ಮೋದಿ ಕೂಡ ಅಮೆರಿಕದ ಕಿರಿಯ ಪಾಲುದಾರ ಎಂಬುದನ್ನು ಕಂಡುಕೊಂಡಿರುವ ರೀತಿಯಲ್ಲಿ ಝೆಲೆನ್‌ಸ್ಕಿ ಮಾತನಾಡಿದ್ದಾರೆ. ಹಾಗಾಗಿ ಈ ರೀತಿಯಾಗಿ ಮಾತನಾಡಲು ಅವರಿಗೆ ಸಾಧ್ಯವಾಗಿದೆ.

ಭೇಟಿಯ ನಿಜ ಉದ್ದೇಶ

ಕಿಯೆವ್‌ಗೆ ಮೋದಿ ನೀಡಿದ ಭೇಟಿಯ ನಿಜ ಉದ್ದೇಶ ಎಲ್ಲರಿಗೂ ಗೊತ್ತಿದೆ. ಆದರೆ, ಭಾರತ ವಿಶ್ವ ಗುರು ಎಂದು ಬಡಾಯಿ ಕೊಚ್ಚಿಕೊಳ್ಳುವವರಿಂದ ಅದು ಮಸಕಾಗಿದೆ. ಮೋದಿ ಜುಲೈನಲ್ಲಿ ಮಾಸ್ಕೋಗೆ ಭೇಟಿ ನೀಡಿದಾಗ ವಾಷಿಂಗ್ಟನ್‌ನಲ್ಲಿ ನ್ಯಾಟೋ ಕೂಟದ 75ನೇ ವಾರ್ಷಿಕೋತ್ಸವ ಸಭೆ ನಡೆದಿತ್ತು. ಮೋದಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುತಿನ್‌ರನ್ನು ಅಪ್ಪಿಕೊಂಡ ಹಾಗೂ ಪುತಿನ್‌ರಿಂದ ರಷ್ಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ಸ್ವೀಕರಿಸಿದ ದೃಶ್ಯ ಅಮೆರಿಕದಲ್ಲಿ ಆಕ್ರೋಶಕ್ಕೆ ಕಾರಣವಾಗಿತ್ತು. ಪುತಿನ್‌ರ ರಷ್ಯಾದ ವಿರುದ್ಧವಿರುವ ಎಲ್ಲಾ ಶಕ್ತಿಗಳನ್ನು ಒಗ್ಗೂಡಿಸುವುದು ನ್ಯಾಟೋ ಸಭೆಯ ಉದ್ದೇಶವಾಗಿತ್ತು. ಅದೇ ವೇಳೆ, ಅಮೆರಿಕದ 'ಇಂಡೋ-ಪೆಸಿಫಿಕ್' ಮಿತ್ರ ದೇಶವು ಲಜ್ಜೆಗೆಟ್ಟು ಶತ್ರುವಿನೊಂದಿಗೆ ಸರಸವಾಡುತ್ತಿತ್ತು.

ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲಿವಾನ್‌ರಿಂದ ಹಿಡಿದು ವಿದೇಶಾಂಗ ಇಲಾಖೆಯ ವಕ್ತಾರರವರೆಗೆ ಜೋ ಬೈಡೆನ್ ಆಡಳಿತದ ವಿವಿಧ ಪ್ರತಿನಿಧಿಗಳು ಏಕ ಕಂಠದಿಂದ ತಮ್ಮ ಅಸಂತೃಪ್ತಿಯನ್ನು ತೋರಿಸಿದ್ದರು. ಆದರೆ, ಅಮೆರಿಕ-ಭಾರತ ರಕ್ಷಣಾ ಪಾಲುದಾರಿಕೆಯು ಜಗತ್ತಿನ ಮೇಲೆ ಹೆಚ್ಚು ಪರಿಣಾಮ ಬೀರುವಂಥ ಸಾಲಿನಲ್ಲಿ ನಿಲ್ಲುತ್ತದೆ ಎಂಬ ಸಂದೇಶ ಸಾರುವುದನ್ನು ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿರುವ ಎರಿಕ್ ಗಾರ್ಸೆತಿ ಅವರಿಗೆ ಬಿಡಲಾಯಿತು. ಆದರೆ, ಬಾಂಧವ್ಯವನ್ನು ದುರುಪಯೋಗ ಪಡಿಸಿಕೊಳ್ಳಬಾರದು (ಟೇಕನ್ ಫಾರ್ ಗ್ರಾಂಟೆಡ್) ಎಂದವರು ಹೇಳಿದರು. 'ಭಾರತ ತನ್ನ ರಕ್ಷಣಾ (ವ್ಯೂಹಾತ್ಮಕ) ಸ್ವಾಯತ್ತೆಯನ್ನು ಇಷ್ಟಪಡುತ್ತದೆ ಎನ್ನುವುದು ನನಗೆ ಗೊತ್ತು. ಆದರೆ ಸಂಘರ್ಷಗಳ ಸಮಯದಲ್ಲಿ ವ್ಯೂಹಾತ್ಮಕ ಸ್ವಾಯತ್ತೆ ಅನ್ನುವಂಥದ್ದು ಏನೂ ಇರುವುದಿಲ್ಲ' ಎಂದೂ ಎರಿಕ್ ಹೇಳಿದ್ದರು.

ಮೋದಿಯವರ ರಷ್ಯಾ ಭೇಟಿಯ ಕೇವಲ ಎರಡು ದಿನಗಳ ನಂತರ ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ದೋವಲ್, ಅಮೆರಿಕದ ಎನ್‌ಎಸ್‌ಎ ಜೇಕ್ ಸಲಿವಾನ್‌ರಿಗೆ ಕರೆ ಮಾಡಿದರು. ಅಮೆರಿಕವನ್ನು ಸಮಾಧಾನಪಡಿಸುವುದು ದೋವಲ್‌ರ ಈ ಕ್ರಮದ ಉದ್ದೇಶವಾಗಿತ್ತು. ಭಾರತವು ವ್ಯೂಹಾತ್ಮಕ ಮೈತ್ರಿಯನ್ನು ಗಂಭೀರವಾಗಿ ಪಾಲಿಸುತ್ತಿದೆ ಎಂದು ಆಶ್ವಾಸನೆ ನೀಡುವುದು ಮತ್ತು ಟೋಕಿಯೋದಲ್ಲಿ ನಡೆಯಲಿರುವ ಮುಂದಿನ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಭಾರತದ ಭಾಗವಹಿಸುವಿಕೆಯನ್ನು ದೃಢಪಡಿಸುವುದು ದೋವಲ್ ಕರೆಯ ಉದ್ದೇಶವಾಗಿತ್ತು.

ಅದರ ಬೆನ್ನಲ್ಲೇ, ಆಗಸ್ಟ್ ಮೂರನೇ ವಾರದಲ್ಲಿ ಮೋದಿ ಉಕ್ರೇನ್‌ಗೆ ಭೇಟಿ ನೀಡುವ ಸಾಧ್ಯತೆ ಕುರಿತು ವಿದೇಶಾಂಗ ಸಚಿವಾಲಯದ ಮೂಲಗಳು ಮಾಧ್ಯಮಗಳಿಗೆ ಮಾಹಿತಿ ನೀಡಲು ಆರಂಭಿಸಿದವು. ಹೀಗಾಗಿ, ಅಮೆರಿಕವನ್ನು ಸಮಾಧಾನಪಡಿಸಲು ಮೋದಿ ಉಕ್ರೇನ್‌ಗೆ ಭೇಟಿ ನೀಡಿರುವುದು ಸ್ಪಷ್ಟವಾಗಿದೆ. ಅಲ್ಲದೆ ಅಮೆರಿಕಕ್ಕೆ ನಿಷ್ಠೆಯನ್ನು ಮುಂದುವರಿಸುವುದರ ಸೂಚನೆಯೂ ಅದಾಗಿತ್ತು.

ಮೋದಿ ಕಿಯೆವ್‌ಗೆ ಭೇಟಿ ನೀಡಿದ ದಿನವೇ ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್ ಅಮೆರಿಕಕ್ಕೆ ಭೇಟಿ ಕೊಟ್ಟಿದ್ದು ಅಮೆರಿಕದೊಂದಿಗಿನ ಮೈತ್ರಿಗೆ ಭಾರತದ ಬದ್ಧತೆಯನ್ನು ಇನ್ನಷ್ಟು ವಿಷದಪಡಿಸಿತು. ರಾಜನಾಥ್ ಸಿಂಗ್‌ರ ನಾಲ್ಕು ದಿನಗಳ ಭೇಟಿಯ ವೇಳೆ 'ಸೆಕ್ಯುರಿಟಿ ಆಫ್ ಸಪ್ಲೈಸ್ ಅಗ್ರಿಮೆಂಟ್' (ಎಸ್‌ಓಎಸ್‌ಎ-ಸೋಸಾ) ಮತ್ತು ಅಮೆರಿಕದ ಮಿಲಿಟರಿ ಕಮಾಂಡ್‌ಗಳಲ್ಲಿ ಭಾರತದ ಮಿಲಿಟರಿ ಅಧಿಕಾರಿಗಳನ್ನು ಸಂಪರ್ಕಾಧಿಕಾರಿಗಳನ್ನಾಗಿ (ಲೈಜನ್ ಆಫೀಸರ್ಸ್) ನೇಮಿಸುವ ಒಡಂಬಡಿಕೆಗೆ ಸಹಿ ಹಾಕಲಾಯಿತು. ಅಮೆರಿಕದಿಂದ ದೊಡ್ಡ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳ ಖರೀದಿಯ ಭಾಗವಾಗಿ, ಭಾರತಕ್ಕೆ ಸಬ್‌ಮೆರಿನ್-ವಿರೋಧಿ ಸೋನೋಬಾಯ್‌ಗಳನ್ನು ಮಾರಾಟ ಮಾಡುವ 58.6 ದಶಲಕ್ಷ ಡಾಲರ್ ಮೊತ್ತದ ಒಪ್ಪಂದಕ್ಕೆ ಅಮೆರಿಕ ಸರಕಾರ ಅನುಮೋದನೆ ನೀಡಿದೆ.

ರಷ್ಯಾದೊಂದಿಗಿನ ದೀರ್ಘಕಾಲೀನ ಸಂಬಂಧವನ್ನು, ಅದರಲ್ಲೂ ವಿಶೇಷವಾಗಿ ಅಲ್ಪಾವಧಿಯಲ್ಲಿ ಮಿಲಿಟರಿ ಸಾಮಗ್ರಿಗಳನ್ನು ಪೂರೈಸುವ ರಷ್ಯಾದ ಕ್ರಮವನ್ನು ಭಾರತ ಬಿಟ್ಟು ಕೊಡಲಾಗದು. ಅದೇ ವೇಳೆ, ಕಿಯೆವ್‌ಗೆ ಮೋದಿ ಭೇಟಿ ಹಾಗೂ ರಾಜನಾಥ್ ಸಿಂಗ್‌ರ ಅಮೆರಿಕ ಭೇಟಿಯ ಫಲಿತಾಂಶವು ಅಮೆರಿಕದೊಂದಿಗಿನ ವ್ಯೂಹಾತ್ಮಕ ಬಾಂಧವ್ಯವನ್ನು ಬಲಪಡಿಸಲು ಮೋದಿ ಸರಕಾರ ಮುಂದಾಗಿದೆ ಎನ್ನುವುದನ್ನು ಸೂಚಿಸುತ್ತವೆ. ಅದೇ ಹೊತ್ತಿಗೆ, ಭವಿಷ್ಯದಲ್ಲಿ ರಷ್ಯಾ ಮೇಲಿನ ಅವಲಂಬನೆಯನ್ನು ಮತ್ತು ಅದರೊಂದಿಗಿನ ಸಂಬಂಧವನ್ನು ಕಡಿಮೆ ಮಾಡಿಕೊಳ್ಳಲು ಭಾರತ ಬಯಸುತ್ತಿರುವುದರ ಸೂಚನೆಯನ್ನೂ ಕೊಟ್ಟಿದೆ. ಅಮೆರಿಕದ ಮಿತ್ರನಾಗಿರುವಾಗ ವ್ಯೂಹಾತ್ಮಕ ಸ್ವಾಯತ್ತೆಗೆ ಅವಕಾಶವಿರುವುದಿಲ್ಲ ಎನ್ನುವ ಪಾಠವನ್ನು ಮೋದಿ ಸರಕಾರ ಕಲಿತಂತೆ ಕಾಣುತ್ತದೆ.

ಅನು: ವಿಶ್ವ

ಅಪರಾಧ ನಿವಾರಿಸುವ ಉದ್ದೇಶದ ಜೈಲುಗಳು..... ಪುಟ 3 ರಿಂದ

ಆಗುವಂತಿರಬೇಕು ಎಂಬುದು ಒಪ್ಪಿತ ತತ್ವ. ಆದರೆ ಐಶಾರಾಮಿ-ಅಕ್ರಮ ಸೌಲಭ್ಯಗಳು ಈ ಎಲ್ಲ ಆಶಯಗಳನ್ನು ಬುಡಮೇಲು ಮಾಡುತ್ತವೆ.

ಸದ್ಯ ದರ್ಶನ್ ಸೇರಿದಂತೆ ಆರೋಪಿಗಳನ್ನು ರಾಜ್ಯದ ವಿವಿಧ ಜೈಲುಗಳಿಗೆ ಸ್ಥಳಾಂತರ ಮಾಡಲಾಗಿದೆ. ತಪ್ಪು ಎಸಗಿರುವ ಆರೋಪದ ಮೇಲೆ ಕೆಲವು ಅಧಿಕಾರಿಗಳು ಸಿಬ್ಬಂದಿಗಳನ್ನು ಅಮಾನತ್ತು ಮಾಡಲಾಗಿದೆ. ಇದಿಷ್ಟೇ ಸಾಲದು. ಈ ಪ್ರಕರಣದ ಬಗೆಗೆ ಸರಿಯಾದ ತನಿಖೆಯಾಗಿ ತಪ್ಪಿತಸ್ತರಿಗೆ ಶಿಕ್ಷೆಯಾಗಬೇಕು. ಕಾರಾಗೃಹ ಇಲಾಖೆಯ ಹೊಣೆಗಾರಿಕೆ ಇರುವ ರಾಜ್ಯ ಸಚಿವರು ಹೊಣೆ ಹೊರಬೇಕು.

ಸಮಾಜದಲ್ಲಿ ಅಪರಾಧಗಳನ್ನು ತಡೆಯುವ ಉದ್ದೇಶ ಹೊಂದಿರುವ ಜೈಲುಗಳು, ಅಪರಾಧಗಳ ಕೇಂದ್ರವಾಗಬಾರದು. ಜೈಲು ವ್ಯವಸ್ಥೆಯಲ್ಲಿ ಅಮೂಲಾಗ್ರ ಸುಧಾರಣೆಗಳು ಬರಬೇಕು. ಈ ಸಂಬಂಧ 1980 ರಲ್ಲಿ ರಚನೆಯಾದ ಜಸ್ಟಿಸ್ ಎ.ಎನ್. ಮುಲ್ಲಾ ಆಯೋಗದ ಶಿಫಾರಸ್ಸುಗಳಲ್ಲಿ ಕಾರಾಗೃಹಗಳ ಪರಿಶೀಲನೆಗೆ ಆಗಾಗ್ಗೆ ಮಾಧ್ಯಮ ಪ್ರತಿನಿಧಿಗಳು ಮತ್ತು ಸಾರ್ವಜನಿಕರಿಗೆ ಅವಕಾಶ ನೀಡಬೇಕೆನ್ನುವ ಶಿಫಾರಸ್ಸನ್ನು ಗಂಭೀರವಾಗಿ ಪರಿಗಣಿಸಬಹುದು. ಉಳಿದಂತೆ ಖೈದಿಗಳಿಗೆ ಉತ್ತಮ ಪೌಷ್ಟಿಕ ಆಹಾರ, ಕಾರಾಗೃಹಗಳ ಸ್ವಚ್ಚತೆ, ದೇಶದಾದ್ಯಂತ ಜೈಲುಗಳ ನಿರ್ವಹಣೆಗೆ ಸಮಾನ ನೀತಿ, ಜೈಲುಗಳ ನಡುವೆ ಪರಸ್ಪರ ಸಮನ್ವಯ ಮುಂತಾದ ಹಲವು ಶಿಫಾರಸ್ಸುಗಳನ್ನು ಮುಲ್ಲಾ ಸಮಿತಿ ನೀಡಿದ್ದು ಇವುಗಳಲ್ಲಿ ಪ್ರಸ್ತುತತೆ ಹೊಂದಿರುವ ಶಿಫಾರಸ್ಸುಗಳ ಜಾರಿಗೆ ಗಮನ ನೀಡಬೇಕಿದೆ. ಜೈಲುಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಆದುನಿಕ ತಂತ್ರಜ್ಞಾನ ಮತ್ತು ವಿಜ್ಞಾನ ಬಳಕೆಯ ಬಳಕೆ, ಅಪರಾಧಿಗಳ ಮನಪರಿವರ್ತನೆಯ ವಿಚಾರಗಳ ಕಡೆಗೂ ಯೋಜಿಸಬೇಕಿದೆ.

ಆದರೆ ಅಯಕಟ್ಟಿನ ಪೋಲಿಸ್ ಠಾಣೆಗಳಿಗೆ ಮತ್ತು ಪ್ರಮುಖ ಜೈಲುಗಳಿಗೆ ಅಧಿಕಾರಿಗಳಾಗಿ ಬರಲು, ಅಧಿಕಾರಸ್ತರಿಗೆ ಅಪಾರ ಮೊತ್ತದ ಲಂಚವನ್ನು ನೀಡಿ ವರ್ಗಾವಣೆ ಮಾಡಿಸಿಕೊಳ್ಳಲಾಗುತ್ತದೆ ಎಂಬ ಮಾತುಗಳು ಜನಸಾಮಾನ್ಯರ ನಡುವೆ ಪ್ರಚಲಿತದಲ್ಲಿದೆ. ಜೈಲಿನೊಳಗಡೆ ಇಂತಿಂಥ ಸೇವೆಗಳಿಗೆ ಇಂತಿಷ್ಟು ಹಣ ಎನ್ನುವ ಅನಧಿಕೃತ ವ್ಯವಸ್ಥೆಯೊಂದು ನಿರಂತರ ಚಾಲ್ತಿಯಲ್ಲಿದೆ ಎನ್ನುವ ಅಂಶಗಳನ್ನ ಅಲ್ಲಿದ್ದ ಕೈದಿಗಳು ಬಯಲು ಗೊಳಿಸಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಮನಗಾಣಿಸುತ್ತದೆ. ಉನ್ನತ ಮಟ್ಟದ ಅಧಿಕಾರಿಗಳು, ಅಧಿಕಾರದಲ್ಲಿರುವ ರಾಜಕೀಯ ನಾಯಕರು, ಮುಂತಾದವರ ನಡುವೆ ಒಳ ಒಪ್ಪಂದ ಇಲ್ಲವಾದರೆ ಇಂತಹವು ಹೇಗೆ ಸಾಧ್ಯ ಎನ್ನುವ ಪ್ರಶ್ನೆ ಸಾಮಾನ್ಯ ಎನಿಸಿದರೂ ಅತ್ಯಂತ ಗಹನ ಪ್ರಶ್ನೆಯಾಗಿದೆ. ಇದಕ್ಕೆ ಮುಖ್ಯಮಂತ್ರಿ, ಗೃಹ ಸಚಿವರು ಉತ್ತರಿಸಬೇಕು. ವ್ಯವಸ್ಥೆಯೇ ಹೀಗೆ ಹೊಲಸೆದ್ದು ಹೋಗಿದ್ದರೆ ಜೈಲುಗಳ ಸುಧಾರಣೆ ಹೇಗೆ ಸಾಧ್ಯ ಎಂಬ ಪ್ರಶ್ನೆ ಏಳುತ್ತದೆ. ●

ನ್ಯಾಯಾಲಯದ ಆದೇಶಕ್ಕಾಗಿ ಕಾದ ನಾಯಕರು..... ಪುಟ 3 ರಿಂದ

ತೊಡಗಿರುವುದು ಕಾಣುತ್ತಿದೆ. ಮೋದಿ ಮತ್ತು ಅಮಿತ್ ಶಾ ರವರ ಆಡಳಿತದಲ್ಲಿ ರಾಜ್ಯಪಾಲರಿಗಾಗಲಿ, ರಾಷ್ಟ್ರಪತಿ ಅವರಿಗಾಗಲಿ ಅಥವಾ ಸಂವಿಧಾನಾತ್ಮಕವಾದ ಯಾವುದೇ ಸಂಸ್ಥೆ ಅಥವಾ ಶಕ್ತಿಗಾಗಲಿ ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿತೇ?

* * *

ಆದಾಯ ಮೀರಿ ಆಸ್ತಿಗಳಿಕೆಯ ಆರೋಪದಲ್ಲಿ ತನಿಖೆ ನಡೆಸಲು ಹಿಂದಿನ ಸರ್ಕಾರ ಅನುಮತಿ ನೀಡಿತ್ತು. ಈ ಆದೇಶವನ್ನು ಹಿಂಪಡೆಯಲು ಇಂದಿನ ರಾಜ್ಯ ಸರ್ಕಾರ ನಿರ್ಧರಿಸಿತ್ತು. ಹಿಂಪಡೆಯುವ ಈ ಆದೇಶವನ್ನು ಪ್ರಶ್ನಿಸಿದ್ದ ಎರಡು ರಿಟ್ ಅರ್ಜಿಗಳ ಬಗ್ಗೆ ವಿಚಾರಣೆ ನಡೆಸುತ್ತಿದ್ದ ಹೈಕೋರ್ಟ್ ತನ್ನ ತೀರ್ಪನ್ನು ಕಾಯ್ದಿರಿಸಿತ್ತು. ಗುರುವಾರ ನೀಡಿದ ಆದೇಶದಲ್ಲಿ ಎರಡು ಅರ್ಜಿಗಳನ್ನು ತಿರಸ್ಕರಿಸಿದೆ. ಈ ಮೂಲಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸ್ವಲ್ಪ ಮಟ್ಟಿನ ನಿರುಮ್ಮಳ ನೀಡಿದೆ. ಇದರರ್ಥ ಮುಂದೆಯೂ ಈ ಪ್ರಕರಣ ಮುಂದುವರಿಯಲಾರದು ಎಂದು ಹೇಳಲು ಸಾಧ್ಯವಿಲ್ಲ! ಅಂತೂ ವಿಧಾನಸೌಧದ ಅವರವರ ಕಛೇರಿ ಬಾಗಿಲು ಮುಚ್ಚಿ ಸಾಲು ಸಾಲಾಗಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ವಿರೋಧ ಪಕ್ಷದವರು ನ್ಯಾಯಾಲಯದ ಹಿಂದೆ, ಮುಂದೆ ಪಥ ಸಂಚಲನ ನಡೆಸುತ್ತಿರುವುದು, ಜನ ಪರಿತಪಿಸುವುದು ಈ ವಾರದ ವಿಶೇಷ. ●

ಏಕೀಕೃತ ಪಿಂಚಣಿ ಯೋಜನೆ(UPS)
ಕೇಂದ್ರ ಸರ್ಕಾರದ ಮತ್ತೊಂದು ವಂಚನೆ

ಸಿ.ಸಿದ್ದಯ್ಯ

ಸೋಮನಾಥನ್ ಸಮಿತಿ ಶಿಫಾರಸು ಮಾಡಿದ ಏಕೀಕೃತ ಪಿಂಚಣಿ ಯೋಜನೆ (ಯುಪಿಎಸ್) ಮೇಲ್ನೋಟಕ್ಕೆ ಉತ್ತಮವೆಂದು ಕಂಡರೂ ಈ ಯೋಜನೆ ನಿವೃತ್ತಿ ಹೊಂದಿದವರಿಗೆ ಕಂಟಕವಾಗಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ 30 ವರ್ಷಗಳ ಸೇವೆ ಸಲ್ಲಿಸಿ, ನಿವೃತ್ತಿಯಾದ ನಂತರ ಅವರ ಜೀವನ ಮತ್ತು ಕುಟುಂಬಕ್ಕೆ ಪಿಂಚಣಿಯು ಒಂದು ಖಾತರಿಯಾಗಿದೆ. ಪಿಂಚಣಿ ಪಡೆಯುವುದು ಅವರ ಹಕ್ಕು ಹೊರತು ಭಿಕ್ಷೆಯಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈಗ ಒಕ್ಕೂಟ ಸರ್ಕಾರ ಪಿಂಚಣಿ ಕೊಡುತ್ತೇವೆ ಎನ್ನುತ್ತ ಅದಕ್ಕಾಗಿ ನೌಕರನ ಬಳಿ ಪಾಲು ಕೇಳುತ್ತಿದೆ. ಆದ್ದರಿಂದಲೇ ಕಾರ್ಮಿಕ ಸಂಘಟನೆಗಳು ಈ ಏಕೀಕೃತ ಪಿಂಚಣಿ ಯೋಜನೆಯನ್ನು ವಿರೋಧಿಸುತ್ತಿವೆ. ಈ ನೀತಿಯ ಹಲವು ಅಂಶಗಳಲ್ಲಿ ನಿಜವಾದ ಸ್ಪಷ್ಟತೆ ಇಲ್ಲ. ಈ ಯೋಜನೆಯು ಭವಿಷ್ಯದಲ್ಲಿ ಇನ್ನಷ್ಟು ಸಮಸ್ಯೆಗಳನ್ನು ಸೃಷ್ಟಿಸುವುದು ಖಚಿತ.

ಆಗಸ್ಟ್ 24, 2024 ರಂದು ಕೇಂದ್ರ ಸಚಿವ ಸಂಪುಟ ಮಂಜೂರು ಮಾಡಿರುವ ಯುಪಿಎಸ್ (ಏಕೀಕೃತ ಪಿಂಚಣಿ ಯೋಜನೆ) ಯು ಒಪಿಎಸ್ ಎಂದು ಕರೆಯಲ್ಪಡುವ ಹಳೆಯ ಪಿಂಚಣಿ ಯೋಜನೆ ಪಡೆಯುವ ಸರ್ಕಾರಿ ನೌಕರರ ಸಂಪೂರ್ಣ ಹಕ್ಕನ್ನು ವಂಚಿಸುವ ಮತ್ತೊಂದು ನಂಬಲು ಅರ್ಹವಲ್ಲದ ಹತಾಶ ಪ್ರಯತ್ನವಾಗಿದೆ.

ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ವಿರೋಧಿಸಿ ಮತ್ತು ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರುಸ್ಥಾಪನೆಗಾಗಿ ದೊಡ್ಡ ಪ್ರಮಾಣದಲ್ಲಿ ನಡೆದ ಸರ್ಕಾರಿ ನೌಕರರ ಹೋರಾಟಗಳು ಮತ್ತು ಅಂತಹ ಹೋರಾಟಗಳಿಗೆ ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಒಕ್ಕೂಟಗಳ ಜಂಟಿ ವೇದಿಕೆಯು ನೀಡಿದ ಸಂಪೂರ್ಣ ಬೆಂಬಲ ಇವು ಬಿಜೆಪಿ ಆಳ್ವಿಕೆ ಎನ್‌ಪಿಎಸ್ ಗೆ ಅಂಟಿಕೊಳ್ಳುವ ತನ್ನ ನಿಲುವನ್ನು ಬದಲಾಯಿಸುವಂತೆ ಮಾಡಿವೆ. ಆದರೆ, 'ಯುಪಿಎಸ್' ಎಂಬ ಹೆಸರಿನಲ್ಲಿ ಅದು ಮುಂದಿಟ್ಟಿರುವ ಪ್ಯಾಕೇಜ್ ಪಿಂಚಣಿಯಾಗಿ ಸರ್ಕಾರಿ ನೌಕರರಿಗೆ ನ್ಯಾಯಸಮ್ಮತವಾಗಿ ಸಿಗಬೇಕಾದ್ದನ್ನು ವಂಚಿಸುವ ಅದೇ ಮೋಸದ ತಂತ್ರವನ್ನು ಪ್ರತಿಬಿಂಬಿಸುತ್ತದೆ.

ದೇಶಾದ್ಯಂತ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರು ದೊಡ್ಡ ಮಟ್ಟದಲ್ಲಿ ನಡೆಸಿದ ಪ್ರತಿಭಟನೆ, ಇದರಿಂದಾಗಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮೇಲೆ ಬೀರಿದ ಪರಿಣಾಮ, ಇವೆಲ್ಲದರಿಂದ ತಪ್ಪಿಸಿಕೊಳ್ಳುವ ಪ್ರಯತ್ನವಾಗಿ ಈಗ 'ಯುಪಿಎಸ್' ತರುವ ಮೂಲಕ ಜನರಿಗೆ ಮತ್ತೊಮ್ಮೆ ಮಂಕುಬೂದಿ ಎರಚಲು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಮುಂದಾಗಿದೆ.

ವಿಶ್ವಬ್ಯಾಂಕಿನ ಆದೇಶದ ಮೇರೆಗೆ

ಒಪಿಎಸ್(ಹಳೆಯ ಪಿಂಚಣಿ ಯೋಜನೆ)ನಲ್ಲಿ ನೌಕರರು ದೇಣಿಗೆ ನೀಡಬೇಕಾಗಿರಲಿಲ್ಲ. ಅದು ಖಚಿತ ಮೊತ್ತದ ಪಿಂಚಣಿಯಾಗಿತ್ತು. ನಿವೃತ್ತಿ ಹೊಂದಿದ ತನ್ನ ನೌಕರರಿಗೆ ನೀಡುವ 'ಕೊಡುಗೆ ರಹಿತ ಪಿಂಚಣಿ' ಯೋಜನೆಗಳ ಹೊರೆಯಿಂದ ತಪ್ಪಿಸಿಕೊಳ್ಳುವ ದೃಷ್ಟಿಯಿಂದ ಮತ್ತು ವಿಶ್ವಬ್ಯಾಂಕಿನ ಆದೇಶದ ಮೇರೆಗೆ ವಾಜಪೇಯಿ ನೇತೃತ್ವದ ಅಂದಿನ ಎನ್‌ಡಿಎ ಸರ್ಕಾರ, 2004ರಿಂದ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಯನ್ನು ಒಂದು ಕಾರ್ಯಾಂಗದ ಆದೇಶದ ಮೂಲಕ, 2014ರ ಜನವರಿ ಒಂದರ ನಂತರ ನೇಮಕಾತಿ ಹೊಂದಿದವರಿಗೆ ಅನ್ವಯವಾಗುವಂತೆ ಗುಟ್ಟಾಗಿ ಜಾರಿಗೆ ತಂದಿತು. ಈ ನೀತಿಯ ನಂತರ, ನೌಕರರು ತಾವು ಸೇವೆಯಲ್ಲಿರುವಾಗಲೇ ಪಿಂಚಣಿ ನಿಧಿಗಾಗಿ ಉದ್ಯೋಗಿಯಿಂದ ಶೇ.10 ಮತ್ತು ಉದ್ಯೋಗದಾತರಿಂದ ಶೇ.10 ರಷ್ಟನ್ನು ತೆಗೆದುಕೊಂಡು ಷೇರು ಮಾರುಕಟ್ಟೆಯಲ್ಲಿ ಹಾಕಲು ಪ್ರಾರಂಭಿಸಿದರು. ಮಾರುಕಟ್ಟೆಯ ಏರಿಳಿತಗಳ ಆಧಾರದ ಮೇಲೆ, ಉದ್ಯೋಗಿ ನಿವೃತ್ತರಾದಾಗ ಅಥವಾ ಮರಣಹೊಂದಿದಾಗ, ಅದರ ಶೇಕಡಾ 60 ಮೊತ್ತವು ಅವರ ಖಾತೆಯಲ್ಲಿ ಇರುತ್ತದೆ. ಉಳಿದವುಗಳನ್ನು ಮ್ಯೂಚುವಲ್ ಫಂಡ್‌ಗಳಾಗಿ ಖರೀದಿಸಬೇಕು. ಆದರೆ, ಪಿಂಚಣಿ ಎಷ್ಟು ಎಂಬುದು ಸ್ಪಷ್ಟವಾಗಿಲ್ಲ. ಅದು ಮಾರುಕಟ್ಟೆಗೆ ಅನುಗುಣವಾಗಿ ಬದಲಾಗುತ್ತದೆ. ಈ ನೀತಿಯು 2004ರ ನಂತರ ಉದ್ಯೋಗಗಳಿಗೆ ಸೇರಿದ ಎಲ್ಲರಿಗೂ ಅನ್ವಯಿಸುತ್ತದೆ.

ಎಂಟು ಅಖಿಲ ಭಾರತ ಮುಷ್ಕರಗಳು

ಎನ್‌ಪಿಎಸ್ ವಿರೋಧಿಸಿ ಆ ದಿನದಿಂದಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳು ದೇಶಾದ್ಯಂತ ಹೋರಾಟ ನಡೆಸುತ್ತಲೇ ಬಂದಿವೆ. ಆದರೂ, ಫೆಬ್ರವರಿ 2014ರಲ್ಲಿ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ಕಾಯಿದೆ 2013ರ ಅಡಿಯಲ್ಲಿ ಈ ಬಗ್ಗೆ ಅಧಿಸೂಚನೆ ಹೊರಡಿಸಿ ಎನ್‌ಪಿಎಸ್ ಅನ್ನು ಶಾಸನಬದ್ಧಗೊಳಿಸಲಾಯಿತು. ಹಳೆಯ ಪಿಂಚಣಿಯನ್ನು ಪುನಃಸ್ಥಾಪಿಸಲು ಮತ್ತು CPS ರದ್ದುಗೊಳಿಸಲು, 2004ರಿಂದ ದೇಶಾದ್ಯಂತ ಎಂಟು ಅಖಿಲ ಭಾರತ ಮುಷ್ಕರಗಳು ನಡೆದಿವೆ. ಇದರಲ್ಲಿ ಲಕ್ಷಾಂತರ ಕಾರ್ಮಿಕರು, ನೌಕರರು, ಶಿಕ್ಷಕರು ಭಾಗವಹಿಸಿದ್ದರು.

ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು ಸಟ್ಟಾಕೋರ ಬಂಟ ಬಂಡವಾಳಶಾಹಿಯ ಹಿತಾಸಕ್ತಿಗಳನ್ನು ಕಾಪಾಡುವ ತನ್ನ ನವ ಉದಾರವಾದಿ ಧೋರಣೆಗೆ ಅನುಗುಣವಾಗಿ ಪ್ರಯೋಜನಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಈ ಯುಪಿಎಸ್ ಅನ್ನು ಮುಂದಿಟ್ಟಿದೆ. ಇದಕ್ಕೆ ಸರ್ಕಾರದಿಂದ ಪ್ರಸ್ತಾವಿಸಿರುವ ಶೇ.4.5 ಹೆಚ್ಚುವರಿ ದೇಣಿಗೆ 'ನಿರ್ವಹಣೆಯ ಅಡಿಯಲ್ಲಿರುವ ಆಸ್ತಿಗಳು' (ಅಸೆಟ್ಸ್ ಅಂಡರ್ ಮ್ಯಾನೇಜ್ ಮೆಂಟ್–ಎಯುಎಂ) ಎಂದು ಹೇಳಲ್ಪಡುವ ಷೇರು ಮಾರುಕಟ್ಟೆಯಲ್ಲಿನ ತನ್ನ ಹೂಡಿಕೆಯನ್ನು ಇನ್ನಷ್ಟು ಹೆಚ್ಚಿಸುವ ಪ್ರಯತ್ನವಷ್ಟೇ. ಈಗಾಗಲೇ 2024ರ ಜುಲೈ 31ರ ವೇಳೆಗೆ ಈ ಎಯುಎಂ ಅಡಿಯಲ್ಲಿ 99,77,165 ಉದ್ಯೋಗಿಗಳ ಒಟ್ಟು 10,53,850 ಕೋಟಿ ರೂ.ಗಳನ್ನು ಹೂಡಲಾಗಿದೆ.

ಹಳೆಯ ಪಿಂಚಣಿ ಖಾತರಿ ಯೋಜನೆ

ವಾಸ್ತವವಾಗಿ ಒಪಿಎಸ್ (ಹಳೆಯ ಪಿಂಚಣಿ ಯೋಜನೆ) 2004ರವರೆಗೆ ಜಾರಿಯಲ್ಲಿತ್ತು. ಇದನ್ನು ಟ್ರಿಪಲ್ ಬೆನಿಫಿಟ್ಸ್ ಸಿಸ್ಟಮ್ (ಮೂರನೇ ಸೌಲಭ್ಯ ವ್ಯವಸ್ಥೆ) ಎಂದು ಕರೆಯಲಾಗುತ್ತದೆ. ಅಂದರೆ ನಿಖರವಾದ ಪಿಂಚಣಿ, ಪಿಎಫ್, ಗ್ರಾಚ್ಯುಟಿ. ಈ ಮೂರು ಪ್ರತಿ ನಿವೃತ್ತ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆ. ಈ ಸೌಲಭ್ಯಗಳಿಗಾಗಿ ಉದ್ಯೋಗಿ ಯಾವುದೇ ಕೊಡುಗೆಯನ್ನು ಪಾವತಿಸಬೇಕಾಗಿಲ್ಲ. ನಿವೃತ್ತಿಯ ಸಮಯದಲ್ಲಿ ಮೂಲ ವೇತನದ ಶೇ. 50ರಷ್ಟು ಖಾತರಿ ಪಿಂಚಣಿ, ಕಮ್ಯುಟೇಶನ್, ಗ್ರಾಚ್ಯುಟಿ, ಪಿಎಫ್, ಆರೋಗ್ಯ ಕಾರ್ಡ್‌ಗಳು, ಉದ್ಯೋಗಿಗೆ ಪಿಂಚಣಿ ಮತ್ತು ಮರಣ ಹೊಂದಿದಲ್ಲಿ ಕುಟುಂಬಕ್ಕೆ ಪಿಂಚಣಿ ನೀಡಲಾಗುತ್ತದೆ. 70 ವರ್ಷಗಳ ನಂತರ ಹೆಚ್ಚುವರಿ ಪಿಂಚಣಿ ನೀಡಲಾಗುತ್ತದೆ. ಪಿಎಫ್‌ನಲ್ಲಿ ಠೇವಣಿಯಾಗಿರುವ ಮೊತ್ತವು ರಾಜ್ಯದ ಖಜಾನೆಯಲ್ಲಿ ಇರುತ್ತದೆ.



ಕೆಲ ರಾಜ್ಯಗಳಲ್ಲಿ ಹಳೆ ಪಿಂಚಣಿ

ಹಳೆಯ ಪಿಂಚಣಿ ಯೋಜನೆ ಬೇಕು, ಹೊಸ ಪಿಂಚಣಿ ಯೋಜನೆ ರದ್ದುಮಾಡಬೇಕು ಎಂದು ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ವರ್ಷಗಳ ಕಾಲ ಹೋರಾಟ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪಂಜಾಬ್, ಜಾರ್ಖಂಡ್, ಹಿಮಾಚಲ ಪ್ರದೇಶ, ಅಸ್ಸಾಂ ಮತ್ತು ಒರಿಸ್ಸಾ ರಾಜ್ಯಗಳು ಸಿಪಿಎಸ್ (ಕೊಡುಗೆ ಪಿಂಚಣಿ ಯೋಜನೆ) ರದ್ದತಿಗೆ ಮುಂದಾಗಿವೆ. ಮತ್ತೆ ಕೆಲವು ರಾಜ್ಯಗಳು ಸಿಪಿಎಸ್ ಅನ್ನು ರದ್ದುಗೊಳಿಸುವುದಾಗಿ ಹೇಳುತ್ತಿವೆ. ಕರ್ನಾಟಕವೂ ಇತ್ತೀಚೆಗೆ ಹಲವು ಷರತ್ತುಗಳೊಂದಿಗೆ ಕೆಲವರಿಗೆ ಮಾತ್ರ ಸಿಗುವಂತೆ ಹಳೆಯ ಪಿಂಚಣಿ ಸೌಲಭ್ಯ ಕೊಡಲು ಮುಂದಾಗಿದೆ. ಮತ್ತು ಪಿಎಫ್‌ಆರ್‌ಡಿಎಗೆ ರಾಜ್ಯ ಸರ್ಕಾರಿ ನೌಕರರ ದೇಣಿಗೆಗಳ ತಮ್ಮ ಪಾಲನ್ನು ರಾಜ್ಯ ಸರ್ಕಾರಗಳಿಗೆ ಮರುಪಾವತಿಸಲು ಒತ್ತಾಯಿಸುತ್ತಿವೆ. ಆದರೆ ಮೋದಿ ಸರ್ಕಾರವು ರಾಜ್ಯ ಸರ್ಕಾರಗಳ ಎಲ್ಲಾ ಮನವಿಗಳನ್ನು ತಿರಸ್ಕರಿಸಿದೆ.

ಷೇರು ಮಾರುಕಟ್ಟೆಗೆ ಹಣ

ಇದಲ್ಲದೆ, ಉದ್ಯೋಗಿ ಎಷ್ಟು ದಿನಗಳವರೆಗೆ ಸೇವೆಯಲ್ಲಿದ್ದಾನೆ, ಸಂಪೂರ್ಣ ಪಿಂಚಣಿ ನಿಧಿಯನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲಾಗುತ್ತದೆ. ಅಂದರೆ ಷೇರು ಮಾರುಕಟ್ಟೆಗೆ ಹಣ ನೀಡುವುದು ಸರ್ಕಾರದ ಮುಖ್ಯ ಉದ್ದೇಶ. ಈ ಯೋಜನೆಯ ಭಾಗವಾಗಿ, ಸರ್ಕಾರವು ತನ್ನ ಪಾಲನ್ನು ಇನ್ನೂ ಶೇ. 4.5ರಷ್ಟು ಹೆಚ್ಚಿಸಿದೆ. ಮತ್ತಷ್ಟು ಪಿಂಚಣಿ ನಿಧಿಯನ್ನು ಹೂಡಿಕೆ ಮಾಡಲು ಬಿಜೆಪಿ ಈ ನಿರ್ಧಾರ ಕೈಗೊಂಡಿರುವುದು ಸ್ಪಷ್ಟವಾಗಿದೆ. ಸರ್ಕಾರಕ್ಕೆ ಉದ್ಯೋಗಿಗಳ ಹಿತಕ್ಕಿಂತ ಕಾರ್ಪೊರೇಟ್‌ಗಳ ಅಗತ್ಯವೇ ಮುಖ್ಯ ಎಂಬುದನ್ನು ಇದು ತೋರಿಸುತ್ತದೆ. ಈ ನೀತಿಯಲ್ಲಿ, ನಿವೃತ್ತಿಯ ಸಮಯದಲ್ಲಿ ಪಾವತಿಸಿದ ಮೊತ್ತ, ಹೆಚ್ಚುವರಿ ಪಿಂಚಣಿ, ಆರೋಗ್ಯ ಕಾರ್ಡ್‌ಗಳು, ಭವಿಷ್ಯದ ಪರಿಷ್ಕರಣೆಗಳು ಮತ್ತು ತೆರಿಗೆ ಪ್ರಯೋಜನಗಳಂತಹ ಅಂಶಗಳ ಬಗ್ಗೆ ನಿಖರವಾದ ಸ್ಪಷ್ಟತೆ ಇಲ್ಲ.

ಜಮ್ಮು ಮತ್ತು ಕಾಶ್ಮೀರ ಮತ್ತು ಹರಿಯಾಣದಲ್ಲಿ ಶೀಘ್ರದಲ್ಲೇ ಚುನಾವಣೆ ನಡೆಯಲಿದೆ. ಅದರ ನಂತರ ನಿರ್ಣಾಯಕ ರಾಜ್ಯಗಳಾದ ಮಹಾರಾಷ್ಟ್ರ, ಜಾರ್ಖಂಡ್ ಮತ್ತು ಬಿಹಾರದಲ್ಲಿ ಚುನಾವಣೆಗಳು ನಡೆಯಲಿವೆ. ಕಾಂಗ್ರೆಸ್ ಚುನಾವಣೆಯಲ್ಲಿ ಹಳೆಯ ಪಿಂಚಣಿ ಮರುಸ್ಥಾಪನೆಯನ್ನು ಪ್ರಮುಖ ವಿಷಯವಾಗಿ ಆರಿಸಿಕೊಂಡಿದೆ. ಅದಕ್ಕಾಗಿಯೇ ಬಿಜೆಪಿ ಯುಪಿಎಸ್ ಯೋಜನೆಯನ್ನು ತರಾತುರಿಯಲ್ಲಿ ಒಪ್ಪಿಕೊಂಡಿದೆ. ಈ ಯೋಜನೆಯನ್ನು ಬಿಎಂಎಸ್ (ಆರೆಸ್ಸೆಸ್‌ನ ಕಾರ್ಮಿಕ ಅಂಗವಾದ ಭಾರತೀಯ ಮಜ್ದೂರ್ ಸಭಾ) ಹೊರತುಪಡಿಸಿ ಎಲ್ಲಾ ರಾಷ್ಟ್ರೀಯ ಕಾರ್ಮಿಕ ಸಂಘಗಳು ವಿರೋಧಿಸಿವೆ. ಯುಪಿಎಸ್ ಅನ್ನು ಮುಂದಿಟ್ಟುಕೊಂಡು ಕೇಂದ್ರವು ನೌಕರರನ್ನು ದಾರಿ ತಪ್ಪಿಸುತ್ತಿದೆ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘಟನೆಯಾದ ನ್ಯಾಷನಲ್ ಮೂವ್ ಮೆಂಟ್ ಫಾರ್ ಓಲ್ಡ್ ಪೆನ್ಶನ್ ಸ್ಕೀಮ್ ಘೋಷಿಸಿದೆ.

ಹೋರಾಟವೇ ದಾರಿ


ಹಳೆಯ ಪಿಂಚಣಿ ಖಾತರಿ ಯೋಜನೆ ನೌಕರರಿಗೆ ಆಕಸ್ಮಿಕವಾಗಿ ನೀಡಿದ ಖಾತರಿಯಲ್ಲ. ಅದು ಕಾರ್ಮಿಕರ ಸಮರಧೀರ ಹೋರಾಟಗಳ ಮೂಲಕ ಪಡೆದದ್ದು. ಯುಪಿಎಸ್ ಮೂಲಕ ನೌಕರರು ಮತ್ತೊಮ್ಮೆ ವಂಚನೆಗೆ ಸಿದ್ಧರಿಲ್ಲ. ಅದಕ್ಕಾಗಿಯೇ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರು ಹಳೆಯ ಪಿಂಚಣಿ ವ್ಯವಸ್ಥೆಗಾಗಿ ತಮ್ಮ ಚಳುವಳಿಯನ್ನು ಮುಂದುವರೆಸಲು ಸಿದ್ಧತೆ ನಡೆಸಿದ್ದಾರೆ. ನೌಕರರ ಇತಿಹಾಸದಲ್ಲಿ ಮತ್ತು ಯಾವುದೇ ಕ್ಷೇತ್ರದ ಚಳವಳಿಯ ಇತಿಹಾಸದಲ್ಲಿ, ಹೋರಾಟದ ಮೂಲಕ ಗಳಿಸಿದ ಹಕ್ಕುಗಳು ಹೆಚ್ಚು ಕಾಲ ಉಳಿಯುತ್ತವೆ. ಹಳೆಯ ಪಿಂಚಣಿ ವ್ಯವಸ್ಥೆಯನ್ನು ಸಾಧಿಸುವುದು ಸಮಾಜದ ಅಂತಿಮ ಗುರಿಯಾಗಬೇಕು. ಆಡಳಿತಗಾರರ ನೀತಿಗಳ ವಿರುದ್ಧ ಹೋರಾಟ ನಡೆಯಬೇಕು. ಸಮುದಾಯಗಳು ಪರಸ್ಪರ ಶತ್ರುಗಳೆಂಬ ಧೋರಣೆ ಕೈಬಿಡಬೇಕು. ಎಲ್ಲರೂ ಒಗ್ಗೂಡಿದಾಗ ಮಾತ್ರ ಯಾವುದೇ ಸಮಸ್ಯೆಗೆ ಪರಿಹಾರ ಸಾಧ್ಯ ಎಂಬ ಪ್ರಜ್ಞೆ ಮೂಡಬೇಕು. ವೃದ್ಧಾಪ್ಯ ವೇತನ ಪಡೆಯಲು ಐಕ್ಯ ಚಳುವಳಿಗಳು ರೂಪುಗೊಳ್ಳಬೇಕು.

ವಚನ ದರ್ಶನ: ಕೋಮುವಾದಿ ರಾಜಕಾರಣದ ದುಷ್ಟ ಉತ್ಪಾದನೆ

ಡಾ. ಮೀನಾಕ್ಷಿ ಬಾಳಿ

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ಧಿ
ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ತಗರ ಹೋರಟೆ
ಭಕ್ತಿ ಎಂಬುದು ತೋರುಂಬ ಲಾಭ
ಗುಹೇಶ್ವರನೆಂಬುದು ಮೀರಿದ ಘನವು

ವೈದಿಕರು ನಿರೂಪಿಸಿದ ಹುಸಿ ಆಧ್ಯಾತ್ಮವನ್ನು ಅನಾವರಣಗೊಳಿಸಿ ನಿಜವಾದ ಆಧ್ಯಾತ್ಮವನ್ನು ತೆರೆದು ತೋರಿಸಿದ್ದ ಬಸವಾದಿ ಶರಣರನ್ನು ಮತ್ತದೇ ವೇದ ಪ್ರಣೀತ ಶಬ್ದಾಡಂಬರಗಳಿಗೆ ಸೇರಿಸುವ ಪ್ರಯತ್ನವನ್ನು ಈಗ ಆರ್‌ಎಸ್‌ಎಸ್ ಭರದಿಂದ ಮಾಡುತ್ತಿದೆ. 1925ರಿಂದ ವಚನ ಸಿದ್ಧಾಂತದತ್ತ ಹೊರಳಿ ನೋಡದ ಸಂಸ್ಕೃತೋಪಜೀವಿಗಳಿಗೆ ಇದ್ದಕ್ಕಿದ್ದಂತೆ ಈಗ ವಚನಗಳ ಮೇಲೆ ಭಕ್ತಿ ಹುಟ್ಟಲು ಕಾರಣ; ಲಿಂಗಾಯತರ ಮತಗಳನ್ನು ಸೆಳೆದು ಅವರ ವಿಶ್ವಮಾನ್ಯವಾಗುತ್ತಿರುವ ಸಿದ್ಧಾಂತಗಳನ್ನು ಮಣ್ಣು ಮುಕ್ಕಿಸುವ ಒಳ ಹುನ್ನಾರು ತಿಳಿಯದೇನಲ್ಲ. ಮುಳ್ಳನ್ನು ಮುಳ್ಳಿನಿಂದಲೆ ತೆಗೆಯಬೇಕು ಎಂಬ ಅವರ ಸನಾತನ ಚಾಳಿ ಮುಂದುವರೆದಿದೆ. ಆದ್ದರಿಂದಲೆ ವೈದಿಕರು ಲಿಂಗಾಯತ ತತ್ವಗಳನ್ನು ನಾಶಮಾಡಲು ಲಿಂಗಾಯತರನ್ನೆ ಬಳಸಿಕೊಳ್ಳುತ್ತಿದ್ದಾರೆ. ಸಂಘಿ ಗ್ಯಾಂಗ್‌ನವರು ಧಾರ್ಮಿಕ ದಿಗ್ಬಂಧನಗಳ ವಿರುದ್ಧ ಸಾತ್ವಿಕ ಬಂಡೆದ್ದ ಶರಣರನ್ನು ವೈಭವೀಕರಿಸುತ್ತ,



ಅವರ ಮೂಲ ಆಶಯವಾಗಿದ್ದ ದಾಸೋಹ, ಕಾಯಕ ತತ್ವಗಳನ್ನು ಮರೆ ಮಾಚಿ, ಕ್ರಮೇಣ ಭಾರತೀಯ ದಾರ್ಶನಿಕ ಪರಂಪರೆಯಿಂದ ಶರಣರನ್ನು ಶಾಶ್ವತವಾಗಿ ಇಲ್ಲದಂತೆ ಮಾಡುವ ದುಷ್ಟ ಕಾರ್ಯತಂತ್ರ ರೂಪಿಸಿಕೊಂಡಿದ್ದಾರೆ. ಅದರ ಮೊದಲ ಡೋಸ್ "ವಚನ ದರ್ಶನ" ಎಂಬ ಕಳಪೆ ಪುಸ್ತಕವನ್ನು ಪ್ರಕಟಿಸಿ ರಾಜ್ಯವ್ಯಾಪಿ ಬಿಡುಗಡೆಗೊಳಿಸುತ್ತಿರುವುದು.



20 ಲೇಖನಗಳನ್ನು ಒಳಗೊಂಡ ಕಿರುಪುಸ್ತಕವಿದು. ರಾಜಾರಾಮ್ ಹೆಗೆಡೆಯವರಂಥ ಸನಾತನಿ ವ್ಯಸನಿಯೊಬ್ಬನ ಕುತಂತ್ರಿ ಲೇಖನದೊಂದಿಗೆ ಪ್ರಾರಂಭವಾಗುವ ಈ ಪುಸ್ತಕದಲ್ಲಿ ಶರಣರನ್ನು ಆದರ್ಶೀಕರಿಸಿದ ಹಾಗೂ ಮುಗ್ಧ ಭಾವದಲ್ಲಿ ಸ್ಮರಿಸಿದ ಹಸಿ ಬಿಸಿ ಲೇಖನಗಳಿವೆ. ಈ ಲೇಖನಗಳಲ್ಲಿ ಕಲ್ಯಾಣ ಶರಣರ ತಾತ್ವಿಕ ಆಳ–ಅಗಲಗಳನ್ನು ಅರಿಯದೇ ಬರೆದವುಗಳು ಕೆಲವು ಇದ್ದರೆ, ಇನ್ನು ಕೆಲವು ಬಸವಾದಿಗಳ ಪ್ರಾಯೋಗಿಕ ಆಧ್ಯಾತ್ಮದ ಗಂಭೀರತೆಯನ್ನು ಮನಗಂಡೇ ಅವುಗಳನ್ನು ತಿರುಚಿ ಬರೆದ ಲೇಖನಗಳಿವೆ.

ಪ್ರಾಯೋಗಿಕ ಆಧ್ಯಾತ್ಮವನ್ನು ನಿಗೂಢೀಕರಿಸಿ ಜನಸಾಮಾನ್ಯರನ್ನು, ಅದರಲ್ಲಿಯೂ ದುಡಿಯುವ ಜನರನ್ನು, ಪಾಪಿಷ್ಠರೆಂದು ಜರೆದು ಕೀಳಿಕರಿಸಿದ್ದನ್ನು ತಿರಸ್ಕರಿಸಿದವರು ಬಸವಾದಿ ಶರಣರು. ಜನವಿರೋಧಿ ತತ್ವ ಸಿದ್ಧಾಂತಗಳ ಸ್ವಾರ್ಥ ಮತ್ತು ನೀಚತನವನ್ನು ಬಂಡೆದ್ದು ಬಯಲಿಗೆಳೆದ ಬಸವಣ್ಣನವರು, ನವೀನ ಸರ್ವ ಸಮಾನತೆಯ ತತ್ವ ಪ್ರಣಾಲಿಯನ್ನು ಆವಿಷ್ಕರಿಸಿ, ಸಕಲ ಜೀವಾತ್ಮರ ಒಳಿತಿಗಾಗಿ ಶ್ರಮಿಸಿದರು. "ಭಕ್ತಿ" ಎಂಬ ಶುದ್ಧಾಂತಕರಣದ ಪ್ರಜ್ಞಾವಂತ ನಡೆಯನ್ನು ಕರ್ಮಠರ ಹುಸಿ ಆಚರಣೆಗಳಿಂದ ಬಿಡುಗಡೆಗೊಳಿಸಿ, ಚಾತುರ್ವರ್ಣ ವ್ಯವಸ್ಥೆಯನ್ನು ನಿರ್ನಾಮ ಮಾಡಲು ಅಸಂಖ್ಯಾತ ಶರಣರು ತಮ್ಮನ್ನೆ ಬಲಿ ಕೊಟ್ಟುಕೊಂಡರು. ಇಂಥದ್ದೊಂದು ನಡೆ ಜಗತ್ತಿನಲ್ಲಿಯೇ ಅಪರೂಪ ಮತ್ತು ಅವಿಸ್ಮರಣೀಯ.

ಶಿಕ್ಷಣವು ವಿಸ್ತಾರಗೊಂಡಿರುವ ಈ ಕಾಲಘಟ್ಟದಲ್ಲಿ ವಚನ ಸಿದ್ಧಾಂತವು ಜಗತ್ತಿನೆಲ್ಲೆಡೆ ಪಸರಿಸಿ ಪುರಸ್ಕರಿಸಲ್ಪಡುತ್ತಿರುವುದು ವೈದಿಕಶಾಹಿಗಳಿಗೆ ಕಸಿವಿಸಿಯನ್ನುಂಟು ಮಾಡುತ್ತಿದೆ. ವಚನಗಳು ಸಾಂಸ್ಥಿಕ ಮತ ಧರ್ಮಕ್ಕಿಂತ ಹೆಚ್ಚಾಗಿ ಸಕಲ ಜೀವಾತ್ಮರ ಲೇಸು ಬಯಸುವ ಪ್ರಾಯೋಗಿಕ ಬದುಕಿನ ದರ್ಶನಗಳೆಂದೆ ಅಸ್ತಿತ್ವಗೊಂಡಿವೆ. ಈವರೆಗೆ ಅಸಂಖ್ಯಾತ ದುಡಿಯುವ ಜನರನ್ನು ಶೂದ್ರರೆಂದು ಜರೆದು ತುಚ್ಛೀಕರಿಸಿದ ಜನಸಮುದಾಯಗಳು ಕಟ್ಟಿಕೊಂಡಿರುವ ಈ ಆನುಭಾವಿಕ ಸ್ಫುರಣಗಳನ್ನು ನಗಣ್ಯವೆಂದು ಹೇಳಿದ್ದ ಅದೇ ಸನಾತನಿಗಳು ಇಂದು ಅವುಗಳ ಭಜನೆ ಮಾಡಲು ಕಾರಣ ಮುಟ್ಟಿ ಮೈಲಿಗೆ ಮಾಡುವುದೇ ಆಗಿದೆ.

> **ಈ ಕ್ಷಣದಲ್ಲಿ ಅನುಮಾನಕ್ಕೆ ಆಸ್ಪದವಿಲ್ಲದಂತೆ ಕೋಮುವಾದಿ ರಾಜಕಾರಣದ ದುಷ್ಟ ಹುನ್ನಾರ ಇಂಥ ಪುಸ್ತಕಗಳಲ್ಲಿನ ಲೇಖನಗಳನ್ನು ಉತ್ಪಾದಿಸಿ ಪ್ರಚುರಪಡಿಸುತ್ತಿವೆ ಎಂಬುದರಲ್ಲಿ ಎರಡು ಮಾತಿಲ್ಲ.**

ಮೂಲಭೂತವಾಗಿ, ವೇದಾಗಮ ಕರ್ಮಕಾಂಡವನ್ನು ವಿರೋಧಿಸುವ ತತ್ವವನ್ನು ವೇದದ ಬಾಲಂಗೋಚಿ ಎಂದು ವ್ಯಾಖ್ಯಾನ ಮಾಡುವುದು. ಲಿಂಗಾಯತವೂ ವೈದಿಕ ದರ್ಶನದ ಶಾಖೆಯೆಂದು ಸುಳ್ಳುಗಳನ್ನು ಕಟ್ಟಿ ಬೆಳೆಸುವುದು. ಅಚ್ಚ ಬಂಡಾಯದ ಉದ್ದೇಶದಿಂದಲೆ ಹುಟ್ಟಿಕೊಂಡ ವಚನಗಳನ್ನು ಬಂಡಾಯದ ಪ್ರಣಾಳಿಕೆಗಳಲ್ಲ ಎಂದು ಬಿಂಬಿಸುವುದೇ ಈ ಪುಸ್ತಕದ ಗುರಿಯಾಗಿದೆ. ರಾಜಾರಾಂ ಹೆಗೆಡೆ ಇದನ್ನು ತಮ್ಮ ಲೇಖನದಲ್ಲಿ ಬಟಾಬಯಲುಗೊಳಿಸಿದ್ದಾರೆ. ಅವರು ಹೇಳುವುದೇನೆಂದರೆ "ವಚನಗಳ ವಾರಸುದಾರರೆಂದು ಕರೆದುಕೊಳ್ಳುವವರಲ್ಲಿ ಅವನ್ನು ಅರ್ಥೈಸುವ ಹೊಸ ಅಸಂಪ್ರದಾಯಕ ಜಾಡೊಂದು ಇತ್ತೀಚೆಗೆ ತೆರೆಯಿತು." (ವಚನ ದರ್ಶನ ಪುಟ 19) ಅಂದರೆ ವಚನಗಳನ್ನಾಗಲಿ ಅಥವಾ ಭಾರತದ ನೆಲದಲ್ಲಿ ಅರಳಿದ ಎಲ್ಲ ಅವೈದಿಕ ಚಿಂತನಾ ಪ್ರಸ್ಥಾನಗಳನ್ನು ವೇದಾಗಮಗಳ



ಸಾಂಪ್ರದಾಯಿಕ ಜಾಡಿನಲ್ಲದೆ ನೋಡಬಾರದು. ಹಾಗೇ ನೋಡುವುದೆ ಮಹಾ ಅಪರಾಧ ಎನ್ನುತ್ತಾರೆ ವೈದಿಕ ವಕ್ತಾರರು. ಮತ್ತೂ ಮುಂದುವರೆದು "ವಚನಗಳ ಕುರಿತಂತೆ ಇಂದು ಕಥಿತವಾಗುತ್ತಿರುವ ವಾದಗಳು 20 ನೇ ಶತಮಾನದಲ್ಲಿ ರೂಪುಗೊಂಡ ಲಿಬರಲ್ ವಾದ, ಮಾರ್ಕ್ಸವಾದ, ಸ್ತ್ರೀವಾದ ಮುಂತಾದ ಚಿಂತನೆಗಳನ್ನು ಬಳುವಳಿಯಾಗಿ ಪಡೆದಿವೆ." ಎಂದು ಹೇಳಿದ್ದಾರೆ. (ಪುಟ– 24) ಮುನ್ನುಡಿ ಕರುಣಿದ ಮಲ್ಲೇಪುರಂ ಜಿ. ವೆಂಕಟೇಶ ಅವರು "ಇಲ್ಲಿ ಸಂಕಲಿಸಿರುವ ಲೇಖನಗಳು ಸಮಾಜವಾದಿ ಮತ್ತು ಮಾರ್ಕ್ಸ್‌ವಾದಿ ದೃಷ್ಟಿಕೋನಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿ ಸಾಗಿವೆ. ನಾವು ಈ ಸಂದರ್ಭದಲ್ಲಿ ಸಮಾಜವಾದಿ ಮತ್ತು ಮಾರ್ಕ್ಸ್‌ವಾದಿ ದೃಷ್ಟಿಕೋನಗಳ ತತ್ವಮೀಮಾಂಸೆ ಕಡೆ ತಂದಿರುವುದೇ ಹೊರತು, ಸಾಹಿತ್ಯ ಗರ್ಭದಿಂದ ಜನ್ಯಗೊಂಡದಲ್ಲವೆಂಬುದು ಸೂರ್ಯಸ್ಪಷ್ಟ" ಎಂದು ಫರಮಾನು ಹೊರಡಿಸುತ್ತಾರೆ. ಇನ್ನೊಬ್ಬ ಲೇಖಕರಾದ ಸಂಗಮೇಶ ಸವದತ್ತಿಮಠ ಅವರು "ಭಾರತವನ್ನು ಆಕ್ರಮಿಸಿದ ಅನ್ಯ ಸಂಸ್ಕೃತಿಯ ಆಳರಸರು ನಮ್ಮ ಭವ್ಯ ಸಂಸ್ಕೃತಿಯನ್ನು ಹಾಳುಮಾಡಲು ನಿರಂತರ ಪ್ರಯತ್ನ ಪ್ರಯತ್ನ ನಡೆಸಿದರು. ಅದು ಈ ಹೊತ್ತಿಗೂ ಕೆಲ ಎಡ ಪಂಥೀಯ ವಿಚಾರವಾದಿಗಳಿಂದ ನಡೆಯುತ್ತಿದೆ" ಎಂದು ಉವಾಚಿಸಿದ್ದಾರೆ. (ಪುಟ–43) ಅದರ ಸಂಪಾದಕ ಮಹಾಶಯರು ಅಕ್ಕಮಹಾದೇವಿಯ "ಚೆನ್ನಮಲ್ಲಿಕಾರ್ಜುನಿಗೆ ಜಗವೆಲ್ಲಾ ಹೆಣ್ಣು ನೋಡಾ" ಎಂದು ಶಿವಶರಣರು ಹೇಳಿದ ಮೇಲೂ ಕೂಡಾ, ಶರಣ–ಶರಣೆಯರ ಸಂವೇದನೆಗಳನ್ನು ಪ್ರತ್ಯೇಕವಾಗಿಸಿ ಯುರೋಪಿನ ಫೆಮಿನಿಸಂ ದೃಷ್ಟಿಯಲ್ಲಿ ವಿಶ್ಲೇಷಿಸುತ್ತಿರುವುದು ಆತಂಕಕಾರಿಯಾದ ಸಂಗತಿ" ಎಂದು ದುಃಖಿತರಾಗಿದ್ದಾರೆ.

ಒಟ್ಟಾರೆ ಇಲ್ಲಿನ ವೈದಿಕ ಪ್ರಣೀತ ಚಿಂತನಾಧಾರೆಯ ವಿದ್ವಾಂಸರಿಗೆ ಸಮಾಜವಾದ, ಮಾರ್ಕ್ಸವಾದ, ಸ್ತ್ರೀವಾದಗಳೆಂದರೆ ಅಲರ್ಜಿ. ಅವು ಪಾಶ್ಚಾತ್ಯ ವಿಚಾರಧಾರೆಗಳು ಎಂಬ ಕಾರಣಕ್ಕಾಗಿ ಮಾತ್ರವಲ್ಲ, ಅವು ಭಾವವಾದಿ ಅವೈಜ್ಞಾನಿಕ ಪೊಳ್ಳು ದರ್ಶನಗಳನ್ನು ಬೆತ್ತಲೆ ಮಾಡುತ್ತವೆ ಎಂಬುದೇ ಅವರ ನಿದ್ದೆ ಕೆಡಿಸಿದೆ.

ಒಟ್ಟಾರೆ ಇಲ್ಲಿನ ವೈದಿಕ ಪ್ರಣೀತ ಚಿಂತನಾಧಾರೆಯ ವಿದ್ವಾಂಸರಿಗೆ ಸಮಾಜವಾದ, ಮಾರ್ಕ್ಸವಾದ, ಸ್ತ್ರೀವಾದಗಳೆಂದರೆ ಅಲರ್ಜಿ. ಅವು ಪಾಶ್ಚಾತ್ಯ ವಿಚಾರಧಾರೆಗಳು ಎಂಬ ಕಾರಣಕ್ಕಾಗಿ ಮಾತ್ರವಲ್ಲ, ಅವು ಭಾವವಾದಿ ಅವೈಜ್ಞಾನಿಕ ಪೊಳ್ಳು ದರ್ಶನಗಳನ್ನು ಬೆತ್ತಲೆ ಮಾಡುತ್ತವೆ ಎಂಬುದೇ ಅವರ ನಿದ್ದೆ ಕೆಡಿಸಿದೆ.

ಒಂದೆಡೆ ಸಂಪಾದಕರು "ಆನೋ ಭದ್ರಾಃ ಕೃತವೋ ಯಂತು ವಿಶ್ವತಃ" ಎಂಬ ಉಪನಿಷ್ವಾಕ್ಯವನ್ನು ಉದ್ಧರಿಸುತ್ತಲೆ, ಅಂದರೆ ಜ್ಞಾನವೂ ಯಾವ ಮೂಲೆಯಿಂದ ಬಂದರೂ ಸ್ವೀಕರಿಸಬೇಕು ಎಂದು ಹೇಳುತ್ತಲೆ, ಇನ್ನೊಂದೆಡೆ ಈ ಮೇಲೆ ಕಾಣಿಸಿದ ಎಲ್ಲ ವಾದಗಳು ವೈದೇಶಿಕ ಸಮಾಜ ವಿಜ್ಞಾನದ ನೆಲೆಯುಳ್ಳವು ಎನ್ನುವ ಸಂಕುಚಿತ ಬುದ್ಧಿ ತಾಳುತ್ತವೆ. ವಾದಗಳು ಸ್ವದೇಶವೋ, ವಿದೇಶವೋ ಅವು ಜೀವಪರ ಚಿಂತನೆಗೆ ಇಂಬಾಗಿ ನಿಲ್ಲುತ್ತವೆಯಾದರೆ ಅವುಗಳನ್ನು ದೂರವಿಡಬೇಕೆ? ಅವರ ಒಳಗುದಿ ಅದಲ್ಲ. ವಚನಗಳು ವೈದಿಕರ ಸನಾತನವಾದವನ್ನು ಬಯಲು ಮಾಡುತ್ತವೆ. ವರ್ಣಾಶ್ರಮ ವ್ಯವಸ್ಥೆಯನ್ನು ಎರ್ರಾಬಿರ್ರಿ ತರಾಟೆಗೆ ತೆಗೆದುಕೊಳ್ಳುತ್ತವೆ. ಸುಮಾರು 400ಕ್ಕಿಂತಲೂ ಹೆಚ್ಚು ವಚನಗಳಲ್ಲಿ ನೇರವಾಗಿ ಬ್ರಾಹ್ಮಣ್ಯ ಮತ್ತು ವೈದಿಕ ಕರ್ಮಠತೆಯನ್ನು ಹಳಿಯಲಾಗಿದೆ. ಉಳಿದಂತೆ ವೈದಿಕ ಭಾವವಾದಿ ಕಾಣ್ಕೆಯನ್ನು ನಿಸರ್ಗ ವಿವೇಕದ ಚಿಂತನಾ ಪ್ರಸ್ಥಾನಗಳ ನಿಕಷಕ್ಕೊಡ್ಡಿ ನಿರಾಕರಿಸಲಾಗಿದೆ.

ಪುಟ 10 ಕ್ಕೆ







ಕಾಂ.ಸೂರಿಯವರ ಪರಂಪರೆಯನ್ನು ಮುನ್ನಡೆಸಿ.......... ಪುಟ 5 ರಿಂದ

ಹೀಗೆ ಒಟ್ಟಾರೆ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ. ಬಂಡವಾಳಶಾಹಿ ಸಮಾಜದಲ್ಲಿ ಸಂಘಟಿತ ಶಕ್ತಿಯಾಗಿ ಕಾರ್ಮಿಕವರ್ಗದ ಚಳುವಳಿಯು ತನ್ನ ಸ್ವಂತ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಪ್ರಜಾಪ್ರಭುತ್ವ ಹಕ್ಕುಗಳನ್ನು ಸ್ಥಾಪಿಸಲು ಮಧ್ಯಪ್ರವೇಶಿಸುತ್ತದೆ. ಮತ್ತು ಅದನ್ನು ಇತರರಿಗೂ ಕೊಡಮಾಡುತ್ತದೆ. ಒಟ್ಟಾರೆ ಸಾಮಾಜಿಕ ಅಭಿವೃದ್ಧಿಗೆ ಕೊಡುಗೆ ನೀಡುವ ನಾಗರಿಕ ಹಕ್ಕುಗಳನ್ನು ಸ್ಥಾಪಿಸಲು, ರಕ್ಷಿಸಲು ಮತ್ತು ವಿಸ್ತರಿಸಲು ಸಹಾಯ ಮಾಡುತ್ತದೆ ಎಂದರು.

ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಬೆಂಗಳೂರಿನ ಗಿರಣಿ ಕಾರ್ಮಿಕರ ಪಾತ್ರ, 'ಮೈಸೂರು ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರ'ಕ್ಕಾಗಿ ಹೋರಾಟದಲ್ಲಿ ಕೆಜಿಎಫ್ ಕಾರ್ಮಿಕರ ಅದ್ಭುತ ಪಾತ್ರವನ್ನು ಮತ್ತು ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಸಾರ್ವಜನಿಕ ವಲಯದ ಕಾರ್ಖಾನೆಗಳೊಂದಿಗೆ ಬೆಂಗಳೂರಿನ ಅಭಿವೃದ್ಧಿಯನ್ನು ಉದಾಹರಣೆಯಾಗಿ ನೀಡಿದರು. ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯ ನಂತರದ ಕಾರ್ಮಿಕರ ಚಳುವಳಿಯ ಉಬ್ಬರದ ಭಾಗವಾಗಿ ಸಾರ್ವಜನಿಕ ವಲಯದ ಮುಷ್ಕರ, ಮೈಕೊ ಕಾರ್ಮಿಕರ ಮುಷ್ಕರ ಹಾಗೂ ನರಗುಂದ, ನವಲಗುಂದದಲ್ಲಿ ದಂಗೆಯೊಂದಿಗೆ ದಮನಕಾರಿ ಗುಂಡೂರಾವ್ ಸರ್ಕಾರದ ವಿರುದ್ಧ ನಡೆದ ರೈತ ಚಳವಳಿಯನ್ನು ಬೆಂಗಳೂರಿಗೆ ಕೊಂಡೊಯ್ದ ಸುದೀರ್ಘ ರೈತ ಕಾರ್ಮಿಕರ ಜಾಥಾವನ್ನು ಅವರು ಬಣ್ಣಿಸಿದರು. ಇದು ಅಂತಿಮವಾಗಿ ರಾಜ್ಯದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರ ರಚನೆಗೆ ಕಾರಣವಾಯಿತು. ಇದು ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ವಿಸ್ತರಣೆಗೆ ಕಾರಣವಾಯಿತು. ಇದು ತಂತ್ರಜ್ಞಾನ ಮತ್ತು ಪರಿಣತ ಮಾನವಶಕ್ತಿಯ ಹಾಗೂ ಸಾರ್ವಜನಿಕ ವಲಯಗಳ ಎಲೆಕ್ಟ್ರಾನಿಕ್ ಕಾರ್ಖಾನೆಗಳ ಭದ್ರ ಬುನಾದಿಯ ಜೊತೆಗೆ ಬೆಂಗಳೂರು ಐಟಿ ಉದ್ಯಮದ ಕೇಂದ್ರವಾಗಲು ಕಾರಣವಾಯಿತು. ಭಾರತದ ಐಟಿ ಉದ್ಯಮದ ಕೇಂದ್ರವಾಗಿ ಈ ಹೊಸ ಉದ್ಯಮವು ಬೆಂಗಳೂರು ಮತ್ತು ಕರ್ನಾಟಕದ ಅಭಿವೃದ್ಧಿಯನ್ನು ಮುಂದಕ್ಕೆ ಒಯ್ದಿತು ಎನ್ನುತ್ತಾ ಕಾಂ. ವಿಜೆಕೆಯವರು ಕಾರ್ಮಿಕರ ಚಳುವಳಿ ಮತ್ತು ಕರ್ನಾಟಕದ ಅಭಿವೃದ್ದಿಗಳ ನಡುವಿನ ಸಂಭಂದವನ್ನು ವಿವರಿಸಿದರು.

ಸಿಐಟಿಯು ಕರ್ನಾಟಕ ಪ್ರಧಾನ ಕಾರ್ಯದರ್ಶಿ ಕಾಂ. ಮೀನಾಕ್ಷಿಸುಂದರಂ ಸ್ವಾಗತಿಸಿದರು. ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಕಾಂ. ಯು.ಬಸವರಾಜ್ ಮಾತನಾಡಿದರು.

ನರಗುಂದ ರೈತ ಬಂಡಾಯ, ಮೈಕೋ, ಸಾರ್ವಜನಿಕ ವಲಯ, ಮೈಸೂರು ನಗರದಲ್ಲಿ ನಡೆದ ಹೋರಾಟಗಳು ಸೇರಿದಂತೆ ವಿವಿಧ ಪ್ರಮುಖ ಹೋರಾಟಗಳಲ್ಲಿ ಕಾಂ. ಸೂರಿಯವರೊಂದಿಗೆ ಕೆಲಸ ಮಾಡಿದ ಒಡನಾಡಿಗಳ ಸಂಸ್ಮರಣೆಯ ಅಧಿವೇಶನವೂ ನಡೆಯಿತು. ಕಾಂ. ಸೂರಿ ಕುರಿತು ಕಿರುಪುಸ್ತಕವನ್ನು ಬಿಡುಗಡೆ ಮಾಡಿ ಅದನ್ನು ವ್ಯಾಪಕವಾಗಿ ವಿತರಿಸಲಾಯಿತು. ಕಾಂ. ಸೂರಿಯವರ ಜೀವನ ಮತ್ತು ಹೋರಾಟದ ಚಿತ್ರಗಳಿರುವ 20 ನಿಮಿಷಗಳ ವೀಡಿಯೊ ಒಂದನ್ನು ಸಹ ಬಿಡುಗಡೆ ಮಾಡಲಾಯಿತು ಮತ್ತು ಅದನ್ನು ಯೂಟ್ಯೂಬ್‌ನಲ್ಲಿ ಕಾಣಬಹುದು. ಈ ಕಾರ್ಯಕ್ರಮದಲ್ಲಿ 1500 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಕಾಂ. ಸೂರಿ ಅವರ ಪುತ್ರಿ ರೇಖಾ ಉಪಸ್ಥಿತರಿದ್ದರು. ಅಂತರರಾಷ್ಟ್ರೀಯ ಪದಕ ವಿಜೇತ ಕ್ರೀಡಾಪಟುವಾದ ರೇಖಾ ಅವರ ಪುತ್ರ ಅಖಿಲ್ ಅಹ್ಮದ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

"ಶ್ರಮ ಸಂಸ್ಕೃತಿ ನಾಟಕೋತ್ಸವ"

ಕಾಂ. ಸೂರಿ ಜನ್ಮಶತಮಾನೋತ್ಸವವನ್ನು ಕಾರ್ಮಿಕರ ನಾಟಕಗಳ ಉತ್ಸವ "ಶ್ರಮ ಸಂಸ್ಕೃತಿ ನಾಟಕೋತ್ಸವ"ದೊಂದಿಗೆ ಆಗಸ್ಟ್ 6ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಾರಂಭಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಆಗಸ್ಟ್ 6ರಂದು ಮೂರು ನಾಟಕಗಳನ್ನು ಪ್ರದರ್ಶಿಸಲಾಯಿತು. ಅದರಲ್ಲಿ 'ಕಾಂ. ಸೂರಿ ಅವರ ಜೀವನ ಮತ್ತು ಹೋರಾಟಗಳ' ನಾಟಕ ಗಮನಾರ್ಹವಾಗಿದೆ. ಮಂಡ್ಯದ ಕಾರ್ಮಿಕ ಮಹಿಳಾ ತಂಡದಿಂದ ಪ್ರದರ್ಶಿತವಾದ "ನ್ಯಾಯ ಕೇಳಿದ ನಿಂಗವ್ವ', ರಾಷ್ಟ್ರಕವಿ ಕುವೆಂಪು ಅವರ "ಜಲಗಾರ" ಪ್ರದರ್ಶಿಸಲಾದ ಇನ್ನೆರಡು ನಾಟಕಗಳು. ಈ ಮೂರೂ ನಾಟಕಗಳಲ್ಲಿನ ಹಲವು ಪಾತ್ರಧಾರಿಗಳು ಕಾರ್ಮಿಕ ಸಂಘಟನೆಯಲ್ಲಿ ಸಕ್ರಿಯವಾಗಿರುವವರು.

ಕಾಂ. ಸೂರಿಯವರ ಜನ್ಮಶತಮಾನೋತ್ಸವವನ್ನು ರಾಜ್ಯದಾದ್ಯಂತ ಮುಖ್ಯವಾಗಿ ಕಾರ್ಮಿಕ ವರ್ಗದ ಕೇಂದ್ರಗಳಲ್ಲಿ ವಿಚಾರ ಸಂಕಿರಣಗಳು, ಮೇಲೆ ಹೇಳಿದ ನಾಟಕಗಳ ಮರು ಪ್ರದರ್ಶನಗಳು ಮತ್ತು ಇತರ ಸಾಂಸ್ಕೃತಿಕ ಪ್ರದರ್ಶನಗಳೊಂದಿಗೆ ಆಚರಿಸಲು ಯೋಜಿಸಲಾಗಿದೆ. ●

ವಚನ ದರ್ಶನ: ಕೋಮುವಾದಿ ರಾಜಕಾರಣದ ದುಷ್ಟ ಉತ್ಪಾದನೆ...... ಪುಟ 9 ರಿಂದ

ಈವರೆಗೂ ಭಾರತೀಯ ಚಿಂತನಾ ಪ್ರಸ್ತಾನವೆಂದು ಕೇವಲ ವೈದಿಕ ಪಠ್ಯಗಳನ್ನು ಮಾತ್ರ ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿಗೆ ತಂದು, ಅದುವೇ ಒಟ್ಟು ಭಾರತದ ಸಂಸ್ಕೃತಿ ಎಂದು ನಂಬಿಸಲಾಗಿತ್ತು. ಹೀಗೆಂದೇ ಆಧುನಿಕ ವೈದಿಕ ವಿದ್ವಾಂಸರು ಪ್ರಚುರ ಪಡಿಸಿದ್ದರು. "20ನೇ ಶತಮಾನದ ಭಾರತೀಯ ತತ್ವಶಾಸ್ತ್ರವನ್ನು ಚಾರಿತ್ರಿಕ ಸಮೀಕ್ಷೆ ಎಂಬ ಕ್ರಮದಲ್ಲಿ ಬರೆಯುವಾಗ, ಕೆಲಸ ಮಾಡುತ್ತಿರುವ ಒಂದು ಪ್ರಧಾನ ಸೈದ್ಧಾಂತಿಕ ಒತ್ತಡ ಎಂದರೆ ಏಕೀಕೃತ ಭಾರತೀಯ ದರ್ಶನದ್ದು. ಹೀಗಾಗಿ ಎಲ್ಲ ಭಿನ್ನ ಸ್ವರಗಳನ್ನು, ಖಂಡಗಳನ್ನು, ಪ್ರತ್ಯೇಕ ಅಸ್ತಿತ್ವಗಳನ್ನು ಒಂದು ವಿಶಾಲ ಚೌಕಟ್ಟಿನೊಳಗೆ ಅಡಗಿಸುವ ಪ್ರಯತ್ನ ಈ ಇಡೀ ಶತಮಾನದ ಪ್ರಮುಖ ಚಾರಿತ್ರಿಕ ಸಮೀಕ್ಷೆ ಹಾಗೂ ಸಂಗ್ರಹಗಳಲ್ಲಿ ಕಾಣುತ್ತದೆ. ಭಾರತೀಯ ತತ್ವಜ್ಞಾನದ ಬಗ್ಗೆ ಚಾರಿತ್ರಿಕವಾಗಿ ವ್ಯಾಖ್ಯಾನಿಸುವ ಎಲ್ಲ ಮಹತ್ವದ ಚಿಂತಕರಿಗೂ ಈ ಏಕೀಕರಣದ ಸೈದ್ಧಾಂತಿಕ ಹಠ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಕಾಡಿದೆ. ರಾಷ್ಟ್ರೀಯವಾದದ ರಾಜಕೀಯ ಅಗತ್ಯ ತತ್ವಜ್ಞಾನವನ್ನು ಸಂಗ್ರಹಿಸುವಾಗಲೂ ಕೆಲಸ ಮಾಡಿದೆ" ಎಂದು ಡಿ.ಆರ್.ನಾಗರಾಜ್ ತಮ್ಮ 'ಅಲ್ಲಮಪ್ರಭು ಮತ್ತು ಶೈವಪ್ರತಿಭೆ' ಕೃತಿಯಲ್ಲಿ ಢಾಳವಾಗಿ ಗುರುತಿಸಿದ್ದಾರೆ. (ಪುಟ 12) ನಾಗರಾಜ್ ರೇನೋ ತತ್ವಜ್ಞಾನವನ್ನು ಸಂಗ್ರಹಿಸುವಾಗ ಅಪ್ರಜ್ಞಾಪೂರ್ವಕವಾಗಿ ಇಂಥ ಅಪಸವ್ಯಗಳು ಘಟಿಸಿವೆ ಎಂದು ಅನುಮಾನ ಪಡುತ್ತಾರೆ. ಆದರೆ ಈ ಕ್ಷಣದಲ್ಲಿ ಅನುಮಾನಕ್ಕೆ ಆಸ್ಪದವಿಲ್ಲದಂತೆ ಕೋಮುವಾದಿ ರಾಜಕಾರಣದ ದುಷ್ಟ ಹುನ್ನಾರ ಇಂಥ ಪುಸ್ತಕಗಳಲ್ಲಿನ ಲೇಖನಗಳನ್ನು ಉತ್ಪಾದಿಸಿ ಪ್ರಚುರಪಡಿಸುತ್ತಿವೆ ಎಂಬುದರಲ್ಲಿ ಎರಡು ಮಾತಿಲ್ಲ.

ವಚನಕಾರರಿಗೆ ಇಹದ ಬದುಕು ಆನುಭಾವಿಕ ಲೋಕಕ್ಕೆ ನಿಕಷವಾಗಿತ್ತು. "ಮತ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ" ಎನ್ನುತ್ತ "ಸುಖ ಬಂದಡೆ ಪುಣ್ಯದ ಫಲವೆನ್ನೆನು, ದುಃಖ ಬಂದಡೆ ಪಾಪದ ಫಲವೆನ್ನೆನು" ಹೀಗೆ ಹೇಳಿದ ದಾರ್ಶನಿಕರನ್ನು ನಿಗೂಢೀಕರಿಸಿದ ಭಾವವಾದಿಗಳೆಂಬಂತೆ ಬಿಂಬಿಸುವ ಪ್ರಯತ್ನ ಇಲ್ಲಿನದು.

ವಚನಕಾರರಿಗೆ ಇಹದ ಬದುಕು ಆನುಭಾವಿಕ ಲೋಕಕ್ಕೆ ನಿಕಷವಾಗಿತ್ತು. "ಮತ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ" ಎನ್ನುತ್ತ "ಸುಖ ಬಂದಡೆ ಪುಣ್ಯದ ಫಲವೆನ್ನೆನು, ದುಃಖ ಬಂದಡೆ ಪಾಪದ ಫಲವೆನ್ನೆನು" ಹೀಗೆ ಹೇಳಿದ ದಾರ್ಶನಿಕರನ್ನು ನಿಗೂಢೀಕರಿಸಿದ ಭಾವವಾದಿಗಳೆಂಬಂತೆ ಬಿಂಬಿಸುವ ಪ್ರಯತ್ನ ಇಲ್ಲಿನದು. ರಾಜಾರಾಂ ಹೆಗಡೆ ಮತ್ತು ಟೀಂ ಈಗಾಗಲೇ ಭಾರತದಲ್ಲಿ ಜಾತಿಗಳೆ ಇಲ್ಲ. ವರ್ಣ, ವರ್ಗ, ಲಿಂಗ ತಾರತಮ್ಯಗಳೆಲ್ಲವೂ ಮನಸ್ಸಿನ ಭ್ರಮೆ. ಇಲ್ಲದಿರುವ ಸಂಗತಿಯನ್ನು ಇರುವಂತೆ ಭಾವಿಸಲು ಹಚ್ಚಿದವರು ಪಾಶ್ಚಾತ್ಯರು. ಆದ್ದರಿಂದ ಶರಣರು ಹಂಗೆಲ್ಲ ಸಮಾಜ ಬದಲಾವಣೆಗೆ ಕ್ರಾಂತಿಕಾರಿ ಆಂದೋಲನ ಮಾಡಿಲ್ಲ. ಅವರು ಅಪ್ಪಟ ಆಧ್ಯಾತ್ಮ ಜೀವಿಗಳು. ಅದು ಕೂಡ ವೈದಿಕ ಪ್ರಣೀತ ಆಧ್ಯಾತ್ಮ ಎಂದು ಬಿಂಬಿಸಲು ಹೊರಟಿದ್ದಾರೆ. ಆ ಆಧ್ಯಾತ್ಮವಾದರೂ ಎಂಥದ್ದು ಎಂದರೆ "ವ್ಯಕ್ತಿಯೊಬ್ಬನು ಎಷ್ಟೇ ಅಧಿಕಾರವನ್ನು, ಸಂಪತ್ತನ್ನು, ಭೋಗ ಭಾಗ್ಯಗಳನ್ನು ಹೊಂದಿರಲಿ, ಅಷ್ಟಾಗಿಯೂ ಅವನು ದುಃಖಿಯಾಗಿರಬಹುದು. ಇವುಗಳ ಕಾರಣದಿಂದಲೇ ದುಃಖವು ವೃದ್ಧಿಸುತ್ತದೆ ಎಂಬ ಸತ್ಯವು ನಮ್ಮ ಅನುಭವಕ್ಕೆ ಆಗಾಗ ಬರುತ್ತಿರುತ್ತದೆ. ಈ ಸಾಮಾನ್ಯ ಲೌಕಿಕ ಜ್ಞಾನವನ್ನು ಆಧ್ಯಾತ್ಮ ಸಂಪ್ರದಾಯಗಳು ಆಧರಿಸಿವೆ. ಇದಕ್ಕೆ ವ್ಯತಿರಿಕ್ತವಾಗಿ ಲೌಕಿಕವಾಗಿ ಬಡವ–ಶ್ರೀಮಂತ, ಸ್ತ್ರೀ–ಪುರುಷ, ಬಾಲ–ವೃದ್ಧ–ವಿಕಲ ಇತ್ಯಾದಿಯಾಗಿ ಯಾವುದೇ ಅವಸ್ಥೆಯಲ್ಲಿರುವ ಒಬ್ಬ ಮನುಷ್ಯನಿಗೂ ಈ ಆನಂದ ಸಮಾನವಾಗಿ ಸಾಧ್ಯವಿದೆ. ಈ ಕಾರಣದಿಂದ ಮನುಷ್ಯನು ಈ ಲೌಕಿಕ ಸಂಗತಿಗಳಲ್ಲಿ ಸುಖ ದುಃಖಗಳಿವೆ ಎಂದು ನಿರ್ಣಯಿಸುವುದೇ ಒಂದು ತಪ್ಪು ಹೆಜ್ಜೆ" ಮತ್ತೂ ಮುಂದುವರೆದು "ಭಾರತೀಯ ಪರಂಪರೆಗಳ ಪ್ರಕಾರ ಮಾನವನ ಒಳಿತಿನ ಕುರಿತು ಚಿಂತಿಸುವಾಗ ಲೌಕಿಕ ಪ್ರಪಂಚವನ್ನು ಅಂತಿಮ ಆಧಾರವಾಗಿಟ್ಟುಕೊಳ್ಳುವುದು ಒಂದು ತಪ್ಪು ಹೆಜ್ಜೆ" (ಪುಟ–28,29) ಎಂದು ಬರೆಯುತ್ತಾರೆ. ಶತಮಾನಗಳುದ್ದಕ್ಕೂ ಇಂಥ ಮಾತುಗಳನ್ನೆ ಹೇಳಿ ಬಡತನ, ಸಿರಿತನ, ಸ್ತ್ರೀ, ಪುರುಷ, ಪಂಡಿತ, ಪಾಮರ ಇವೆಲ್ಲವೂ ನಿಮ್ಮ ಪೂರ್ವದ ಕರ್ಮ ಫಲ ಎಂದೇ ನಂಬಿಸಿಕೊಂಡು ಬರಲಾಗಿತಷ್ಟೇ. ಮತ್ತದೆ ಹಳಸಲು ಹೆಂಡವನ್ನು ಕುಡಿಸಲು ವೈದಿಕ ಪಟಾಲಂ ಮುಂದಾಗಿದೆ. ಇದಕ್ಕೆ ಆಲಂಬನವಾಗಿ ಅವರು ವಚನ ಸಿದ್ಧಾಂತವನ್ನು ಬಳಸಿ ಬಿಸಾಡಲು ಮುಂದಾಗಿದ್ದಾರೆ. ಆದರೆ ವಚನಕಾರರಲ್ಲಿ ವೈದಿಕರ ಈ ಕುತಂತ್ರಕ್ಕೆ ತಿಲಮಾತ್ರವೂ ಅವಕಾಶವಿಲ್ಲ ಎಂಬದನ್ನು ವಚನಗಳೆ ಸಾಕ್ಷಿಕರಿಸುತ್ತವೆ.

"ವಚನ ದರ್ಶನ" ಎಂಬ ಪುಸ್ತಕವನ್ನು ಸಂಘ ಪರಿವಾರದ ವಕ್ತಾರರು ಅಯೋಧ್ಯೆ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ. ಮುಖಪುಟದಲ್ಲಿ ಹೆಸರಿಲ್ಲದ ಭಾವ ಚಿತ್ರವೊಂದನ್ನು ಪ್ರಕಟಿಸಿ ವೈದಿಕ ಸಾಧಕನೊಬ್ಬನ ಭಾಸವಾಗುವಂತೆ ಮಾಡಿದ್ದಾರೆ. ಮುಖಪುಟದ ತುದಿಯಲ್ಲಿ ಬಿಲ್ಲು ಬಾಣದ ಸಂಕೇತವಿದೆ. ಸಕಲ ಜೀವಾತ್ಮರಿಗೆ ಲೇಸು ಬಯಸಿದ ಪರಮ ಅಹಿಂಸಾವಾದಿಗಳಾಗಿದ್ದ ಶರಣರನ್ನು ಹಿಂಸಾರಭಸ ಮತಿಗಳೆಂದು ಬಿಂಬಿಸುವ ಪ್ರಯತ್ನ ಮಾಡಲಾಗುತ್ತಿದೆ.

ಅಲ್ಲಮಪ್ರಭು ಬಹಳ ಸ್ಪಷ್ಟವಾಗಿ ಅಂದು

"ಅಜ್ಞಾನವೆಂಬ ತೊಟ್ಟಿಲೊಳಗೆ,
ಜ್ಞಾನವೆಂಬ ಶಿಶುವ ಮಲಗಿಸಿ,
ಸಕಲ ವೇದ ಶಾಸ್ತವೆಂಬ ನೇಣ ಕಟ್ಟಿ,
ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ,
ಭ್ರಾಂತಿಯೆಂಬ ತಾಯಿ!
ತೊಟ್ಟಿಲು ಮುರಿದು, ನೇಣು ಹರಿದು,
ಜೋಗುಳ ನಿಂದಲ್ಲದೆ,
ಗುಹೇಶ್ವರನೆಂಬ ಲಿಂಗವ ಕಾಣಬಾರದು ನೋಡಾ"

ಎಂದು ಹೇಳಿರುವಾಗಲೂ ವೈದಿಕರು ಮತ್ತೆ ಶರಣರನ್ನು ವೈದಿಕ ಕರ್ಮಠತೆಯಲ್ಲಿ ಹಿಡಿದಿಡುವ ವೃಥಾ ಕಸರತ್ತು ಮಾಡಿದ್ದಾರೆ. ಭೌತವಾದಿ ಚಿಂತನಾ ಪ್ರಸ್ಥಾನಗಳು ಭಾರತಕ್ಕೆ ತೀರ ಹೊಸದೇನೂ ಅಲ್ಲ. ಈಗಾಗಲೇ ಈ ನೆಲದಲ್ಲಿ ಲೋಕಾಯತ, ಚಾರ್ವಾಕ, ಸಾಂಖ್ಯ, ನ್ಯಾಯ, ವೈಶೇಷಿಕ, ಯೋಗ ಮುಂತಾದ ದರ್ಶನಗಳಲ್ಲಿ ಅದು ಕಾಣಿಸಿಕೊಂಡಿದೆ. ಇವೆಲ್ಲವೂ ವೈದಿಕ ವಿರೋಧಿ ನಿಲುವು–ನೆಲೆಗಳನ್ನು ಹೊಂದಿರುವಾಗಲೂ ಅವುಗಳನ್ನು ಕೂಡ ತನ್ನ ವಾತಾಪಿ ಗರ್ಭದಲ್ಲಿ ಜೀರ್ಣಿಸಿಕೊಳ್ಳುವ ಪ್ರಯತ್ನ ಮಾಡುತ್ತಲೆ ಬಂದಿದೆ. ಅವೆಲ್ಲವೂ ವೇದಗಳ ಮುಂದುವರೆದ ಭಾಗವೆಂದೇ ಆಕರ್ಷಕ ವಾಗ್ವಿಲಾಸವನ್ನು ಮೆರೆಯುತ್ತಲೆ ಇವೆ. ಈಗ ಅವರ ಕಾಕದೃಷ್ಟಿಗೆ ವಚನಗಳು ಬಿದ್ದಿವೆ. ಆದರೆ ಅರ್ವಾಚೀನ ಕಾಲಘಟ್ಟದ ವಚನ ದರ್ಶನವನ್ನು ಅರಗಿಸಿಕೊಳ್ಳಲು ಅಷ್ಟು ಸುಲಭವಲ್ಲ. ಇವರು ಮಹಾನ್ ದಾರ್ಶನಿಕ ಕೃತಿಗಳೆಂದು ಬಿಂಬಿಸುತ್ತಿರುವ ರಾಮಾಯಣ ಮಹಾಭಾರತಗಳನ್ನು ಕುರಿತು ಬಸವಣ್ಣ

ಆದಿ ಪುರಾಣ ಅಸುರರಿಗೆ ಮಾರಿ,
ವೇದ ಪುರಾಣ ಹೋತಿಂಗೆ ಮಾರಿ
ರಾಮಪುರಾಣ ರಕ್ಕಸರಿಗೆ ಮಾರಿ
ಭಾರತ ಪುರಾಣ ಗೋತ್ರಕ್ಕೆ ಮಾರಿ
ಎಲ್ಲಾ ಪುರಾಣ ಕರ್ಮಕ್ಕೆ ಮೊದಲು
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ
ಕೂಡಲಸಂಗಮದೇವಾ" ಎಂದಿದ್ದಾರೆ.

ರಾಮ ಮಂದಿರವೆಂಬ ಸ್ಥಾವರವೊಂದನ್ನು ಕಟ್ಟಲೆಂದು ಧರ್ಮ ಪಾಲನೆ ಹೆಸರಲ್ಲಿ ಸಾವಿರಾರು ಹೆಣಗಳನ್ನು ಉರುಳಿಸಲಾಯಿತು. ಆರ್‌ಎಸ್‌ಎಸ್ ಧೂರ್ತರಿಗೂ ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ ಎಂಬ ಬಸವ ಚಳುವಳಿಗೂ ಎಂದಾದರೂ ಸಮೀಕರಣ ಸಾಧ್ಯವೆ?

"ವಚನ ದರ್ಶನ" ಎಂಬ ಪುಸ್ತಕವನ್ನು ಸಂಘ ಪರಿವಾರದ ವಕ್ತಾರರು ಅಯೋಧ್ಯೆ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ. ಮುಖಪುಟದಲ್ಲಿ ಹೆಸರಿಲ್ಲದ ಭಾವ ಚಿತ್ರವೊಂದನ್ನು ಪ್ರಕಟಿಸಿ ವೈದಿಕ ಸಾಧಕನೊಬ್ಬನ ಭಾಸವಾಗುವಂತೆ ಮಾಡಿದ್ದಾರೆ. ಮುಖಪುಟದ ತುದಿಯಲ್ಲಿ ಬಿಲ್ಲು ಬಾಣದ ಸಂಕೇತವಿದೆ. ಸಕಲ ಜೀವಾತ್ಮರಿಗೆ ಲೇಸು ಬಯಸಿದ ಪರಮ ಅಹಿಂಸಾವಾದಿಗಳಾಗಿದ್ದ ಶರಣರನ್ನು ಹಿಂಸಾರಭಸ ಮತಿಗಳೆಂದು ಬಿಂಬಿಸುವ ಪ್ರಯತ್ನ ಮಾಡಲಾಗುತ್ತಿದೆ. ಶಿವಶರಣರ ಆತ್ಮ ಪ್ರತ್ಯಯಾತ್ಮಕ ಅನನ್ಯ ಭಕ್ತಿಯನ್ನು ಮಸಳಿಸಿ ದುರ್ಬಲ ಮನಸಿನ ಭಕ್ತಿ ಲೋಲುಪ್ತತೆಯನ್ನು ಆರೋಪಿಸಲಾಗುತ್ತಿದೆ. ಇದೊಂದು ಚಾರಿತ್ರಿಕ ದ್ರೋಹ ಮತ್ತು ದಾರ್ಶನಿಕ ಭ್ರಷ್ಟತೆ ಎನ್ನದೆ ಗತ್ಯಂತರವಿಲ್ಲ. ●

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ನ 16ನೇ ರಾಜ್ಯ ಸಮ್ಮೇಳನ ಚಿಕ್ಕಬಳ್ಳಾಪುರದಲ್ಲಿ ಸೆಪ್ಟೆಂಬರ್ 17ರಿಂದ 19ರ ವರೆಗೆ ನಡೆಯಲಿದೆ. ಸಾರ್ವತ್ರಿಕ ಶಿಕ್ಷಣ, ಸಮಾನತೆ, ಸೌಹಾರ್ದತೆಗಾಗಿ ಎಂಬುದು ಎಸ್‌ಎಫ್‌ಐ ನ ಘೋಷ ವಾಕ್ಯಗಳಾಗಿವೆ. ''ಶಿಕ್ಷಣದ ಪ್ರಜಾಪ್ರಭುತ್ವೀಕರಣಕ್ಕಾಗಿ, ಶಿಕ್ಷಣದ ವಿಕೇಂದ್ರೀಕರಣಕ್ಕಾಗಿ, ಶಿಕ್ಷಣದ ಧರ್ಮನಿರಪೇಕ್ಷಕ್ಕಾಗಿ ಹಾಗೂ ವಿದ್ಯಾರ್ಥಿಗಳ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ'' ಸಂಘಟನೆ ಪಣತೊಟ್ಟು ನಿಂತಿದೆ. ಆದರೆ, ಸರ್ಕಾರವು ಸಾರ್ವಜನಿಕರಿಗೆ ಶಿಕ್ಷಣವನ್ನು ಒದಗಿಸುವ ತನ್ನ ಸಾಮಾಜಿಕ ಜವಾಬ್ದಾರಿಯನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ಹಸ್ತಾಂತರಿಸುವ ಕಡೆಗೆ ಪ್ರಯಾಣಿಸಿದೆ. ಈ ಸಂದರ್ಭದಲ್ಲಿ ಒಂದು ಲೇಖನ.

ಶಿಕ್ಷಣ ಎಂಬುದು ಸರಕಲ್ಲ ಶಿಕ್ಷಣ ಮಾರಾಟದ ವಸ್ತುವಾಗಬಾರದು



ಸಾಮಾಜಿಕ ಒಳಿತಿಗಾಗಿ ಶಿಕ್ಷಣ. ಶಿಕ್ಷಣ ಎಂಬುದು ಮಾರಟದ ಸರಕಲ್ಲ. ಇದನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಬಾರದು ಅಥವಾ ಖರೀದಿಸಬಾರದು. ನೆಲ್ಸನ್ ಮಂಡೇಲಾ ಅವರು "ಖಾಸಗೀಕರಣವು ಶಿಕ್ಷಣದ ಹಕ್ಕನ್ನು ಮೊಟಕುಗೊಳಿಸುತ್ತದೆ" ಎಂದು ಹೇಳಿದ್ದರು. ಖ್ಯಾತ ಶಿಕ್ಷಣ ತಜ್ಞ ಪಾವ್ಲೊ ಫ್ರಿಯಾರಿ ಅವರ ಪ್ರಕಾರ, "ಶಿಕ್ಷಣವು ತುಳಿತಕ್ಕೊಳಗಾದ ಜನರ ಸೃಜನಶೀಲತೆಯನ್ನು ಹೊರತರುವುದು ಮತ್ತು ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ದಮನಕಾರಿ ಸಮಾಜದಲ್ಲಿ ಸ್ವಾತಂತ್ರ್ಯದ ಶಕ್ತಿಯನ್ನು ಅಭಿವೃದ್ಧಿಪಡಿಸುವುದು."

ಶಿಕ್ಷಣ ಖಾಸಗೀಕರಣದತ್ತ ದಾಪುಗಾಲು

1990ರಲ್ಲಿ ಹೊಸ ಆರ್ಥಿಕ ಸುಧಾರಣೆಗಳು ಪ್ರಾರಂಭವಾದ ಕಳೆದ ಮೂರು ದಶಕಗಳಲ್ಲಿ, ಸರ್ಕಾರವು ಸಾರ್ವಜನಿಕರಿಗೆ ಶಿಕ್ಷಣವನ್ನು ಒದಗಿಸುವ ತನ್ನ ಸಾಮಾಜಿಕ ಜವಾಬ್ದಾರಿಯನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ಹಸ್ತಾಂತರಿಸುವ ಕಡೆಗೆ ಪ್ರಯಾಣ ಪ್ರಾರಂಭಿಸಿತು. ಭಾರತದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 1978 ರಲ್ಲಿ ಶೇ.3.4 ರಿಂದ 1993 ರ ವೇಳೆಗೆ ಶೇ.9.2 ಕ್ಕೆ ಏರಿತು. 2021–22 UDISE ಪ್ರಕಾರ, 2022 ರ ವೇಳೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಶೇ.33ಕ್ಕೆ ಏರಿದೆ. ಇಂದು ಖಾಸಗಿ ಶಾಲೆಗಳ ಸಂಖ್ಯೆ ಶೇ.2.3 ರಿಂದ ಶೇ.23ಕ್ಕೆ ಏರಿಕೆಯಾಗಿದೆ. ಈ ಅಂಕಿಅಂಶಗಳು 90ರ ನಂತರ ಕಳೆದ ಮೂರು ದಶಕಗಳಲ್ಲಿ ದೇಶದಲ್ಲಿ ಶಾಲಾ ಶಿಕ್ಷಣದ ಖಾಸಗೀಕರಣದ ವೇಗವನ್ನು ತೋರಿಸುತ್ತವೆ. ಈ ಖಾಸಗಿ ಶಾಲೆಗಳಲ್ಲಿ ಸುಮಾರು 8 ಕೋಟಿ 83 ಲಕ್ಷ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಈ ಸಂಸ್ಥೆಗಳಲ್ಲಿ 3 ಲಕ್ಷ 41 ಸಾವಿರ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಒಟ್ಟು ಶಿಕ್ಷಕರಲ್ಲಿ ಶೇ. 38. UNESCO ದ GEM (Global Education Monitoring Report)–2022 ವರದಿಯ ಪ್ರಕಾರ, 2014 ರಿಂದ ಸ್ಥಾಪಿಸಲಾದ 97,000 ಶಾಲೆಗಳಲ್ಲಿ 67,000 ಖಾಸಗಿ ಶಾಲೆಗಳಿವೆ. UNESCO ಅಂಕಿಅಂಶಗಳ ಪ್ರಕಾರ, ಶಾಲಾ ಶಿಕ್ಷಣವನ್ನು ಖಾಸಗೀಕರಣಗೊಳಿಸಿದ 187 ದೇಶಗಳಲ್ಲಿ ಭಾರತವು 15 ನೇ ಸ್ಥಾನದಲ್ಲಿದೆ. ಅಂದರೆ, ಶಾಲಾ ಶಿಕ್ಷಣವು ಇಲ್ಲಿ ವೇಗವಾಗಿ ಮಾರಾಟವಾಗುತ್ತಿದೆ ಎಂಬುದನ್ನು ಈ ಅಂಕಿಅಂಶಗಳು ತೋರಿಸುತ್ತವೆ. UNESCO ಅಂಕಿಅಂಶಗಳ ಪ್ರಕಾರ ನಮ್ಮ ನೆರೆಯ ಶ್ರೀಲಂಕಾದಲ್ಲಿ 3.2 ರಷ್ಟು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಮಾತ್ರ ಖಾಸಗಿ ಶಾಲೆಗಳಲ್ಲಿ ಓದುತ್ತಾರೆ.

ಮಕ್ಕಳಿಗೆ ಶಿಕ್ಷಣ ನೀಡುವ ಬಯಕೆಯು ಭಾರತೀಯ ಸಮಾಜದಲ್ಲಿ ಧನಾತ್ಮಕ ಅಂಶವಾಗಿದೆ. ಪಾಲಕರು ತಮ್ಮ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ಗುಣಮಟ್ಟದ ಶಿಕ್ಷಣ ನೀಡಬೇಕೆಂದು ಬಯಸುತ್ತಾರೆ. ಈ ಆಶಯಗಳಿಗೆ ಅನುಗುಣವಾಗಿ ಸರಕಾರಿ ಶಾಲೆಗಳನ್ನು ಸ್ಥಾಪಿಸಿ, ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸರಕಾರ ವಿಫಲವಾಗಿರುವುದು, ವಿದ್ಯಾರ್ಥಿಗಳು ಖಾಸಗಿ ಶಿಕ್ಷಣ ಸಂಸ್ಥೆಗಳ ಹಾದಿ ಹಿಡಿಯಲು ಪ್ರಮುಖ ಕಾರಣವಾಗಿದೆ. UNESCO GEM–2022 ರ ಪ್ರಕಾರ, ಖಾಸಗಿ ಶಾಲೆಗಳಿಗೆ ಹೋಗುವ ಶೇ.73 ವಿದ್ಯಾರ್ಥಿಗಳ ಪೋಷಕರು, ತಮ್ಮ ಮಕ್ಕಳಿಗೆ ಸಾರ್ವಜನಿಕ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುವುದಿಲ್ಲ ಎಂದು ಹೇಳುತ್ತಾರೆ. ಶೇ.12 ರಷ್ಟು ಇಂಗ್ಲಿಷ್ ಮಾಧ್ಯಮ ಶಿಕ್ಷಣಕ್ಕಾಗಿ, ಶೇ.10.2 ರಷ್ಟು ಸಾರ್ವಜನಿಕ ಶಾಲೆಗಳು ಲಭ್ಯವಿಲ್ಲದ ಕಾರಣ ಮತ್ತು ಶೇ.4.7 ಇತರ ಕಾರಣಗಳಿಗಾಗಿ ಖಾಸಗಿ ಶಾಲೆಗಳಿಗೆ ಸೇರುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಪ್ರತಿ ಏಳು ಶಾಲೆಗಳಿಗೆ ಒಂದು ಶಾಲೆಯಲ್ಲಿ, ಒಂದರಿಂದ ಐದನೆಯ ತರಗತಿಗಳವರೆಗೆ ಒಬ್ಬರೇ ಶಿಕ್ಷಕರು ಬೋಧಿಸುತ್ತಾರೆ. ಆದರೆ ಶೇ.81.4ರಷ್ಟು ಖಾಸಗಿ ಶಾಲೆಗಳಲ್ಲಿ ತರಗತಿಗೆ ಒಬ್ಬ ಶಿಕ್ಷಕರಿದ್ದಾರೆ.

ಶೈಕ್ಷಣಿಕ ಅಸಮಾನತೆ

ಸಾರ್ವಜನಿಕ ಸಂಸ್ಥೆಗಳು ಸೀಮಿತ ಸಂಪನ್ಮೂಲಗಳೊಂದಿಗೆ ಹೋರಾಡುತ್ತಿರುವಾಗ, ಖಾಸಗಿ ಘಟಕಗಳು ವೇಗವಾಗಿ ಹೆಜ್ಜೆ ಹಾಕುತ್ತವೆ, ಇದು ಹೆಚ್ಚಿದ ಶೈಕ್ಷಣಿಕ ಅಸಮಾನತೆಗೆ ಕಾರಣವಾಗುತ್ತದೆ. ಕಡಿಮೆ–ಆದಾಯದ ಹಿನ್ನೆಲೆಯ ವಿದ್ಯಾರ್ಥಿಗಳ ಮೇಲೆ ಇದು ಪರಿಣಾಮ ಬೀರುತ್ತಾರೆ, ಏಕೆಂದರೆ ಅವರು ಖಾಸಗಿ ಶಿಕ್ಷಣದ ಹೆಚ್ಚಿನ ವೆಚ್ಚವನ್ನು ತುಂಬಲು ಅಸಮರ್ಥರಾಗಿದ್ದಾರೆ. ಸಾರ್ವಜನಿಕ ಶಿಕ್ಷಣವು ದುರ್ಬಲಗೊಂಡಂತೆ, ಸಮಾಜದ ಬಡವರು ಮತ್ತು ದುರ್ಬಲ ವರ್ಗಗಳು (ಮಹಿಳೆಯರು, ದುರ್ಬಲ ಜಾತಿಗಳು, ತಾರತಮ್ಯ ಧರ್ಮಗಳು ಮತ್ತು ಸಾಮಾನ್ಯವಾಗಿ ಬಡವರು) ಶೈಕ್ಷಣಿಕ ಅಸಮಾನತೆಗಳನ್ನು ಎದುರಿಸುತ್ತಾರೆ, ಇದು ಈ ವಿಭಾಗಗಳನ್ನು ಮತ್ತಷ್ಟು ಪರಿಧಿಗೆ ತಳ್ಳುತ್ತದೆ ಎಂದು ಖಚಿತಪಡಿಸುತ್ತದೆ. ಅವರು ಉತ್ತಮ, ಅತ್ಯಾಧುನಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ ಏಕೆಂದರೆ ಅದು ಅವರಿಗೆ ತುಂಬಾ ದುಬಾರಿಯಾಗಿದೆ ಮತ್ತು ಶ್ರೀಮಂತರು ಮಾತ್ರ ಸಂಗ್ರಹಿಸಬಹುದಾದ ಆಸ್ತಿಯಾಗಿದೆ. ಆಗಲೇ ಇದ್ದ ಅಸಮಾನತೆಗಳು ವಿಸ್ತಾರಗೊಳ್ಳುತ್ತಾ ಮುಂದಿನ ಪೀಳಿಗೆಗೂ ದಾಟುತ್ತವೆ. ತಾತ್ಕಾಲಿಕ ಅಸಮಾನತೆ ಬಲಗೊಳ್ಳುತ್ತದೆ ಮತ್ತು ಇಂಟರ್ ಜನರೇಶನಲ್ ಅಸಮಾನತೆಯಾಗುತ್ತದೆ.

3.75 ಟ್ರಿಲಿಯನ್ ಡಾಲರ್ ಜಿಡಿಪಿಯೊಂದಿಗೆ ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿರುವ ಭಾರತವು, 2025 ರ ವೇಳೆಗೆ ಐದು ಟ್ರಿಲಿಯನ್ ಡಾಲರ್ ಗಳೊಂದಿಗೆ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೆಮ್ಮೆಪಡುವುದನ್ನು ನಾವು ನೋಡುತ್ತೇವೆ. ಇಂತಹ ದೇಶದಲ್ಲಿ ಭಾರತದ ಭಾವಿ ಪ್ರಜೆಗಳ ಶಿಕ್ಷಣಕ್ಕೆ ಶೇಕಡ ಮೂರಕ್ಕಿಂತ ಕಡಿಮೆ ಖರ್ಚು ಮಾಡಿ, ಸರ್ಕಾರವು ಸಾರ್ವಜನಿಕರಿಗೆ ಶಿಕ್ಷಣವನ್ನು ಒದಗಿಸುವ ತನ್ನ ಸಾಮಾಜಿಕ ಜವಾಬ್ದಾರಿಯಿಂದ ನುಣುಚಿಕೊಂಡು ಕಾರ್ಪೋರೇಟ್ ಗಳ ಕೈಗೆ ಕೊಡಲು ಮುಂದಾಗಿದ್ದಾರೆ.

ಒಂದು ಲಕ್ಷ ಶಿಕ್ಷಕರ ಹುದ್ದೆಗಳು ಖಾಲಿ

ಎನ್‌ಇಪಿ (ಹೊಸ ಶಿಕ್ಷಣ ನೀತಿ) ಯಂತಹ ಅನೇಕ ವರದಿಗಳು ಸರ್ಕಾರಿ ಶಿಕ್ಷಕರು ಬೋಧಕೇತರ ಕರ್ತವ್ಯಗಳನ್ನು ಹೊಂದಿರಬಾರದು ಎಂದು ಸೂಚಿಸಿವೆ. ಆದರೆ, ಸರಕಾರಗಳು ಬೋಧಕೇತರ ಕೆಲಸಗಳನ್ನು ಶಿಕ್ಷಕರ ಮೇಲೆ ಹೇರುವುದರಿಂದ ಬೋಧನೆಯ ಸಮಯ ಕಡಿಮೆಯಾಗುತ್ತಿದೆ. ಇದು ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಹೀಗಾಗಿ ಸರ್ಕಾರಿ ಶಾಲೆಗಳು ಜನಸಾಮಾನ್ಯರ ವಿಶ್ವಾಸ ಕಳೆದುಕೊಂಡಿವೆ. ಐದು ತರಗತಿಗಳಿಗೆ ಒಬ್ಬರೇ ಶಿಕ್ಷಕರಿಂದ ಶಿಕ್ಷಣ ನೀಡುವುದು ಶಿಕ್ಷಣದ ಹಕ್ಕನ್ನು ನಿರಾಕರಿಸಿದಂತಾಗುತ್ತದೆ. ಕೇಂದ್ರ ಶಿಕ್ಷಣ ಇಲಾಖೆಯ ಅಂಕಿ ಅಂಶಗಳ ಪ್ರಕಾರ ಈಗಾಗಲೇ ದೇಶಾದ್ಯಂತ 1:30ರ ಅನುಪಾತದಲ್ಲಿ ಒಂದು ಲಕ್ಷ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇವರು ಒಟ್ಟು ಶಿಕ್ಷಕರಲ್ಲಿ ಶೇ. 15.7 ರಷ್ಟಿದ್ದಾರೆ. ಇದು ಸಾರ್ವಜನಿಕ ಶಿಕ್ಷಣದ ಮೇಲಿನ ಸರ್ಕಾರದ ಪ್ರೀತಿ ಎಷ್ಟಿದೆ ಎಂಬುದನ್ನು ತೋರಿಸುತ್ತದೆ.

ಶಿಕ್ಷಣದ ಪ್ರಾಥಮಿಕ ಗುರಿಗಳೇನು?

ಶಿಕ್ಷಣ, ಪ್ರಜಾಸತ್ತಾತ್ಮಕ ಮೌಲ್ಯಗಳ ಅಭಿವೃದ್ಧಿ, ಸಾಮಾಜಿಕ ನೈತಿಕ ಮೌಲ್ಯಗಳ ಅಭಿವೃದ್ಧಿ ಮತ್ತು ಅಂತರಾಷ್ಟ್ರೀಯ ಜಾಗೃತಿಯ ಅಭಿವೃದ್ಧಿಯ ಮೂಲಕ ಸಾಮಾಜಿಕ–ರಾಷ್ಟ್ರೀಯ ಏಕೀಕರಣವನ್ನು ಸಾಧಿಸುವ ಉದ್ದೇಶಗಳನ್ನು ಕೊಠಾರಿ ಆಯೋಗವು ಸೂಚಿಸಿದೆ. ರಾಷ್ಟ್ರೀಯ ಶಿಕ್ಷಣ ನೀತಿ (NEP)–1986 ಸಹ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಬೋಧನೆ, ಕ್ರೀಡೆ ಮತ್ತು ವ್ಯಾಯಾಮಕ್ಕೆ ಸರಿಯಾದ ಸ್ಥಳ, ಜಾತ್ಯತೀತ ಮಾನವೀಯ ಮೌಲ್ಯಗಳ ಪ್ರಚಾರ ಮತ್ತು ಶಿಕ್ಷಣದಲ್ಲಿ ಸಮಾನ ಅವಕಾಶಗಳ ಉದ್ದೇಶಗಳನ್ನು ನಿಗದಿಪಡಿಸಿದೆ. ಹೊಸ ಶಿಕ್ಷಣ ವ್ಯವಸ್ಥೆಯು ಸಹ ಬಹುತೇಕ ಅದೇ ಉದ್ದೇಶಗಳನ್ನು ಸೂಚಿಸುತ್ತದೆ. ದೇಶದ ಅರ್ಧದಷ್ಟು ಮಕ್ಕಳು ಓದುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಮತ್ತು ಬೋಧನಾ ವಿಧಾನಗಳ ಮೇಲೆ ನಿಗಾ ಇಡದೆ ಭಾರತದ ಭವಿಷ್ಯವನ್ನು ನಿರ್ಮಿಸಲು ಸಾಧ್ಯವಿಲ್ಲ. ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂಬುದು ASAR ವರದಿ ಮತ್ತು UNESCO ದ GEM ವರದಿಗಳಿಂದ ಸ್ಪಷ್ಟವಾಗಿದೆ. 3ನೇ ತರಗತಿಯ ಶೇ. 20.5, ಐದನೇ ತರಗತಿಯ ಶೇ. 42.8 ಹಾಗೂ ಎಂಟನೇ ತರಗತಿಯ ಶೇ. 69.2 ವಿದ್ಯಾರ್ಥಿಗಳು ಮಾತ್ರ ಎರಡನೇ ತರಗತಿಯ ಪಠ್ಯಪುಸ್ತಕವನ್ನು ಓದಬಲ್ಲರು ಎಂದರೆ, ಈ ಶಿಕ್ಷಣ ಸಂಸ್ಥೆಗಳಲ್ಲಿನ ಗುಣಮಟ್ಟವನ್ನು ಅರ್ಥಮಾಡಿಕೊಳ್ಳಬಹುದು.

ಶಿಕ್ಷಣದ ಖಾಸಗೀಕರಣದಿಂದ ಶಿಕ್ಷಣ ಕ್ಷೇತ್ರವು ಹೊಸ ಸವಾಲುಗಳನ್ನು ಎದುರಿಸುತ್ತಿದೆ. ಖಾಸಗೀಕರಣ ನೀತಿಗಳು ಶಾಲೆಗಳಲ್ಲಿ ಹಣ ಹೂಡಿಕೆಗೆ ಮಾತ್ರ ಸೀಮಿತವಾಗಿಲ್ಲ. ಶಿಕ್ಷಣದ ಪ್ರಾಥಮಿಕ ಉದ್ದೇಶವನ್ನು ಮರೆಸಲು ಹೊಸ ಉದ್ದೇಶಗಳು ಮತ್ತು ನಿರ್ವಹಣಾ ವಿಧಾನಗಳನ್ನು ಪರಿಚಯಿಸಲಾಗುತ್ತಿದೆ. ಮಾರುಕಟ್ಟೆ ಮೌಲ್ಯಗಳನ್ನು ಹೆಚ್ಚಿಸಲು ಶಿಕ್ಷಣವನ್ನು ಬದಲಾಯಿಸುತ್ತಿದ್ದಾರೆ ಮತ್ತು ಶಿಕ್ಷಣವು ಅದರ ಮಾಧುರ್ಯವನ್ನು ಕಳೆದುಕೊಳ್ಳುವಂತೆ ಮಾಡುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳ ನಡುವಿನ ಲಾಭದ ಪೈಪೋಟಿಯ ಭಾಗವಾಗಿ ಶಾಲೆಗಳ ಕೆಲಸದ ಸಮಯವನ್ನು ಹೆಚ್ಚಿಸಿ, ಶಾಲಾ ಹಂತದಲ್ಲಿಯೇ JEE, NEET, IAS ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧಗೊಳಿಸುತ್ತಿರುವುದು ವಿದ್ಯಾರ್ಥಿಗಳ ಮೇಲೆ ತೀವ್ರ ಒತ್ತಡವನ್ನು ಹೆಚ್ಚಿಸುತ್ತಿದೆ. ಶಿಕ್ಷಣದ ಸ್ವರೂಪವನ್ನು ಮಾತ್ರವಲ್ಲದೆ ನಿರ್ಣಾಯಕ ಸಾಮಾಜಿಕ–ಸಾಂಸ್ಕೃತಿಕ ಸಂಬಂಧಗಳನ್ನೂ ಪರಿವರ್ತಿಸುತ್ತಿವೆ.

ಶಿಕ್ಷಣಕ್ಕೆ ಶೇ. 3ಕ್ಕಿಂತ ಕಡಿಮೆ ವೆಚ್ಚ

3.75 ಟ್ರಿಲಿಯನ್ ಡಾಲರ್ ಜಿಡಿಪಿಯೊಂದಿಗೆ ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿರುವ ಭಾರತವು, 2025 ರ ವೇಳೆಗೆ ಐದು ಟ್ರಿಲಿಯನ್ ಡಾಲರ್‌ಗಳೊಂದಿಗೆ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೆಮ್ಮೆಪಡುವುದನ್ನು ನಾವು ನೋಡುತ್ತೇವೆ. ಇಂತಹ ದೇಶದಲ್ಲಿ ಭಾರತದ ಭಾವಿ ಪ್ರಜೆಗಳ ಶಿಕ್ಷಣಕ್ಕೆ ಶೇಕಡ ಮೂರಕ್ಕಿಂತ ಕಡಿಮೆ ಖರ್ಚು ಮಾಡುತ್ತಿದೆ. 2024–25 ರ ಒಕ್ಕೂಟ ಬಜೆಟ್ ಉನ್ನತ ಶಿಕ್ಷಣ ಕ್ಷೇತ್ರದ ನಿರ್ವಹಣೆಗಾಗಿ ಜಿಡಿಪಿ (ಒಟ್ಟು ದೇಶೀಯ ಉತ್ಪನ್ನ) ಯ ಕೇವಲ ಶೇ.3ಕ್ಕಿಂತ ಕಡಿಮೆ ಮೀಸಲಿಟ್ಟಿದೆ. ಇತರ ದೇಶಗಳಿಗೆ ಹೋಲಿಸಿದರೆ ಭಾರತದ ಶಿಕ್ಷಣ ವೆಚ್ಚ ಗಣನೀಯವಾಗಿ ಕಡಿಮೆಯಾಗಿದೆ. ಉದಾಹರಣೆಗೆ, ಇಂಗ್ಲೆಂಡ್ ಮತ್ತು ಅಮೆರಿಕ ಶಿಕ್ಷಣಕ್ಕಾಗಿ ತಮ್ಮ ಜಿಡಿಪಿ ಯ ಸರಿಸುಮಾರು ಶೇ.5–6 ಅನ್ನು ಖರ್ಚು ಮಾಡುತ್ತವೆ.

ವಿದ್ಯಾರ್ಥಿಗಳಿಗೆ ಅಸಮಾನ ಅವಕಾಶಗಳನ್ನು ಕಲ್ಪಿಸುವ ಈ ಶಿಕ್ಷಣ ಪದ್ಧತಿಯನ್ನು ಬದಲಿಸಿ, ಕೊಠಾರಿ ಆಯೋಗದ ಸಲಹೆಯಂತೆ ಸಾಮಾನ್ಯ ಶಾಲಾ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಶಿಕ್ಷಣದ ಅತ್ಯಾಧುನಿಕ ವ್ಯಾಪಾರದ ದವಡೆಯಿಂದ ಮಕ್ಕಳನ್ನು ರಕ್ಷಿಸಿ, ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಬಿಡುವಿನ ಸಮಯ, ಆಟವಾಡುವ ಹಕ್ಕು ಮತ್ತು ಸಾಕಷ್ಟು ಸೌಲಭ್ಯಗಳನ್ನು ಒದಗಿಸಬೇಕು. ಶಿಕ್ಷಣ ತಜ್ಞರು ಸೂಚಿಸಿದಂತೆ ಯಾವುದೇ ತರಗತಿಯ ಪಠ್ಯಕ್ರಮವನ್ನು ಆ ತರಗತಿಯಲ್ಲಿ ಮಾತ್ರ ಕಲಿಸಲು ಕ್ರಮಕೈಗೊಳ್ಳಬೇಕು. ಕೆಲಸದ ಹಕ್ಕನ್ನು ಅಂದರೆ, ಉದ್ಯೋಗ ಖಾತರಿಯನ್ನು ಭವಿಷ್ಯದ ಭಾರತದ ನಾಗರಿಕರಿಗೆ ಜೀವನದ ಗುಣಮಟ್ಟವನ್ನು ಖಾತರಿಪಡಿಸುವ ಮೂಲಕ ಒದಗಿಸಬೇಕು. ಆ ಹೆಸರಿನಲ್ಲಿ ವ್ಯಾಪಾರ ನಿಲ್ಲಿಸಬೇಕು. ಆಗ ಮಾತ್ರ ನಮ್ಮ ದೇಶವು ಅತ್ಯಂತ ಆನಂದದಾಯಕ ದೇಶಗಳೊಂದಿಗೆ ಸ್ಪರ್ಧಿಸುತ್ತದೆ. ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ಸಂತೋಷದ ದೇಶಗಳ ಪಟ್ಟಿಯಲ್ಲಿ 136 ದೇಶಗಳ ಪೈಕಿ ನಮ್ಮ ದೇಶ 126ನೇ ಸ್ಥಾನದಲ್ಲಿದೆ. ಅಂದರೆ ಈ ದೇಶದಲ್ಲಿ ಜನರು ಎಷ್ಟು ಸಂತೋಷವಾಗಿದ್ದಾರೆ ಎಂಬುದನ್ನು ಇದು ತಿಳಿಸುತ್ತದೆ. ಈ ವಿಷಯದಲ್ಲಿ ನಾವು ನಮ್ಮ ನೆರೆಯ ರಾಷ್ಟ್ರಗಳಾದ ಶ್ರೀಲಂಕಾ, ನೇಪಾಳ, ಚೀನಾ ಮತ್ತು ಬಾಂಗ್ಲಾದೇಶಕ್ಕಿಂತ ಹಿಂದೆ ಇದ್ದೇವೆ. ಶಿಕ್ಷಣದ ಹೆಸರಿನಲ್ಲಿ ಬಲಗೊಳ್ಳುತ್ತಿರುವ ಮಕ್ಕಳ ಹಕ್ಕುಗಳನ್ನು ರಕ್ಷಿಸದೆ ಈ ದೇಶದ ಜನರ ಸಂತಸ ವೃದ್ಧಿಸಲಾರದು.

ಸರ್ಕಾರವು NEP 2020 ರ ಶಿಫಾರಸುಗಳಿಗೆ ಅನುಗುಣವಾಗಿ ಹೂಡಿಕೆಯನ್ನು ಗಮನಾರ್ಹವಾಗಿ ಹೆಚ್ಚಿಸಬೇಕು, ಸಂಪನ್ಮೂಲಗಳ ಸಮಾನ ವಿತರಣೆಯನ್ನು ಖಚಿತಪಡಿಸಿಕೊಳ್ಳಬೇಕು, ಮೂಲಸೌಕರ್ಯವನ್ನು ಹೆಚ್ಚಿಸಬೇಕು, ನಿರಂತರ ಶಿಕ್ಷಕರ ತರಬೇತಿಯನ್ನು ಒದಗಿಸಬೇಕು ಮತ್ತು ಅಂಚಿನಲ್ಲಿರುವ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ಹೆಚ್ಚಿಸಬೇಕು. ಈ ನಿರ್ಣಾಯಕ ಸಮಸ್ಯೆಗಳನ್ನು ಪರಿಹರಿಸುವ ಮೂಲಕ, ಭಾರತವು ನಾವೀನ್ಯತೆ, ಒಳಗೊಳ್ಳುವಿಕೆ ಮತ್ತು ಸಾಮಾಜಿಕ–ಆರ್ಥಿಕ ಪ್ರಗತಿಯನ್ನು ಉತ್ತೇಜಿಸುವ ದೃಢವಾದ ಶಿಕ್ಷಣ ವ್ಯವಸ್ಥೆಯನ್ನು ನಿರ್ಮಿಸಬಹುದು. ಕ್ಷೇತ್ರದೊಳಗೆ ಮತ್ತಷ್ಟು ಖಾಸಗೀಕರಣ ಮತ್ತು ಅಸಮಾನತೆಯನ್ನು ತಡೆಯಲು ನಿರ್ಣಾಯಕ ಕ್ರಮ ತೆಗೆದುಕೊಳ್ಳಬೇಕು.

–ಸಿಚಿ

ರೈತರ ದೇಶಪ್ರೇಮಿ ಚಳವಳಿಯ ಬಗ್ಗೆ ಮತ್ತೆ ಕಂಗನಾ ತುಚ್ಛ ಮಾತುಗಳು ಮತ್ತು ಪ್ರಧಾನಿ ಮೌನ

"ಬಾಂಗ್ಲಾ ದೇಶದಂತಹ ಅರಾಜಕತೆ ಭಾರತದಲ್ಲೂ ರೈತರ ಪ್ರತಿಭಟನೆಯ ಹೆಸರಿನಲ್ಲಿ ನಡೆಯಬಹುದಾಗಿತ್ತು. ಬಾಹ್ಯ ಶಕ್ತಿಗಳು ನಮ್ಮನ್ನು ಧ್ವಂಸ ಮಾಡಲು ಯೋಜಿಸುತ್ತಿವೆ. ನಮ್ಮ ಮುಖಂಡತ್ವದ ಮುನ್ನೋಟವಿಲ್ಲದಿದ್ದರೆ ಅವರು ಗೆಲ್ಲುತ್ತಿದ್ದರು" ಎಂಬ ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದ ಬಿಜೆಪಿ ಲೋಕಸಭಾ ಸದಸ್ಯೆ ಕಂಗನಾ ರನೌತ್ ಟ್ವೀಟ್ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಸ್ವತಃ ಆಕೆಯ ಪಕ್ಷ ಕೂಡ ಆಕೆಯ ಬೆಂಬಲಕ್ಕೆ ಬರಲು ಸಾಧ್ಯವಾಗಿಲ್ಲ. ಬದಲಾಗಿ ಆಕೆಗೆ ಪಕ್ಷದ ಧೋರಣೆಗಳ ಬಗ್ಗೆ ಹೇಳಿಕೆಗಳನ್ನು ನೀಡುವ ಅನುಮತಿಯಾಗಲೀ, ಅಧಿಕಾರವಾಗಲೀ ಇಲ್ಲ, ಭವಿಷ್ಯದಲ್ಲಿ ಆಕೆ ಇಂತಹ ಹೇಳಿಕೆಗಳನ್ನು ನೀಡಬಾರದು ಎಂದು ತಿಳಿಸಿರುವುದಾಗಿ ಅದು ಹೇಳಿದೆ. ಆಕೆಯ ಹೇಳಿಕೆಯನ್ನು ಬಿಜೆಪಿ ಒಪ್ಪುವುದಿಲ್ಲ, ಅದು 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್, ಸಭ್ ಕಾ ವಿಶ್ವಾಸ್ ಸಬ್ ಕಾ ಪ್ರಯಾಸ್' ನೀತಿಗಳಿಗೆ ಬದ್ಧವಾಗಿದೆ ಎಂದು ಅದು ಹೇಳಿದೆ.

ಆದರೆ ಕಂಗನಾ ರನೌತ್ ಇಷ್ಟಕ್ಕೇ ನಿಲ್ಲದೆ, ತನ್ನ ಟ್ವೀಟ್ ಜತೆಗೆ ಹಾಕಿದ ವೀಡಿಯೋದಲ್ಲಿ ರೈತರ ಪ್ರತಿಭಟನೆಗಳಲ್ಲಿ "ಹತ್ಯೆಗಳು ಮತ್ತು ಅತ್ಯಾಚಾರಗಳು ನಡೆದವು" ಎಂದೂ ಹೇಳಿದ್ದಾರೆ ಮತ್ತು ಅಮೆರಿಕ, ಚೀನಾದಂತಹ ಹೊರಗಿನ ಶಕ್ತಿಗಳು ಕೆಲಸ ಮಾಡುತ್ತಿವೆ ಎಂದೂ ಮುಂದುವರೆದು ಹೇಳಿರುವುದಾಗಿ ವರದಿಯಾಗಿದೆ.

ಕೊನೆಗೂ, ಮೂರೂ ಕೃಷಿ ಕಾಯ್ದೆಗಳನ್ನು ರದ್ದು ಮಾಡಿರುವುದು ಅವರ 'ನಮ್ಮ ಮುಖಂಡತ್ವದ' ಮುನ್ನೋಟವೋ, ಅಥವ ಕೃಷಿ ಕಾಯ್ದೆಗಳನ್ನು ಹಿಂಪಡೆದು ರೈತರ ಆಗ್ರಹಗಳನ್ನು ಈಡೇರಿಸಲಾಗುವುದು ಎಂದು ಆಶ್ವಾಸನೆ ನೀಡಿಯೂ ಎರಡು ವರ್ಷಗಳ ನಂತರವೂ ಅದರ ಬಗ್ಗೆ ಮೌನವಾಗಿರುವುದೋ ಎಂದು ಕಂಗನಾ ಹೇಳಿಲ್ಲ.

ಇವುಗಳಲ್ಲಿ ಯಾವುದರ ಬಗ್ಗೆ ಬಿಜೆಪಿಗೆ 'ಭಿನ್ನಾಭಿಪ್ರಾಯ' ಇದೆ ಎಂದು ಬಿಜೆಪಿಯೂ ಸ್ಪಷ್ಟವಾಗಿ ಹೇಳಿಲ್ಲ. ಈಗಾಗಲೇ ಮೂರು ಕೃಷಿ ಕಾಯ್ದೆಗಳ ಬಗ್ಗೆ ತೀವ್ರ ಆಕ್ರೋಶವಿರುವ ಹರ್ಯಾಣದಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಭಾರೀ ಸಮಸ್ಯೆಗಳನ್ನು ಎದುರಿಸುತ್ತಿರುವ ಬಿಜೆಪಿಗೆ ಕಂಗನಾ ಅವರ ಈ ಹೇಳಿಕೆ ಬಹಳಷ್ಟು ಮುಜುಗರ ಉಂಟು ಮಾಡಿದೆ ಎಂದು ಹೇಳಲಾಗುತ್ತಿದೆ.

ಆಕೆ ಎಂಪಿಯಾಗಿ ಆರಿಸಲ್ಪಟ್ಟ ಎರಡೇ ದಿನಗಳ ನಂತರ, ವಿಮಾನ ನಿಲ್ದಾಣದಲ್ಲಿ ಮಹಿಳಾ ಭದ್ರತಾ ಸಿಬ್ಬಂದಿಯೊಬ್ಬರು ಆಕೆಯ ಮೇಲ ಕೈಮಾಡಿ ಅಮಾನತುಗೊಂಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು: ಚಳುವಳಿಯ ಸಂದರ್ಭದಲ್ಲಿ ರೈತ ಮಹಿಳೆಯರು "100ರೂ. ಬಾಡಿಗೆಗೆ" ಬಂದವರು ಎಂಬ ತುಚ್ಛ ಮಾತುಗಳನ್ನು ಆಡಿದ್ದರ ವಿರುದ್ಧ ಆಕ್ರೋಶದಿಂದ ಹೀಗೆ ಮಾಡಿದೆ ಎಂದು ಆ ಸಿಬ್ಬಂದಿ ಹೇಳಿರುವುದಾಗಿ ಆಗ ವರದಿಯಾಗಿತ್ತು.

ಕಂಗನಾ ಉಲ್ಲೇಖಿಸಿರುವ, ಮೋದಿ ಸರಕಾರದ ಕಾನೂನುಗಳ ವಿರುದ್ಧ ಐತಿಹಾಸಿಕ ಹೋರಾಟಕ್ಕೆ ನೇತೃತ್ವ ನೀಡಿರುವ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಈ ಬಿಜೆಪಿ ಲೋಕಸಭಾ ಸದಸ್ಯೆಯ ಹೇಳಿಕೆ "ಆಘಾತಕಾರಿ, ಅವಹೇಳನಕಾರಿ" ಎಂದು ಖಂಡಿಸಿದೆ.

ರೈತರನ್ನು ಹಳಿಯುವುದೇ ಅಭ್ಯಾಸವಾಗಿ ಬಿಟ್ಟಿರುವವರು"

"ರೈತರನ್ನು ಹಳಿಯುವುದೇ ಅಭ್ಯಾಸವಾಗಿ ಬಿಟ್ಟಿರುವ ಈ ಎಂಪಿ, ಈಗ ಭಾರತೀಯ ರೈತರನ್ನು ಕೊಲೆಗಡುಕರು, ಅತ್ಯಾಚಾರಿಗಳು ಮತ್ತು ರಾಷ್ಟ್ರ-ವಿರೋಧಿಗಳು ಎಂದು ಕರೆಯುವ ವಿಪರೀತಕ್ಕೆ ಹೋಗಿರುವುದು ಅತ್ಯಂತ ನೋವಿನ ಸಂಗತಿ. ಆದರೆ ಆಕೆಯ ಇಂತಹ ಮಾತುಗಳಲ್ಲಿ ಆಶ್ಚರ್ಯವೇನೂ ಅಲ್ಲ, ಏಕೆಂದರೆ ದಿಲ್ಲಿಯ ಗಡಿಗಳಲ್ಲಿ ರೈತರ ಚಳುವಳಿ ಎಸ್‌ಕೆಎಂ ನೇತೃತ್ವದಲ್ಲಿ ನಡೆಸಿದ ಐತಿಹಾಸಿಕ ಹೋರಾಟವನ್ನು ಅವಮಾನ ಮಾಡುವುದು, ಹೀಗಳೆಯುವುದು ಮತ್ತು ಕಳಂಕ ಹಚ್ಚುವುದು ಬಿಜೆಪಿಯ ದೀರ್ಘಕಾಲದ ಧೋರಣೆಯಾಗಿದೆ" ಎಂದು ಮುಂದುವರೆದು ಎಸ್‌ಕೆಎಂ ಟಿಪ್ಪಣಿ ಮಾಡಿದೆ.

"ಇಂತಹ ಅವಹೇಳನಗಳು ಮತ್ತು ದುರುದ್ದೇಶಪೂರ್ವಕವಾದ ಉದ್ರೇಕಕಾರಿ ಮಾತುಗಳ ಹೊರತಾಗಿಯೂ ಬಿಜೆಪಿ ನೇತೃತ್ವದ ಸರಕಾರದ ರೈತ-ವಿರೋಧಿ ಕಾಯ್ದೆಗಳು ಮತ್ತು ಧೋರಣೆಗಳ ವಿರುದ್ಧ ರೈತರ ಪ್ರತಿಭಟನೆಗಳು ಶಾಂತಿಯುತವಾಗಿರುವಂತೆ, ಕಾನೂನುಬದ್ಧವಾಗಿರುವಂತೆ ಮತ್ತು ಭಾರತದ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಮೂಲಭೂತ ಹಕ್ಕುಗಳ ಚಲಾವಣೆಗೆ ಅನುಗುಣವಾಗಿರುವಂತೆ ಎಸ್‌ಕೆಎಂ ನೋಡಿಕೊಂಡಿದೆ" ಎಂದಿರುವ ಅದು, **ಪ್ರಧಾನ ಮಂತ್ರಿಗಳು ತಮ್ಮ ಪಕ್ಷದ ಒಬ್ಬರು ಎಂಪಿಯ "ನಿಂದನೀಯ ಮತ್ತು ಅಸತ್ಯಪೂರ್ಣ ಟಿಪ್ಪಣಿಗಳಿಗಾಗಿ" ರೈತರ ಕ್ಷಮೆ ಕೋರಬೇಕು ಎಂದು ಆಗ್ರಹಿಸಿದೆ ಮತ್ತು "ಪ್ರಧಾನ ಮಂತ್ರಿಗಳು ದೇಶಕ್ಕೆ ಆಹಾರ ಭದ್ರತೆ ಒದಗಿಸುತ್ತಿರುವವರೊಂದಿಗೆ ಅವರ ಪಕ್ಷ ಮತ್ತು ಸದಸ್ಯರು ದುರ್ವರ್ತನೆ ನಡೆಸಲು ಬಿಡಬಾರದು, ಇದು ಪ್ರಧಾನ ಮಂತ್ರಿಗಳ ಸಂವಿಧಾನಿಕ ಕರ್ತವ್ಯ ಮಾತ್ರವಲ್ಲ, ಇದಕ್ಕೆ ಕಡಿಮೆಯಾದುದೇನನ್ನೂ ಭಾರತದ ಜನತೆ ಅವರಿಂದ ನಿರೀಕ್ಷಿಸುವುದಿಲ್ಲ"** ಎಂದು ಹೇಳಿದೆ.

ಕಂಗನಾ ರನೌತ್ ಭಾರತದ ರೈತರಿಂದ ಬೇಷರತ್ ಕ್ಷಮೆ ಕೇಳಿ, ತನ್ನ ಸ್ಥಾನದ ಘನತೆಯನ್ನು ಎತ್ತಿ ಹಿಡಿಯಬೇಕು, ಇಲ್ಲವಾದರೆ ಎಸ್‌ಕೆಎಂ ಆಕೆಯ ಸಾರ್ವಜನಿಕ ಬಹಿಷ್ಕಾರಕ್ಕೆ ಕರೆ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದೆ.

ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ರೈತರು ಮತ್ತು ಭಾರತೀಯ ಕೃಷಿಯನ್ನು ಕಾರ್ಪೊರೇಟ್ ವಲಯ ಸ್ವಾಧೀನಪಡಿಸಿಕೊಳ್ಳುವುದರ ವಿರುದ್ಧ ಭೀಷಣ ಹೋರಾಟ ನಡೆಸಿದ ಐತಿಹಾಸಿಕ ಚಳವಳಿಯ ವಿರುದ್ಧದ ಕಂಗನಾ ರನೌತ್‌ರವರ ಹೇಳಿಕೆಗಳು ಬೇಜವಾಬ್ದಾರಿ ಮತ್ತು ದುರುದ್ದೇಶಪೂರಿತ ಎಂದು ಬಲವಾಗಿ ಖಂಡಿಸಿದೆ.

ರೈತ-ವಿರೋಧಿ "ಬಾಹ್ಯ ಮತ್ತು ಆಂತರಿಕ ಶಕ್ತಿಗಳ" ತಾಳಕ್ಕೆ ಹೆಜ್ಜೆ ಹಾಕುತ್ತಿರುವವರು

ವಾಸ್ತವವಾಗಿ, ಒಂದು ಗಾಥೆಯಾಗಿ ಬಿಟ್ಟಿರುವ ರೈತರ ದೇಶಪ್ರೇಮಿ ಚಳವಳಿಯ ಬಗ್ಗೆ ಕಂಗನಾ ರನೌತ್ ಅವರ ತುಚ್ಛ ಮಾತುಗಳು ಹೊಸದೇನೂ ಅಲ್ಲ ಎಂದು ಎಲ್ಲರಿಗೂ ಗೊತ್ತಿದೆ. ರೈತರು ಕಠೋರ ಹವಾಮಾನ, ಕೋವಿಡ್ ಸಾಂಕ್ರಾಮಿಕ ಮತ್ತು ಆರೆಸ್ಸೆಸ್-ಬಿಜೆಪಿ ಆಳ್ವಿಕೆ ಹರಿಯಬಿಟ್ಟ ಪ್ರಭುತ್ವ ಹಿಂಸಾಚಾರದ ವಿರುದ್ಧ ಧೈರ್ಯದಿಂದ ಹೋರಾಡುತ್ತಿದ್ದಾಗ, ರನೌತ್ ಅವರ "ಬಾಹ್ಯ ಶಕ್ತಿಗಳು", ಅಂದರೆ ಪ್ರಬಲ ಜಾಗತಿಕ ಹಣಕಾಸು ಬಂಡವಳಿಗರು ಮತ್ತು ಅದಾನಿ, ಅಂಬಾನಿಯಂತಹ ಅವರ ದೇಶೀ ಬಾಲಬಡುಕರ ರಾಗಕ್ಕೆ ಹೆಜ್ಜೆ ಹಾಕಿ ಕುಣಿಯುತ್ತಿದ್ದರು. ರೈತರ ಬಗ್ಗೆ ಆಕೆಯ ದ್ವೇಷಪೂರ್ಣ ಟೀಕೆಗಳು, ವಿಶೇಷವಾಗಿ ರೈತ ಮಹಿಳೆಯರ ಬಗ್ಗೆ ಅವಹೇಳನಕಾರಿ ಟೀಕೆಗಳು, ಕೃಷಿಯನ್ನು ಕಬಳಿಸಲು ಬಯಸುವ ಆಕೆಯ "ಬಾಹ್ಯ" ಮತ್ತು "ಆಂತರಿಕ" ಬಾಸ್‌ಗಳನ್ನು ಮೆಚ್ಚಿಸಲು ರನೌತ್ ಯಾವುದೇ ಹಂತಕ್ಕೂ ಹೋಗುತ್ತಾರೆ ಎಂಬ ಅಂಶವನ್ನು ಬಹಿರಂಗಪಡಿಸಿದವು. ಕಾರ್ಪೊರೇಟ್ ಪರವಾದ ಕೃಷಿ ಕಾನೂನುಗಳ ಅತ್ಯಂತ ಅಸಹ್ಯಕರ ಭಟ್ಟಂಗಿಯಾಗಿದ್ದ ಆಕೆ "ಅತ್ಯಾಚಾರ ಮತ್ತು ಕೊಲೆಗಳನ್ನು" ರೈತರ ಚಳವಳಿಯೊಂದಿಗೆ ತಳುಕು ಹಾಕಲು ಪ್ರಯತ್ನಿಸುತ್ತಿರುವ ಸಂಪೂರ್ಣ ಸುಳ್ಳು ಹೇಳಿಕೆಗಳನ್ನು ನೀಡಿದರು. ರೈತ ಹೋರಾಟದಲ್ಲಿ 736 ರೈತರು ಹುತಾತ್ಮರಾದರು ಮತ್ತು ಆರೆಸ್ಸೆಸ್-ಬಿಜೆಪಿಯಲ್ಲಿನ ಆಕೆಯ ಸಹೋದ್ಯೋಗಿಗಳು ಲಖಿಮ್‌ಪುರ ಖೇರಿಯಲ್ಲಿ ಪ್ರತಿಭಟನಾ ನಿರತ ರೈತರನ್ನು ಹತ್ಯೆ ಮಾಡಿದ್ದಾರೆ ಎಂಬುದು ಸರಳ ಸತ್ಯ ಎಂದು ಎಐಕೆಎಸ್‌ಹೇಳಿದೆ.



ವ್ಯಂಗ್ಯಚಿತ್ರ: ರಾಕೇಶ್ ರಂಜನ್, ಎಕ್ಸ್

ಕರಾಳ ಕೃಷಿ ಕಾನೂನುಗಳ ವಿರುದ್ಧದ ರೈತರ ಚಳವಳಿಯು ಬ್ರಿಟಿಷರ ವಿರುದ್ಧದ ಸಾಮ್ರಾಜ್ಯಶಾಹಿ-ವಿರೋಧಿ ಸ್ವಾತಂತ್ರ್ಯ ಹೋರಾಟದಿಂದ ಸ್ಫೂರ್ತಿ ಪಡೆದಿದೆ ಎಂದು ರನೌತ್ ಮತ್ತು ಆರ್‌ಎಸ್‌ಎಸ್-ಬಿಜೆಪಿಯಲ್ಲಿನ ಆಕೆಯ ಸಹೋದ್ಯೋಗಿಗಳಿಗೆ ನೆನಪಿಸುತ್ತ ಎಐಕೆಎಸ್, ಸಮರಧೀರ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಮತ್ತು ಸ್ವಾತಂತ್ರ್ಯ ಹೋರಾಟದ ಶ್ರೇಷ್ಠ ಪ್ರತಿಮೆಗಳಲ್ಲಿ ಒಬ್ಬರಾದ ಶಹೀದ್ ಭಗತ್ ಸಿಂಗ್, ಕಿಸಾನ್ ಹೋರಾಟದ ಸಮಯದಲ್ಲಿ ಪ್ರತಿರೋಧದ ಅತ್ಯಂತ ಜನಪ್ರಿಯ ಸಂಕೇತವಾಗಿದ್ದರು ಎಂದೂ ನೆನಪಿಸಿದೆ.

ಸ್ವಾತಂತ್ರ್ಯ ಹೋರಾಟಕ್ಕೆ ದ್ರೋಹಬಗೆದ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯ ತೊತ್ತುಗಳಂತೆ ವರ್ತಿಸುತ್ತಿದ್ದ ಆರೆಸ್ಸೆಸ್, ಹಿಂದೂ ಮಹಾಸಭಾ ಮತ್ತು ಮುಸ್ಲಿಂ ಲೀಗ್‌ನಂತಹ ಪ್ರತಿಗಾಮಿ ಕೋಮುವಾದಿ ಶಕ್ತಿಗಳಿಗೆ ರೈತರು ಮತ್ತು ದುಡಿಯುವ ಜನಗಳ ದೇಶಪ್ರೇಮವನ್ನು ಪ್ರಶ್ನಿಸುವ ಯಾವುದೇ ನೈತಿಕ ಅಧಿಕಾರವಿಲ್ಲ ಎನ್ನುತ್ತ ಎಐಕೆಎಸ್, ಕೃಷಿ ಕಾನೂನುಗಳು ಒಂದು ವೇಳೆ ಜಾರಿಗೆ ಬಂದಿದ್ದರೆ, ದೇಶದ ಸಾರ್ವಭೌಮತ್ವ ಮತ್ತು ಆಹಾರ ಭದ್ರತೆಗೆ ಧಕ್ಕೆ ತರುತ್ತಿತ್ತು ಎಂದು ಪುನರುಚ್ಚರಿಸಿದೆ.

ರನೌತ್ ಅವರು ತಮ್ಮ ದ್ವೇಷಪೂರಿತ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ತಕ್ಷಣವೇ ಹಿಂಪಡೆದು ರೈತರಲ್ಲಿ ಕ್ಷಮೆಯಾಚಿಸಬೇಕು ಮತ್ತು ಪ್ರಧಾನಿ ನರೇಂದ್ರ ಮೋದಿ ಕೂಡ ರೈತರ ಕ್ಷಮೆಯಾಚಿಸಬೇಕು ಎಂದು ಎಐಕೆಎಸ್ ಆಗ್ರಹಿಸಿದೆ. ಸುಪ್ರಿಂ ಕೋರ್ಟ್ ರನೌತ್ ರವರ ಉದ್ದೇಶಪೂರ್ವಕವಾಗಿ ತಪ್ಪುದಾರಿಗೆಳೆಯುವ ಮತ್ತು ರೈತರ ವಿರುದ್ಧ ಅಪಶ್ರುತಿ ಸೃಷ್ಟಿಸುತ್ತಿರುವ ಹೇಳಿಕೆಗಳನ್ನು ಸ್ವಯಂಪ್ರೇರಿತವಾಗಿ ಗಮನಕ್ಕೆ ತಗೊಂಡು ಆಕೆಯ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದೂ ಅಖಿಲ ಭಾರತ ಕಿಸಾನ್ ಸಭಾ ಆಗ್ರಹಿಸಿದೆ.



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಫೇಸ್‌ಬುಕ್

ದಿಲ್ಲಿ ಅಬಕಾರಿ ಕೇಸ್–ಸಿಬಿಐ, ಇ.ಡಿ.ಯೇ ಈಗ ಕಟಕಟೆಯಲ್ಲಿ?

ದಿಲ್ಲಿ ಅಬಕಾರಿ ಕೇಸಿನಲ್ಲಿ ಎಎಪಿ ಮುಖಂಡರಾದ ಸಂಜಯ್ ಸಿಂಗ್ ಮತ್ತು ಮನಿಶ್ ಸಿಸೋಡಿಯ ನಂತರ ಈಗ, ಕಳೆದ 5 ತಿಂಗಳಿಂದ ಕಸ್ಟಡಿಯಲ್ಲಿದ್ದ ಬಿಆರ್‌ಎಸ್‌ನ ಮುಖಂಡರಾದ ಕೆ.ಕವಿತಾರವರಿಗೆ ಸುಪ್ರಿಂ ಕೋರ್ಟ್ ಜಾಮೀನು ನೀಡಿದೆ. ಈ ವಿಚಾರಣೆ ಬೇಗನೆ ಮುಗಿಯುವಂತಿಲ್ಲ, ವಿಚಾರಣೆಗಾಗಿ ಕಸ್ಟಡಿ ಎಂಬುದು ಆಪಾದಿತರಿಗೆ ಒಂದು ಶಿಕ್ಷೆಯಾಗಬಾರದು ಎಂದಿರುವ ಸರ್ವೋಚ್ಚ ನ್ಯಾಯಾಲಯದ ಉದ್ಗಾರಗಳು ಈ ಪ್ರಕ್ರಿಯೆಯಲ್ಲಿ ದೇಶದ ಸಿಬಿಐ, ಇ.ಡಿ.ಗಳನ್ನು ಕಟಕಟೆಯಲ್ಲಿ ನಿಲ್ಲಿಸಿವೆ ಎಂದು ವರದಿಯಾಗಿದೆ.

ಕವಿತಾ ಅವರ ಪರವಾಗಿ ಆಡಿಟರ್ ಬುಚ್ಚಿ ಬಾಬು 25 ಕೋಟಿ ರೂ. ಪಡೆದರು ಎಂದು ಒಪ್ಪುವ ಇ.ಡಿ. ಅವರನ್ನು ಈ ಕೇಸಿನಲ್ಲಿ ಆಪಾದಿತರು ಎಂದು ಸೇರಿಸಿಲ್ಲ. ಅಲ್ಲದೆ, ಮದ್ಯವ್ಯಾಪಾರಿ ಮಾಗುಂಟ ರೆಡ್ಡಿಯವರ ಪಾತ್ರ ಕವಿತಾರ ಮೇಲೆ ಹೊರಿಸಿದ ಆಪಾದನೆಯಂತೆಯೇ ಇದ್ದರೂ ಆತನನ್ನು ಆಪಾದಿತನಾಗಿಸದೆ ಸಾಕ್ಷಿಯಾಗಿ ಮಾಡಲಾಗಿದೆ. ಆತನ ಮಗನನ್ನು ಆಪಾದಿತನಾಗಿ ಮಾಡಲಾಗಿದೆ, ಆದರೆ ಆತನಿಗೆ ಕ್ಷಮೆ ನೀಡಿ ಅಪ್ರೂವರ್ ಆಗಿ ಮಾಡಲಾಗಿದೆ ಎಂಬ ಸಂಗತಿಗಳ ಬಗ್ಗೆ ಟಿಪ್ಪಣಿ ಮಾಡುತ್ತ "ವಿಚಾರಣೆ ನ್ಯಾಯಯುತವಾಗಿರಬೇಕು. ತಾನು ಅಪರಾಧಿ ಎಂದು ಹೇಳಿಕೊಳ್ಳುವವನನ್ನು ಒಬ್ಬ ಸಾಕ್ಷಿಯಾಗಿ ಮಾಡಲಾಗಿದೆ. ನಾಳೆ, ನೀವು ಯಾರನ್ನಾದರೂ ನಿಮ್ಮ ಮನಬಂದಂತೆ ಹೆಕ್ಕಬಹುದೇ ಮತ್ತು ಬಿಟ್ಟು ಬಿಡಬಹುದೇ? ನೀವು ಯಾವುದೇ ಆಪಾದಿತರನ್ನು ಆರಿಸಿ-ಆರಿಸಿ ಹಿಡಿಯಲು ಸಾಧ್ಯವಿಲ್ಲ. ಇದೆಂತಹಾ ನ್ಯಾಯ? ಇಂತಹ ಪರಿಸ್ಥಿತಿ ಕಾಣುತ್ತಿರುವುದು ಖೇದಕರ" ಎಂಬ ನ್ಯಾಯಪೀಠದ ಉದ್ಗಾರಗಳನ್ನು ಕೇಳಿದ ಸಿಬಿಐ ಮತ್ತು ಇ.ಡಿ. ಕವಿತಾರವರ ಜಾಮೀನಿಗೆ ತಮ್ಮ ವಿರೋಧವನ್ನು ಒತ್ತಿ ಹೇಳದಿರಲು ನಿರ್ಧರಿಸಿದವು ಎಂದು ಪತ್ರಿಕಾ ವರದಿಗಳು ಹೇಳುತ್ತವೆ.

ಮರುದಿನ ಇನ್ನೊಂದು ಪಿಎಂಎಲ್‌ಎ (ಕಪ್ಪು ಹಣವನ್ನು ಬಿಳಿ ಮಾಡಲಾಗಿದೆ ಎಂಬ ಆಪಾದನೆಯಿರುವ) ಪ್ರಕರಣದಲ್ಲಿಯೂ ಸುಪ್ರಿಂ ಕೋರ್ಟ್ ನ್ಯಾಯ ಪೀಠ "ಬೇಲ್ ಸಾಮಾನ್ಯ ಪುಟ 15 ಕ್ಕೆ

ಶೇಖ್ ಹಸೀನಾ ಅವರ ಆಡಳಿತವನ್ನು ದುರ್ಬಲಗೊಳಿಸಿದ ಬಾಂಗ್ಲಾದೇಶದ ಹದಗೆಟ್ಟ ಆರ್ಥಿಕ ಸನ್ನಿವೇಶಕ್ಕೆ ಅವರ ಆಡಳಿತವು ತಳೆದ "ಸ್ವಜನ ಪಕ್ಷಪಾತ"ವೇ ಕಾರಣವೆಂದೂ ಮತ್ತು ಸ್ವಾತಂತ್ರ್ಯ–ಹೋರಾಟಗಾರರ ವಂಶಸ್ಥರಿಗೆ ಉದ್ಯೋಗಗಳಲ್ಲಿ "ಮೀಸಲಾತಿ" ಕಲ್ಪಿಸುವ ನೀತಿಯ ವಿರೋಧವನ್ನು ಸಾಮಾನ್ಯವಾಗಿ ಆಡಳಿತದ "ಸ್ವಜನ ಪಕ್ಷಪಾತ" ನೀತಿಯ ವಿರೋಧವೆಂದು ವ್ಯಾಖ್ಯಾನಿಸಲಾಗಿದೆ. ಆದರೆ ಅದು ಸಮಸ್ಯೆಯ ಮೂಲವಲ್ಲ. ನಿಜ ಸಮಸ್ಯೆಯೆಂದರೆ, ಅಲ್ಲಿನ ಆರ್ಥಿಕ ಬಿಕ್ಕಟ್ಟಿನ ಮೂಲದಲ್ಲಿರುವ ರಫ್ತು–ಪ್ರಧಾನ ಬೆಳವಣಿಗೆಯ ಕಾರ್ಯ–ತಂತ್ರವೇ. ಇದು ಒಮ್ಮೆ "ವಿಜಯಶಾಲಿ" ಎನಿಸಿದ ಮೂರನೆಯ ಜಗತ್ತಿನ ದೇಶವೊಂದು ಅಚಾನಕ್ಕಾಗಿ ನೆಲ ಕಚ್ಚುವಂತೆ ಮಾಡಿದೆ, ಯಶಸ್ಸಿನ ಅವಧಿಯಲ್ಲಿ ಕಂಡ ಮಹತ್ಸಾಧನೆಗಳನ್ನು ಮಣ್ಣುಪಾಲು ಮಾಡುವ ರೀತಿಯ ಬಿಕ್ಕಟ್ಟಿಗೆ ತಳ್ಳಿದೆ. ನಿಜ, ಆಂತರಿಕ ಮಾರುಕಟ್ಟೆ–ಆಧಾರಿತ ಅಭಿವೃದ್ಧಿ ಕಾರ್ಯತಂತ್ರವನ್ನು ಅನುಸರಿಸುವ ಪ್ರಯತ್ನವು ಸುಲಭವಲ್ಲ, ಆದರೆ, ಈಗ ವಿಶ್ವ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮಗಳನ್ನು ಎದುರಿಸುತ್ತಿರುವ ಮೂರನೇ ಜಗತ್ತಿಗೆ ಬೇರೆ ಪರ್ಯಾಯವಿಲ್ಲ.

ಪ್ರೊ.ಪ್ರಭಾತ್ ಪಟ್ನಾಯಕ್

ಬಾಂಗ್ಲಾದೇಶದ ‘ಆರ್ಥಿಕ ಪವಾಡ’ ಕುಸಿದು ಬಿದ್ದದ್ದೇಕೆ?

ಇತ್ತೀಚೆಗೆ ಬಾಂಗ್ಲಾದೇಶದಲ್ಲಿ ಸಂಭವಿಸಿದ ರಾಜಕೀಯ ವಿಪ್ಲವ ಕುರಿತ ಬಹಳಷ್ಟು ವಿಶ್ಲೇಷಣೆಗಳು ಶೇಖ್ ಹಸೀನಾ ಅವರ ಸರ್ಕಾರದ ಸೊಕ್ಕಿನ ವರ್ತನೆ ಮತ್ತು ಸರ್ವಾಧಿಕಾರಿ ಧೋರಣೆಯ ಅಂಶಗಳ ಮೇಲೆ ಮಾತ್ರವೇ ಗಮನಹರಿಸಿವೆ. ಆ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಉಂಟಾದ ಬದಲಾವಣೆಯನ್ನು ಅವು ಸಂಪೂರ್ಣವಾಗಿ ತಗ್ಗಿಸಿ ಹೇಳಿವೆ ಅಥವಾ ಅದರ ಬಗ್ಗೆ ಗಮನವನ್ನೇ ಹರಿಸಿಲ್ಲ. ವಿಷಯವೆಂದರೆ, ಕೆಲವೇ ಕೆಲವು ತಿಂಗಳುಗಳ ಹಿಂದೆ ಒಂದು ಆರ್ಥಿಕ "ಪವಾಡ" ಎಂದು ಶ್ಲಾಘಿಸಲ್ಪಡುತ್ತಿದ್ದ ದೇಶವು ಈಗ ಆರ್ಥಿಕ ಬಿಕ್ಕಟ್ಟಿನಲ್ಲಿ ಮುಳುಗಿ ಹೋಗಿದೆ. ಈ ಬಿಕ್ಕಟ್ಟು ಅಪಾರ ಸಂಖ್ಯೆಯ ಜನರ ಸ್ಥಿತಿ–ಗತಿಗಳನ್ನು ಬಹಳ ಬೇಗನೆ ಹದಗೆಡಿಸಿತು. ಸಂಕಷ್ಟದಲ್ಲಿದ್ದವರ ನೆರವಿಗೆ ಬಾರದ ಸರ್ಕಾರದ ಮೇಲೆ ಜನರಿಗೆ ಆಕ್ರೋಶ ಉಂಟಾಯಿತು. ಜನರ ಕೋಪವು ಬೀದಿ ಬೀದಿಗಳಲ್ಲಿ ಪ್ರತಿಭಟನೆಗಳ ಮೂಲಕ ವ್ಯಕ್ತವಾಯಿತು. ಶೇಖ್ ಹಸೀನಾ ಸರ್ಕಾರದ ಜನಪ್ರಿಯತೆ ಕುಸಿದು ಬಿತ್ತು ಮತ್ತು ಅವರು ದೇಶದಿಂದ ಪರಾರಿಯಾದರು.

2021ರ ವರೆಗೆ ಬಾಂಗ್ಲಾದೇಶವನ್ನು, ನವ ಉದಾರವಾದಿ ಅರ್ಥವ್ಯವಸ್ಥೆಯಡಿಯಲ್ಲಿ, ರಫ್ತು–ಪ್ರಧಾನ ಬೆಳವಣಿಗೆಯ ಒಂದು ಯಶೋಗಾಥೆ ಎಂದು ಪರಿಗಣಿಸಲಾಗಿತ್ತು. ಅದರ ರಫ್ತಿನ ಸುಮಾರು ಶೇ. 80ರಷ್ಟು ಭಾಗವು ಸಿದ್ಧ–ಉಡುಪುಗಳಿಂದ ಕೂಡಿತ್ತು. ಉಡುಪುಗಳ ಈ ರಫ್ತು ಬೆಳವಣಿಗೆಯು ಅದೆಷ್ಟು ಬಿರುಸಾಗಿತ್ತು ಎಂದರೆ, ಮುಂದಿನ ಕೆಲವು ವರ್ಷಗಳಲ್ಲಿ ಬಾಂಗ್ಲಾದೇಶವು ವಿಶ್ವ ಉಡುಪುಗಳ ಬೇಡಿಕೆಯ ಶೇ. 10ರಷ್ಟನ್ನು ಪೂರೈಸುವ ಮಟ್ಟವನ್ನು ತಲುಪಲಿದೆ ಎಂದು ಹೇಳಲಾಗಿತ್ತು. ಕೋಟಿ ಕೋಟಿ ಜನರನ್ನು ಬಾಂಗ್ಲಾದೇಶವು "ಬಡತನದಿಂದ ಹೊರಗೆ" ತಂದಿದೆ ಎಂಬುದಾಗಿ ಅದನ್ನು ಬ್ರೆಟನ್ ವುಡ್ಸ್ ಸಂಸ್ಥೆಗಳು(ಐಎಂಎಫ್ ಮತ್ತು ವಿಶ್ವ ಬ್ಯಾಂಕ್) ಹಾಡಿ ಹೊಗಳಿದ್ದವು. ಏಪ್ರಿಲ್ 2, 2024ರಷ್ಟು ಇತ್ತೀಚೆಗೆ ವಿಶ್ವ ಬ್ಯಾಂಕ್, ಆರ್ಥಿಕ ವರ್ಷ 2024–25ರಲ್ಲಿ ಬಾಂಗ್ಲಾದೇಶದ ಜಿಡಿಪಿಯು ಶೇ. 5.6ರ ಮಟ್ಟದಲ್ಲಿ ಬೆಳೆಯಲಿದೆ ಎಂಬ ಮುನ್ಸೂಚನೆಯನ್ನು ಕೊಟ್ಟಿತ್ತು. ಯಾವ ದೃಷ್ಟಿಯಲ್ಲಿ ನೋಡಿದರೂ ಈ ಮಟ್ಟದ ಬೆಳವಣಿಗೆಯು ಗೌರವಾರ್ಹವಾಗಿಯೇ ತೋರುತ್ತಿತ್ತು.

ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಬಾಂಗ್ಲಾದೇಶದ ಸಿದ್ಧ–ಉಡುಪುಗಳ ರಫ್ತುಗಳು ಹೊಡೆತ ತಿಂದವು. ಪರಿಣಾಮವಾಗಿ ಅರ್ಥವ್ಯವಸ್ಥೆಯು ಬಲಗುಂದಿತು. ಇದು ಒಂದು ಆಕಸ್ಮಿಕ ಮತ್ತು ತಾತ್ಕಾಲಿಕ ಸ್ಥಿತಿ ಎಂದು ಭಾವಿಸಲಾಗಿತ್ತು (ಈ ನಿರೀಕ್ಷೆಯಿಂದಾಗಿಯೇ 2024–25ರ ಆಶಾವಾದಿ ಮುನ್ಸೂಚನೆಯನ್ನು ವಿಶ್ವಬ್ಯಾಂಕ್ ಕೊಟ್ಟಿತ್ತು). ಈಗ ನೋಡಿದರೆ, ಆರ್ಥಿಕ ಸಂಕಷ್ಟಗಳು ವರ್ಷಗಳ ಕಾಲ ಬಾಂಗ್ಲಾದೇಶವನ್ನು ಕಾಡಲಿವೆ ಎಂದು ತೋರುತ್ತದೆ. ಬಹಳ ದಿನಗಳಿಂದಲೇ ವಿಶ್ವ ಅರ್ಥವ್ಯವಸ್ಥೆಯು ಸ್ಥಗಿತತೆಗೆ ಒಳಗಾಗಿರುವ ಪರಿಸ್ಥಿತಿಯಲ್ಲಿ, ಬಾಂಗ್ಲಾದೇಶದಲ್ಲಿ ಆರ್ಥಿಕ ಸಮಸ್ಯೆಗಳು ಬಿಗಡಾಯಿಸಿರುವುದು ಒಂದು ಆಶ್ಚರ್ಯದ ವಿಷಯವಲ್ಲ. ಇದೇ ಅವಧಿಯಲ್ಲಿ, ಇದೇ ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ, ಆ ದೇಶದ ವಿದೇಶಿ ವಿನಿಮಯದ ಮತ್ತೊಂದು ಪ್ರಮುಖ ಮೂಲವಾದ ಸಾಗರೋತ್ತರ ಬಾಂಗ್ಲಾದೇಶೀಯರ ಹಣ ರವಾನೆಯೂ ಸಹ ಹೊಡೆತ ತಿಂದಿತ್ತು. ಅದರ ಜೊತೆಗೆ, ಬಾಂಗ್ಲಾದೇಶವು ವಿದ್ಯುತ್ ಉತ್ಪಾದನೆಗೂ ಸಹ ಇಂಧನವನ್ನೇ ಅವಲಂಬಿಸಿರುವುದರಿಂದ, ರಷ್ಯಾ–ಉಕ್ರೇನ್ ಯುದ್ಧ ಆರಂಭವಾದ ನಂತರ ಬಾಂಗ್ಲಾದೇಶವು ಆಮದು ಮಾಡಿಕೊಂಡ ಇಂಧನ ಬೆಲೆಗಳ ಹೆಚ್ಚಳವು ಅದರ ವಿದೇಶಿ ವಿನಿಮಯದ ಗಂಭೀರ ಕೊರತೆಗೆ ಕಾರಣವಾಗಿದೆ, ವಿದ್ಯುತ್ ಸರಬರಾಜಿನ ಕಡಿತಕ್ಕೆ ಮತ್ತು ವಿದ್ಯುತ್–ದರ ಏರಿಕೆಗೆ ಕಾರಣವಾಗಿದೆ ಮತ್ತು ಒಟ್ಟಾರೆಯಾಗಿ ಅರ್ಥವ್ಯವಸ್ಥೆಯ ಮೇಲೆ ವೆಚ್ಚ–ತಳ್ಳುವ ಪರಿಣಾಮ ಬೀರಿದೆ.





ಹಣದುಬ್ಬರ ಮತ್ತು ನಿರುದ್ಯೋಗದ ಹೆಚ್ಚಳ

ಈ ವರ್ಷದ ಆಗಸ್ಟ್‌ನಲ್ಲಿ ಹಣದುಬ್ಬರವು (ಬೆಲೆ ಏರಿಕೆಯು) ಶೇ. 9.52ರ ಮಟ್ಟವನ್ನು ತಲುಪಿದೆ. ಕಳೆದ ಒಂದು ದಶಕದಲ್ಲೇ ಇದು ಅತಿ ಹೆಚ್ಚಿನ ಮಟ್ಟದ ಏರಿಕೆಯಾಗಿದೆ (ಈ ಏರಿಕೆಯನ್ನು ಕೀಳಂದಾಜು ಮಾಡಲಾಗಿದೆ ಎಂದು ಅನೇಕರು ಹೇಳುತ್ತಾರೆ). ಹಣದುಬ್ಬರವು ಈ ರೀತಿಯಲ್ಲಿ ಏರಿಕೆಯಾಗುವಲ್ಲಿ ಎರಡು ಅಂಶಗಳು ಕಾರಣವಾಗಿವೆ: ಮೊದಲನೆಯದು, ಡಾಲರ್ ಎದುರು ಬಾಂಗ್ಲಾ ಕರೆನ್ಸಿಯ (ವಿನಿಮಯ ದರದ) ಅಪಮೌಲ್ಯ. ಈ ಅಪಮೌಲ್ಯವು, ಯುಎಸ್‌ನಲ್ಲಿ ಹಣದುಬ್ಬರ–ವಿರೋಧಿ ಕ್ರಮಗಳ ಭಾಗವಾಗಿ ಬಡ್ಡಿ ದರ ಏರಿಕೆಯ ಕಾರಣದಿಂದ ಮತ್ತು ಬಾಂಗ್ಲಾದೇಶವು ಎದುರಿಸುತ್ತಿರುವ ವಿದೇಶಿ ವಿನಿಮಯ ಕೊರತೆಯ ಸಮಸ್ಯೆಗಳಿಂದಾಗಿ ಡಾಲರ್ ಮೌಲ್ಯವು ಬಲಗೊಂಡ ಕಾರಣದಿಂದ ಉಂಟಾಗಿದೆ. ಎರಡನೆಯದು, ವಿತ್ತೀಯವಾಗಿ ಜನರ ಹಿಂಡುವಿಕೆಯ ಹೆಚ್ಚಳ. ಅರ್ಥವ್ಯವಸ್ಥೆಯ ನಿಧಾನಗತಿಯ ಕಾರಣದಿಂದಾಗಿ, ನವ ಉದಾರವಾದಿ ವ್ಯವಸ್ಥೆಯಲ್ಲಿ, ಈ ಹಿಂಡುವಿಕೆಯನ್ನು ಜಾರಿಗೊಳಿಸುವ ಒತ್ತಾಯಕ್ಕೆ ಸರ್ಕಾರವು ಒಳಗಾಗುತ್ತದೆ. ಹಾಗಾಗಿ, ಹಣದುಬ್ಬರವು ಉಂಟುಮಾಡುವ ಪರಿಣಾಮಗಳಿಂದ ಜನರನ್ನು ರಕ್ಷಿಸುವುದು ಸಾಧ್ಯವಾಗುವುದಿಲ್ಲ. ಏಕೆಂದರೆ, ಯಾವ ಕ್ರಮ ಕೈಗೊಂಡರೂ ಸರ್ಕಾರವು ಹೆಚ್ಚು ಹಣ ಖರ್ಚುಮಾಡಬೇಕಾಗುತ್ತದೆ ಅಥವಾ ಸಬ್ಸಿಡಿಯ ಮೊತ್ತವನ್ನು ಹೆಚ್ಚಿಸಬೇಕಾಗುತ್ತದೆ.

ಗುಣಕ ಪರಿಣಾಮಗಳನ್ನು ಹೊಂದಿರುವ ರಫ್ತುಗಳ ಇಳಿಕೆ ಮತ್ತು ಸಾಗರೋತ್ತರ ಬಾಂಗ್ಲಾದೇಶೀಯರ ಹಣ ರವಾನೆಯ ಇಳಿಕೆ, ಇವೆರಡೂ ಬಾಂಗ್ಲಾದೇಶವನ್ನು ಪ್ರಸ್ತುತ ಬಾಧಿಸುತ್ತಿರುವ ನಿರುದ್ಯೋಗದ ಹೆಚ್ಚಳಕ್ಕೆ ಕಾರಣವಾಗಿವೆ. ಅದೇ ಸಮಯದಲ್ಲಿ ಬಾಂಗ್ಲಾದೇಶದಲ್ಲಿ ಹಣದುಬ್ಬರವು ವೇಗವಾಗಿ ಏರಲು, ತೈಲದ ಜಾಗತಿಕ ಬೆಲೆಗಳ ಏರಿಕೆಯ ವೆಚ್ಚ–ತಳ್ಳು ಪರಿಣಾಮ ಮತ್ತು ಬಾಂಗ್ಲಾ ಕರೆನ್ಸಿಯ ಅಪಮೌಲ್ಯ, ಇವುಗಳು ಕಾರಣವಾಗಿವೆ. ಹಣದುಬ್ಬರವನ್ನು ಸರಿದೂಗಿಸುವ ಸಾಧನವಾಗಿ ಕಾರ್ಮಿಕರಿಗೆ ಕೊಡುವ ವೇತನದಲ್ಲಿ ಕನಿಷ್ಠ ಏರಿಕೆ ಮಾಡುವುದೂ ಸಹ ನವ ಉದಾರವಾದಿ ವ್ಯವಸ್ಥೆಯಲ್ಲಿ ಸಾಧ್ಯವಾಗುವುದಿಲ್ಲ. ಏಕೆಂದರೆ, ಕೈಯಲ್ಲಿರುವ ರಫ್ತು ಮಾರುಕಟ್ಟೆಗಳನ್ನು ಉಳಿಸಿಕೊಳ್ಳುವುದು ಬಹಳ ಕಷ್ಟಕರವಾಗುತ್ತದೆ. ರಫ್ತಿನ ಮೇಲೆ ಪ್ರತಿಕೂಲ ಪರಿಣಾಮ ಬೀರದಂತೆ ಹಣದುಬ್ಬರದ ಏರಿಕೆಯನ್ನು ತಡೆಗಟ್ಟುವ ಸಲುವಾಗಿ ಒಂದು ವೇಳೆ ವೇತನದ ಇಂತಹ ಕನಿಷ್ಠ ಏರಿಕೆಯೊಂದಿಗೆ ಕರೆನ್ಸಿಯು (ವಿನಿಮಯ ದರದ) ಮತ್ತಷ್ಟು ಅಪಮೌಲ್ಯಗೊಂಡರೆ, ಆಗ ಆಮದು ಮಾಡಿಕೊಂಡ ಇಂಧನದ ಬೆಲೆಗಳನ್ನು ಮತ್ತಷ್ಟು ಹೆಚ್ಚಿಸಬೇಕಾಗುತ್ತದೆ. ಅದು ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತದೆ ಮತ್ತು ಹಣದುಬ್ಬರವನ್ನು ಮತ್ತಷ್ಟು ವ್ಯಾಪಕಗೊಳಿಸುತ್ತದೆ.



ಈ ಪರಿಸ್ಥಿತಿಯಲ್ಲಿ ಬಾಂಗ್ಲಾದೇಶವು ಸಾಲಕ್ಕಾಗಿ ಐಎಂಎಫ್ ಮತ್ತು ಇತರ ಅಂತರರಾಷ್ಟ್ರೀಯ ಸಾಲದಾತರನ್ನು ಸಂಪರ್ಕಿಸಿತು. ಅದು ಪಡೆದುಕೊಂಡ ಈ ಸಾಲಗಳು ಹಳೆಯ ಸಾಲಗಳ ಬಾಕಿಯನ್ನು ಚುಕ್ತಾ ಮಾಡುವ ಷರತ್ತನ್ನು ಒಳಗೊಂಡ ಕಾರಣದಿಂದಾಗಿ ಪಾವತಿ ಶೇಷ (ವಿದೇಶಗಳೊಂದಿಗಿನ ವ್ಯಾಪಾರದ ಶಿಲ್ಕು) ಸಮಸ್ಯೆಯು ಮತ್ತಷ್ಟು ಜಟಿಲಗೊಂಡಿತು. ಬಾಂಗ್ಲಾದೇಶದ ನೀತಿಗಳ ಮೇಲ್ವಿಚಾರಣೆಯನ್ನು ಐಎಂಎಫ್ ಮಾಡುತ್ತಿರುವುದರಿಂದ, ಸರ್ಕಾರವು ಈ ವರೆಗೆ ನೀತಿ, ನಿರ್ವಹಣೆಗಳಲ್ಲಿ ಬಳಕೆ ಮಾಡುತ್ತಿದ್ದ ಅಲ್ಪ–ಸ್ವಲ್ಪ ಚಾತುರ್ಯದ ಅವಕಾಶವನ್ನೂ ಸಹ ಕಳೆದುಕೊಂಡಿತು. ಜೊತೆಗೆ, ಐಎಂಎಫ್ ಹೇರಿದ "ಮಿತವ್ಯಯ" ಪಾಲನೆಯ ಷರತ್ತು ನಿರುದ್ಯೋಗವನ್ನು ಮತ್ತಷ್ಟು ಹೆಚ್ಚಿಸಿತು.

ಶೇಖ್ ಹಸೀನಾ ಅವರ ಆಡಳಿತವನ್ನು ದುರ್ಬಲಗೊಳಿಸುವಲ್ಲಿ ಮತ್ತು ರಾಜಕೀಯ ಬದಲಾವಣೆಗಾಗಿ ಅಗತ್ಯವಿರುವ ಪರಿಸ್ಥಿತಿಗಳನ್ನು ಸೃಷ್ಟಿಸುವಲ್ಲಿ ಆರ್ಥಿಕ ಬಿಕ್ಕಟ್ಟಿನ ಪ್ರಾಮುಖ್ಯತೆಯನ್ನು ಗುರುತಿಸುವವರೂ ಸಹ, ಈ ಹದಗೆಡುತ್ತಿರುವ ಆರ್ಥಿಕ ಸನ್ನಿವೇಶವನ್ನು ಅವರ ಆಡಳಿತವು ತಳೆದ "ಸ್ವಜನ ಪಕ್ಷಪಾತ"ವೇ ಕಾರಣವೆಂದು ಹೇಳುತ್ತಾರೆ. ಅಂತೆಯೇ, ಸ್ವಾತಂತ್ರ್ಯ–ಹೋರಾಟಗಾರರ ವಂಶಸ್ಥರಿಗೆ ಉದ್ಯೋಗಗಳಲ್ಲಿ "ಮೀಸಲಾತಿ" ಕಲ್ಪಿಸುವ ನೀತಿಯ ವಿರೋಧವನ್ನು ಸಾಮಾನ್ಯವಾಗಿ ಆಡಳಿತದ "ಸ್ವಜನ ಪಕ್ಷಪಾತ" ನೀತಿಯ ವಿರೋಧವೆಂದು ವ್ಯಾಖ್ಯಾನಿಸಲಾಗಿದೆ. ಆದರೆ ಈ ತರ್ಕವು ನಿಜ ಸಮಸ್ಯೆಯನ್ನು ಗುರುತಿಸುವಲ್ಲಿ ಜಾರಿಕೊಂಡಿದೆ. ನಿಜ ಸಮಸ್ಯೆ ಎಂದರೆ, ಬಾಂಗ್ಲಾದೇಶದ ನಿರುದ್ಯೋಗ ಬಿಕ್ಕಟ್ಟಿನ ಅಗಾಧತೆಯಿಂದಾಗಿ "ಮೀಸಲಾತಿ" ವಿರೋಧವು ಒಂದು ತೀವ್ರತೆ ಪಡೆಯಿತು ಎಂಬುದು. ಅದರ ಮೂಲವು ಅರ್ಥವ್ಯವಸ್ಥೆಗೆ ತಗುಲಿದ ಬಿಕ್ಕಟ್ಟು ನವ ಉದಾರವಾದಿ ವ್ಯವಸ್ಥೆಯಲ್ಲಿ ಪ್ರಾಮುಖ್ಯತೆ ಪಡೆದಿರುವ ರಫ್ತು–ಪ್ರಧಾನ ಬೆಳವಣಿಗೆಯ ಕಾರ್ಯ–ತಂತ್ರದಲ್ಲಿ ನೆಲೆಸಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, "ಸ್ವಜನ ಪಕ್ಷಪಾತ"ವು ಸಮರ್ಥನೀಯವಲ್ಲ; ಆದರೆ ಅದು ಸಮಸ್ಯೆಯ ಮೂಲವಲ್ಲ. ನಿಜ ಸಮಸ್ಯೆ, ಆರ್ಥಿಕ ಬಿಕ್ಕಟ್ಟಿನ ಮೂಲದಲ್ಲಿರುವ ರಫ್ತು–ಪ್ರಧಾನ ಬೆಳವಣಿಗೆಯ ಕಾರ್ಯ–ತಂತ್ರವೇ.

ಎರಡು ಪಾಠಗಳು

ರಫ್ತು–ಪ್ರಧಾನ ಬೆಳವಣಿಗೆಯ ಈ ಕಾರ್ಯ–ತಂತ್ರವು ಸ್ವಲ್ಪ ಸಮಯ ನಂಬಲಾಗದಷ್ಟು ಯಶಸ್ವಿ ಫಲಿತಾಂಶಗಳನ್ನು ತರುತ್ತದೆಯಾದರೂ, ರಫ್ತು ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರುವ ವಿಶ್ವ ಅರ್ಥವ್ಯವಸ್ಥೆಯ ನಿಧಾನಗತಿ ಅಥವಾ ದೇಶದ ಹೊರಗೆ ಸಂಭವಿಸುವ ಕೆಲವು ಪ್ರತಿಕೂಲ ವಿದ್ಯಮಾನಗಳು ದೇಶದ ಅರ್ಥವ್ಯವಸ್ಥೆಯನ್ನು ಅದು ಯಶಸ್ಸಿನ ಅವಧಿಯಲ್ಲಿ ಪುಟ 14 ಕ್ಕೆ

ಹೇಮಾ ಸಮಿತಿ ವರದಿ:

ದೇಶದ ಎಲ್ಲ ಕಡೆಗಳಲ್ಲೂ ಇಂತಹ ಕ್ರಮಗಳ ಅನುಷ್ಠಾನಕ್ಕೆ ಆಗ್ರಹ

ಕೇರಳ ಚಲನಚಿತ್ರೋದ್ಯಮದಲ್ಲಿ ಲೈಂಗಿಕ ಕಿರುಕುಳದ ಕುರಿತಾದ ನ್ಯಾಯಮೂರ್ತಿ ಹೇಮಾ ಸಮಿತಿಯ ವರದಿಯನ್ನು ಸಿಐಟಿಯುನ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯು(ಎಐಸಿಸಿಡಬ್ಲ್ಯುಡಬ್ಲ್ಯು) ಸ್ವಾಗತಿಸಿದೆ, ಇದರ ಪರಿಣಾಮವಾಗಿ ಕೆಲವು ಪ್ರಮುಖ ಚಲನಚಿತ್ರ ವ್ಯಕ್ತಿಗಳು ಸರ್ಕಾರಿ ಸಂಸ್ಥೆಗಳಿಗೆ ರಾಜೀನಾಮೆ ನೀಡಿದ್ದಾರೆ.

ಹೋರಾಟಕ್ಕೆ ಮುಂದಾದ ಕಲಾವಿದರು ಮತ್ತು ವುಮೆನ್ ಇನ್ ಸಿನಿಮಾ ಕಲೆಕ್ಟಿವ್ (ಡಬ್ಲ್ಯುಸಿಸಿ) "ಕೇರಳ ಚಲನಚಿತ್ರೋದ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಎದುರಿಸುತ್ತಿರುವ ಆಘಾತಕಾರಿ ತಾರತಮ್ಯ ಮತ್ತು ಲೈಂಗಿಕ ಕಿರುಕುಳವನ್ನು ಎತ್ತಿ ತೋರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ" ಎಂದು ಎಐಸಿಸಿಡಬ್ಲ್ಯುಡಬ್ಲ್ಯು ಅವರನ್ನು ಅಭಿನಂದಿಸಿದೆ.

ಕೇರಳ ಸರ್ಕಾರವು ರಾಜ್ಯದಲ್ಲಿ ನಿರ್ದಿಷ್ಟ ಕಾಲಮಿತಿಯೊಳಗೆ ವರದಿ ಅನುಷ್ಠಾನಗೊಳ್ಳುವಂತೆ ಖಚಿತಪಡಿಸುತ್ತದೆ ಎಂದು ಆಶಿಸಿರುವ ಸಮನ್ವಯ ಸಮಿತಿ, ಕೆಲಸದ ಸ್ಥಳದಲ್ಲಿ ಲಿಂಗ ನ್ಯಾಯವನ್ನು ಖಚಿತಪಡಿಸಿಕೊಳ್ಳಲು ಬಾಲಿವುಡ್ ಮತ್ತು ಇತರ ಭಾಷೆಯ ಚಲನಚಿತ್ರ ಮತ್ತು ಟೆಲಿವಿಷನ್ ಉದ್ಯಮಗಳಲ್ಲಿಯೂ ಇದೇ ರೀತಿಯ ಸಮಿತಿಗಳನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದೆ.

ಕೇಂದ್ರ ಸರಕಾರ ಲೈಂಗಿಕ ಹಿಂಸಾಚಾರ ಮತ್ತು ಲಿಂಗ ತಾರತಮ್ಯವನ್ನು ಕೊನೆಗೊಳಿಸಲು ಚಲನಚಿತ್ರ ಮತ್ತು ಟೆಲಿವಿಷನ್ ಉದ್ದಿಮೆಗೆ ಮಾದರಿ ನೀತಿ ಸಂಹಿತೆ ತರಬೇಕು ಮತ್ತು "ಈ ಪ್ರಕರಣಗಳನ್ನು ನಿಭಾಯಿಸಲು ಮತ್ತು ಇನ್ನೂ ಮೌನವಾಗಿರುವ ಸಂತ್ರಸ್ತರಿಗೆ ಆತ್ಮವಿಶ್ವಾಸವನ್ನು ನೀಡಲು ಒಂದು ತ್ವರಿತ ನ್ಯಾಯಾಲಯವನ್ನು ಸ್ಥಾಪಿಸುವುದು ಸೂಕ್ತ" ಎಂದು ಎಐಸಿಸಿಡಬ್ಲ್ಯುಡಬ್ಲ್ಯು ಅಭಿಪ್ರಾಯ ಪಟ್ಟಿದೆ.

ನ್ಯಾಯಮೂರ್ತಿ ಹೇಮಾ ಸಮಿತಿ ಹಿರಿಯ ನಟರು ಮತ್ತು ಕಿರಿಯ ಕಲಾವಿದರು ಮತ್ತು ತಂತ್ರಜ್ಞರು ಸೇರಿದಂತೆ 50ಕ್ಕೂ ಹೆಚ್ಚು ಪುರುಷರು ಮತ್ತು ಮಹಿಳೆಯರು ಹೇಳಿರುವುದನ್ನು ದಾಖಲಿಸಿಕೊಂಡು ಸಮಗ್ರ ವರದಿಯನ್ನು ಸಿದ್ಧಪಡಿಸಲು ಶ್ಲಾಘನೀಯ ಪ್ರಯತ್ನಗಳನ್ನು ಮಾಡಿದೆ. ಸಂತ್ರಸ್ತರು ತಮ್ಮ ಗೌಪ್ಯತೆಯ ಉಲ್ಲಂಘನೆಯ ಬಗ್ಗೆ ಬಹಳ ಭಯಪಟ್ಟಿದ್ದರಿಂದ ಸಮಿತಿಯು ವರದಿಯನ್ನು ಪೂರ್ಣಗೊಳಿಸಲು ಹಲವಾರು ಸವಾಲುಗಳನ್ನು ಎದುರಿಸಿತು. ಪರಿಣಾಮವಾಗಿ ವರದಿ ಸಿದ್ಧಪಡಿಸಲು ಎರಡು ವರ್ಷ ಬೇಕಾಯಿತು. ಹಲವಾರು ಗೌಪ್ಯತೆಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಶಾಸನಬದ್ಧ ಸಂಸ್ಥೆಗಳ ಮತ್ತು ನ್ಯಾಯಾಂಗದ ಮಧ್ಯಪ್ರವೇಶದಿಂದ ಅದರ ಬಿಡುಗಡೆಯು ಮತ್ತಷ್ಟು ವಿಳಂಬವಾಯಿತು.

ಚಲನಚಿತ್ರೋದ್ಯಮದ ಎಲ್ಲಾ ಹಂತಗಳಲ್ಲಿ ಮಹಿಳೆಯರು ತಮ್ಮ ವೃತ್ತಿಜೀವನದ ಪ್ರಾರಂಭದಲ್ಲಿಯೇ ಉದ್ಯಮದಲ್ಲಿನ ಸುಲಿಗೆಕೋರರಿಂದ ಎದುರಿಸುತ್ತಿರುವ ಲೈಂಗಿಕ ಕಿರುಕುಳಗಳು ಮತ್ತು ದಾಳಿಗಳ ಆಘಾತಕಾರಿ ಸಂಗತಿಗಳು ಬೆಳಕಿಗೆ ಬಂದಿವೆಯಷ್ಟೇ ಅಲ್ಲ, ಸಂಭಾವನೆ, ತಾಂತ್ರಿಕ ಅವಕಾಶಗಳಲ್ಲಿ ವಿಪರೀತ ಲಿಂಗ ತಾರತಮ್ಯಗಳು, ಶೌಚಾಲಯಗಳು ಮತ್ತು ಬಟ್ಟೆ ಬದಲಾಯಿಸುವ ಕೊಠಡಿಗಳ ಕೊರತೆ, ಕುಂದುಕೊರತೆ ನಿವಾರಣಾ ವ್ಯವಸ್ಥೆಯ ಕೊರತೆ, ಕೆಲಸದಲ್ಲಿ ಭಾಗವಹಿಸಲು ಅಕ್ರಮ ವಯಸ್ಸಿನ ಮಿತಿಗಳು ಮತ್ತು ಕಾಂಟ್ರಾಕ್ಟುಗಳು ಹಾಗೂ ದುಡಿಮೆಯ ಪರಿಸ್ಥಿತಿಗಳ ನಿಯಮಾವಳಿಗಳ ಕೊರತೆ ಮುಂತಾದವುಗಳತ್ತ ಬೊಟ್ಟು ಮಾಡಿ ತೋರಿಸಿದೆ.

ಉದ್ಯಮದೊಳಗೆ ಕೆಲವು ಪುರುಷರ ಬಿಗಿಯಾದ ನಿಯಂತ್ರಣದಲ್ಲಿ ಘೋರವಾದ ಪ್ರತಿಗಾಮಿ ಊಳಿಗಮಾನ್ಯ ಅಧಿಕಾರ ವ್ಯವಸ್ಥೆ ಇದೆ ಎಂದಿರುವ ಸಮಿತಿಯು, ಇದರ ಫಲಿತಾಂಶವಾಗಿ ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಧೈರ್ಯವಿರುವವರ ಮೇಲೆ ಸಂಪೂರ್ಣವಾಗಿ ಕಾನೂನುಬಾಹಿರ ಮತ್ತು ಅನಧಿಕೃತ "ನಿಷೇಧ" ಸೃಷ್ಟಿಯಾಗಿದೆ. ಆದ್ದರಿಂದ ಉದ್ಯಮವನ್ನು ನಿಯಂತ್ರಿಸಲು ಪ್ರತ್ಯೇಕ ನಿರ್ದಿಷ್ಟ ಕಾನೂನಿನ ರಚನೆಯಾಗಬೇಕು, ನ್ಯಾಯಮಂಡಳಿ, ವಿಶೇಷ ಕಲ್ಯಾಣ ನಿಧಿಯನ್ನು ಸ್ಥಾಪಿಸಬೇಕು,



ಲಿಖಿತ ಒಪ್ಪಂದಗಳು, ಸಮಾನ ಸಂಭಾವನೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಗಳಲ್ಲಿ ಲಿಂಗ ಸಮತೋಲನವನ್ನು ಖಚಿತಪಡಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ. ಒಟ್ಟಾರೆಯಾಗಿ ಈ ಸಮಿತಿ ಒಂದು ಸಮಗ್ರ ಚಲನಚಿತ್ರ ಕೆಲಸಗಾರರ ಧೋರಣೆ ರೂಪಿಸಬೇಕು, ಮಹಿಳೆಯರು ನಿರ್ಮಿಸಿದ ಚಲನಚಿತ್ರಗಳಿಗೆ ಬೆಂಬಲ ಸಿನಿಮಾಗಳ ವಿಷಯ–ವಸ್ತುವಿನಲ್ಲಿ ಲಿಂಗ ನ್ಯಾಯ ಇರಬೇಕು ಎಂದು ಕರೆ ನೀಡಿದೆ.

ಎಲ್‌ಡಿಎಫ್ ಸರ್ಕಾರವು ಈ ದಿಕ್ಕಿನಲ್ಲಿ ಸಮಗ್ರ ಸಲಹೆ–ಸೂಚನೆಗಳನ್ನು ಚರ್ಚಿಸಲು ಎಲ್ಲ ರಂಗಗಳ ಮಹಿಳೆಯರ ಸಮಾವೇಶವನ್ನು ನಡೆಸಲು ನಿರ್ಧರಿಸಿರುವುದು ಒಂದು ಪೋಲಿಸ್ ತನಿಖಾ ತಂಡವನ್ನು ರಚಿಸಲು ನಿರ್ಧರಿಸಿರುವುದನ್ನು ಎಐಸಿಸಿಡಬ್ಲ್ಯುಡಬ್ಲ್ಯು ಸ್ವಾಗತಿಸಿದೆ.

ಚಲನ ಚಿತ್ರೋದ್ಯಮದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಶೋಷಣೆ, ತಾರತಮ್ಯ ಮತ್ತು ಅನ್ಯಾಯದ ಆಚರಣೆಗಳು ಕೇರಳದಲ್ಲಿ ಮಾತ್ರವಲ್ಲ, ದೇಶದಾದ್ಯಂತ ಚಲನಚಿತ್ರ ನಿರ್ಮಾಣ ಕೇಂದ್ರಗಳಲ್ಲಿ ವ್ಯಾಪಕವಾಗಿ ಹರಡಿವೆ ಎಂದು ವರದಿಯಾಗಿದೆ. ಬಾಲಿವುಡ್‌ನ ಹಲವು ನಟಿಯರು 'ಕಾಸ್ಟಿಂಗ್ ಕೌಚ್' (ಪಾತ್ರದ ಮಂಚ)ಹೆಸರಿನಲ್ಲಿ ತಾವು ಎದುರಿಸಿದ ಲೈಂಗಿಕ ದೌರ್ಜನ್ಯಗಳ ಬಗ್ಗೆ ಈ ಹಿಂದೆ ಬಹಿರಂಗಪಡಿಸಿದ್ದನ್ನು ನಾವು ನೆನಪಿಸಿಕೊಳ್ಳಬಹುದು. ತೆಲುಗು ಚಲನಚಿತ್ರೋದ್ಯಮದಲ್ಲಿ, ಈ ಕಿರುಕುಳವನ್ನು ವಿರೋಧಿಸಿ ಚಲನಚಿತ್ರ ಕಲಾವಿದೆಯೊಬ್ಬರು ಹೈದರಾಬಾದ್‌ನಲ್ಲಿ ತಮ್ಮ ಬಟ್ಟೆಗಳನ್ನು ಬಿಚ್ಚಿ ಪ್ರತಿಭಟನೆ ನಡೆಸಿದರು. ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಈ ದೂರುಗಳ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಸಮಗ್ರ ನೀತಿಯನ್ನು ರೂಪಿಸಬೇಕು ಎಂದು ಆಗ್ರಹಿಸಿರುವ ಸಿಐಟಿಯುನ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ "ನಾವು ಸಿನಿಮಾದಲ್ಲಿ ಮಹಿಳೆಯರ ಪರವಾಗಿ ನಿಲ್ಲುತ್ತೇವೆ ಒಗ್ಗತ್ತು ಪಿತೃಪ್ರಧಾನ ಅಧಿಕಾರ ರಚನೆಗಳನ್ನು ಕೆಡವಲು, ನ್ಯಾಯಯುತವಾದ ದುಡಿಮೆಯ ಆಚರಣೆಗಳಿರುವ ಲಿಂಗ–ನ್ಯಾಯದ ಕೆಲಸದ ಸ್ಥಳಗಳನ್ನು ನಿರ್ಮಿಸಲು ಮತ್ತು ಭಯ ಮತ್ತು ದಬ್ಬಾಳಿಕೆಯ ಎದುರು ಮೌನದ ಸಂಸ್ಕೃತಿಯನ್ನು ಕೊನೆಗೊಳಿಸುವ ಅವರ ಹೋರಾಟಗಳನ್ನು ಬೆಂಬಲಿಸುತ್ತೇವೆ" ಎಂದು ಘೋಷಿಸಿದೆ.

ಮುಕೇಶ್ ವಿಚಾರದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು: ಎಂ.ಎ.ಬೇಬಿ

ನವದೆಹಲಿ: ಲೈಂಗಿಕ ಕಿರುಕುಳದ ಆರೋಪ ಎದುರಿಸುತ್ತಿರುವ ನಟ ಮತ್ತು ಶಾಸಕ ಎಂ.ಮುಕೇಶ್ ವಿಷಯದಲ್ಲಿ ಕೇರಳದ ಸಿಪಿಐ(ಎಂ) ಮತ್ತು ಎಲ್‌ಡಿಎಫ್ ಸೂಕ್ತ ತೀರ್ಮಾನ ಕೈಗೊಳ್ಳುತ್ತವೆ ಎಂದು ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೊ ಸದಸ್ಯ ಎಂ.ಎ.ಬೇಬಿ ಹೇಳಿದ್ದಾರೆ.

ಅವರು ಆಗಸ್ಟ್ 28ರಂದು ಪತ್ರಕರ್ತರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿ, ಇಂತಹ ವಿಷಯಗಳು ಗಂಭೀರವಾದವು, ಇದಕ್ಕೆ ಮುಕೇಶ್ ಕೂಡ ಕಾರಣರಾಗಿದ್ದಾರೆ, ಸಿಪಿಐ–ಎಂ ಮತ್ತು ಎಲ್‌ಡಿಎಫ್ ಚರ್ಚಿಸಿ ನಿರ್ಧಾರ ಕೈಗೊಳ್ಳಲಿವೆ.

ಪಿಣರಾಯಿ ವಿಜಯನ್ ಸರ್ಕಾರವು ಈ ವಿಷಯಗಳ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳುತ್ತಿದೆ. ಯಾರು ಎಷ್ಟೇ ಎತ್ತರದಲ್ಲಿದ್ದರೂ ಸರಿ, ಮುಖ ನೋಡದೆ ಅನುಕರಣೀಯವಾಗಿ ಸಾಗಬಲ್ಲೆ ಎನ್ನುವುದನ್ನು ಸಾಬೀತುಪಡಿಸಿದ ಹಲವು ಉದಾಹರಣೆಗಳಿವೆ. ಅದಕ್ಕೆ ಸೂಪರ್ ಫೇಮಸ್ ನಟ ಜೈಲು ಸೇರಿದ್ದೇ ಸಾಕ್ಷಿ. ನಾಲ್ವರು ಮಹಿಳಾ ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ತನ್ನ ಕಾರ್ಯ ಆರಂಭಿಸಿದೆ. ಇದು ಇಡೀ ದೇಶಕ್ಕೆ ಮಾದರಿಯಾಗಿದೆ.

ಇದ್ಯಾವುದನ್ನೂ ನೋಡದಂತೆ ನಟಿಸಿ ಒಬ್ಬರಿಗೆ ಮಾತ್ರ ಚರ್ಚೆಯನ್ನು ಕೇಂದ್ರೀಕರಿಸುವುದು ಒಳ್ಳೆಯದಲ್ಲ. ತಪ್ಪು ಮಾಡಿದವರು ಯಾರೂ ತಪ್ಪಿಸಿಕೊಳ್ಳುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಇದಕ್ಕೆ ಈ ಹಿಂದಿನ ಕ್ರಮಗಳೇ ಗ್ಯಾರಂಟಿ.

ಪ್ರತಿಯೊಂದು ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಮಾಧ್ಯಮಗಳು ಸಮಾನ ಪ್ರಾಮುಖ್ಯತೆಯಿಂದ ಪರಿಗಣಿಸಬೇಕು. ಕಾಂಗ್ರೆಸ್ ಶಾಸಕರ ಮೇಲೆ ಪ್ರಕರಣಗಳಿವೆ. ಪ್ರಸ್ತುತ, ಕೇರಳದ ಲೋಕಸಭಾ ಸದಸ್ಯರನ್ನು ಒಳಗೊಂಡ ಪ್ರಕರಣಗಳು ಮತ್ತು ದೂರುಗಳಿವೆ. ಮಾಧ್ಯಮಗಳು ಇಂತಹ ತಮ್ಮ ಧೋರಣೆಗಳನ್ನು ತಿದ್ದಿಕೊಳ್ಳಬೇಕು ಎಂದು ಎಂ.ಎ.ಬೇಬಿ ಹೇಳಿದರು.

ಯಾರೇ ತಪ್ಪು ಮಾಡಿದರೂ ಕಠಿಣ ಕ್ರಮ: ಇ.ಪಿ.ಜಯರಾಜನ್

ಆಗಸ್ಟ್ 29, 2024

ತಿರುವನಂತಪುರಂ: ಯಾರೇ ತಪ್ಪು ಮಾಡಿದರೂ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಲ್‌ಡಿಎಫ್ ಸಂಚಾಲಕ ಇ.ಪಿ.ಜಯರಾಜನ್ ಹೇಳಿದ್ದಾರೆ. ಇಲ್ಲಿಯವರೆಗೆ ಎಡ ಸರಕಾರ ಸರಿಯಾದ ನಿಲುವು ತಳೆದಿದೆ. ಮುಕೇಶ್ ವಿರುದ್ಧ ಜಾಮೀನು ರಹಿತ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

ತನಿಖೆಗಾಗಿ ಸರ್ಕಾರ ಏಳು ಸದಸ್ಯರ ಐಪಿಎಸ್ ತಂಡವನ್ನು ನೇಮಿಸಿದೆ. ಅವರಲ್ಲಿ ನಾಲ್ವರು ಮಹಿಳೆಯರು ಎಂದು ಜಯರಾಜನ್ ತಿಳಿಸಿದರು.

ಬಾಂಗ್ಲಾದೇಶದ "ಆರ್ಥಿಕ ಪವಾಡ' ಕುಸಿದು ಬಿದ್ದದ್ದೇಕೆ.... ಪುಟ 13 ರಿಂದ

ಕಂಡ ಮಹತ್ಸಾಧನೆಗಳನ್ನು ಮಣ್ಣುಪಾಲು ಮಾಡುವ ರೀತಿಯ ಬಿಕ್ಕಟ್ಟಿಗೆ ತಳ್ಳುತ್ತದೆ. ಬಾಂಗ್ಲಾದೇಶದ ಅಭಿವೃದ್ಧಿಯಿಂದ ಕಲಿಯಬೇಕಾದ ಎರಡು ಮಹೋನ್ನತ ಪಾಠಗಳೆಂದರೆ: ಮೊದಲನೆಯದು, ಒಮ್ಮೆ "ವಿಜಯಶಾಲಿ" ಎನಿಸಿದ ಮೂರನೆಯ ಜಗತ್ತಿನ ದೇಶವೊಂದು ಅಚಾನಕ್ಕಾಗಿ ನೆಲ ಕಚ್ಚಬಹುದು ಮತ್ತು ಎರಡನೆಯದಾಗಿ, ಒಂದರ ಮೇಲೊಂದು ಎರಗುವ ತೊಂದರೆಗಳು, ಅಥವಾ ಆರಂಭದಲ್ಲಿ ದೇಶದ ಒಂದು ವಲಯದಲ್ಲಿ ಕಾಣಿಸಿಕೊಳ್ಳುವ ತೊಂದರೆಗಳು ಇತರ ವಲಯಗಳಲ್ಲಿ ಹಲವಾರು ತೊಂದರೆಗಳಿಗೆ ಕಾರಣವಾಗಬಹುದು.

ಬಾಂಗ್ಲಾದೇಶವು ತನ್ನ ಎಲ್ಲಾ ಮೊಟ್ಟೆಗಳನ್ನೂ ಒಂದೇ ಬುಟ್ಟಿಯಲ್ಲಿ ಇಟ್ಟಿದ್ದುದೇ ಸಮಸ್ಯೆಯಾಯಿತು, ಅಂದರೆ, ವೈವಿಧ್ಯಮಯ ರಫ್ತುಗಳನ್ನು ಹೊಂದುವ ಬದಲು ಅದು ಕೇವಲ ಸಿದ್ಧ–ಉಡುಪುಗಳ ರಫ್ತಿನ ಮೇಲೆ ಅವಲಂಬಿತವಾಗಿದ್ದುದೇ ಸಮಸ್ಯೆಯಾಯಿತು ಎಂದು ಕೆಲವರು ಹೇಳುತ್ತಾರೆ. ಇನ್ನೂ ಕೆಲವರು, ಬಾಂಗ್ಲಾದೇಶವು ತನ್ನ ಸಿದ್ಧ–ಉಡುಪುಗಳ ರಫ್ತುಗಳ ಮೂಲಕ ಸಂಪಾದಿಸಿದ ಯಶಸ್ಸನ್ನು ಬಳಸಿಕೊಂಡು ತನ್ನ ಆಂತರಿಕ ಮಾರುಕಟ್ಟೆಯ ಅಗತ್ಯವನ್ನು ಪೂರೈಸುವ ಸಂಪೂರ್ಣ ಶ್ರೇಣಿಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ತನ್ನ ಅರ್ಥವ್ಯವಸ್ಥೆಯನ್ನು ವೈವಿಧ್ಯಗೊಳಿಸಿಕೊಳ್ಳಬೇಕಿತ್ತು ಎಂದು ಹೇಳುತ್ತಾರೆ. ಒಂದು ಪ್ರಮುಖ ಅಂಶವನ್ನು ಗಮನಿಸದೇ ಇರುವುದರಿಂದ ಈ ಟೀಕೆಗಳು ಅರ್ಥ ಕಳೆದುಕೊಳ್ಳುತ್ತವೆ: ಒಂದು ನವ ಉದಾರವಾದಿ ಅರ್ಥವ್ಯವಸ್ಥೆಯಲ್ಲಿ ಪ್ರಭುತ್ವವು ಮಧ್ಯಪ್ರವೇಶಿಸುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ದೇಶೀಯ ಮಾರುಕಟ್ಟೆಗೆ ಸ್ವಲ್ಪ ಮಟ್ಟಿನ ರಕ್ಷಣೆ ಒದಗಿಸದ ಹೊರತು ಆಂತರಿಕ (ದೇಶೀಯ) ಕೈಗಾರಿಕೀಕರಣವನ್ನು ಉತ್ತೇಜಿಸುವುದು ಸಾಧ್ಯವಿಲ್ಲ. ಆದರೆ, ಅಂತಹ ರಕ್ಷಣೆ ಒದಗಿಸುವ ಕ್ರಮವನ್ನು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ವಿರೋಧಿಸುತ್ತದೆ. ರಫ್ತುಗಳನ್ನು ಯಶಸ್ವಿಗೊಳಿಸಲು ಹಣಕಾಸು ಬಂಡವಾಳದ ಬೆಂಬಲ ಅಗತ್ಯವಾಗುತ್ತದೆ. ಅದೇ ರೀತಿಯಲ್ಲಿ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯಾವ ನಿರ್ದಿಷ್ಟ ರಫ್ತು ಯಶಸ್ವಿಯಾಗುತ್ತದೆ ಎಂಬುದನ್ನು ಅಂತಾರಾಷ್ಟ್ರೀಯ ಬಂಡವಾಳ ನಿರ್ಧರಿಸುತ್ತದೆ. ಅಂದರೆ, ರಫ್ತು ಯಶಸ್ಸನ್ನು ನಿರ್ಧರಿಸುವುದು ದೇಶದ ಸ್ಥಿತಿ–ಗತಿಗಳಲ್ಲ. ಹಾಗಾಗಿ, ನವ ಉದಾರವಾದದ ಅಡಿಯಲ್ಲಿ ರಫ್ತು–ಪ್ರಧಾನ ಬೆಳವಣಿಗೆಯ ಅಪಾಯಗಳಿಗೆ ಪ್ರಭುತ್ವವನ್ನು ದೂಷಿಸುವುದು ಸಂಪೂರ್ಣವಾಗಿ ಅನಪೇಕ್ಷಿತ.

ಮೂರನೇ ಜಗತ್ತಿಗೆ ಬೇರೆ ಪರ್ಯಾಯವಿಲ್ಲ

ಮುಹಮ್ಮದ್ ಯೂನಸ್ ಮತ್ತು ವಿದ್ಯಾರ್ಥಿಗಳು ಹೊಂದಿರುವ ಆಶಯಗಳು ಏನೇ ಇರಲಿ, ಮುಂದೆ ನಡೆಯಲಿರುವ ಚುನಾವಣೆಗಳಲ್ಲಿ ↗

‘ವಾಳೈ’ ತಮಿಳು ಸಿನಿಮಾ: ಬಾಳೆಗಿಡದ ಕೆಳಗೆ ಬಾಳೆಯಂತೆ ಬೆಳೆಯುವ ಕೆಂಪು ಬಾವುಟ

ಜಿ. ರಾಮಕೃಷ್ಣನ್
ಸಿಪಿಐ(ಎಂ) ಪಿಬಿಎಂ ಸದಸ್ಯರು

ನಿರ್ದೇಶಕ ಮಾರಿ ಸೆಲ್ವರಾಜ್ ನಿರ್ದೇಶನದ ‘ವಾಳೈ’ (ಬಾಳೆ) ಸಿನಿಮಾ ಆರಂಭದಿಂದ ಕ್ಲೈಮ್ಯಾಕ್ಸ್ ವರೆಗೆ ತುಂಬಾ ಲವಲವಿಕೆಯಿಂದ ಕೂಡಿದೆ. ಹಳ್ಳಿಯೊಂದರ ಸಾಮಾಜಿಕ–ಆರ್ಥಿಕ ಪರಿಸರವನ್ನು ಕೇಂದ್ರೀಕರಿಸಿ, ‘ವಾಳೈ’ (Vaazhai) ಜನರ ಮುಂದಿಡುವ ಬಲವಾದ ಪರಿಕಲ್ಪನೆಯನ್ನು ಚಿತ್ರಕಥೆಯ ಮೂಲಕ ಮತ್ತು ಪಾತ್ರಗಳ ಸಂಭಾಷಣೆ ಮತ್ತು ದೇಹ ಭಾಷೆಯ ಮೂಲಕ ಪ್ರದರ್ಶಿಸಲಾಗಿದೆ.


ಪರಿಯೆರುಂ ಪೆರುಮಾಳ್, ಕರ್ಣನ್, ಮಾಮನ್ನನ್ ಇವುಗಳನ್ನು ಸ್ವಲ್ಪ ನೆನಪಿಸಿಕೊಳ್ಳಬಹುದು. ವಾಳೈ ಎಂಬ ಎರಡೇ ಅಕ್ಷರದಲ್ಲಿ ನಿರ್ದೇಶಕರು ಏನು ಮಾಡಲಿದ್ದಾರೆ ಎಂಬ ಪ್ರಶ್ನೆಗಳೊಂದಿಗೆ ಸಿನಿಮಾ ನೋಡಲುಹೋದವರಿಗೆ ಅದೊಂದು ಅನಿರೀಕ್ಷಿತ ಚಿತ್ರಕತೆ ಕಾಣುತ್ತದೆ.

ಹಸಿರು ಬಾಳೆ ತೋಪು. ಮಾಗಿದ ಬಾಳೆ ಗೊಂಚಲುಗಳು. ಸಮೃದ್ಧ ಗ್ರಾಮ. ಆದರೆ, ಮತ್ತೊಂದೆಡೆ, ಭತ್ತದ ಗದ್ದೆಗಳನ್ನು ಉಳುಮೆ ಮಾಡುವ ಪುರುಷರು, ಮಹಿಳೆಯರು ಮತ್ತು ಮಕ್ಕಳಾದಿಯಾಗಿ ಬಾಳೆಹಣ್ಣುಗಳನ್ನು ಹೊರುವ ಕೆಲಸ. ಮಳೆ, ನೀರು, ಕೆಸರು, ಮಣ್ಣು ಹೀಗೆ ಹೇಗಿದ್ದರೂ ಕಾಲಿಗೆ ಚಪ್ಪಲಿಯನ್ನೂ ಧರಿಸದೆ ಕಷ್ಟಪಟ್ಟು ದುಡಿಯುವ ಜನರು. ಈ ಶ್ರಮದ ಶೋಷಣೆ ಮತ್ತು ಬಡತನವನ್ನೂ ಮೂಲವಾಗಿ ತೆಗೆದುಕೊಂಡ 1990ರ ದಶಕದ ಬಾಳೆ ತೋಟ.

1990ರ ಮಧ್ಯಭಾಗದಲ್ಲಿ ತಮಿಳುನಾಡಿನಲ್ಲಿ ಕಮ್ಯೂನಿಷ್ಟ್ ಚಳವಳಿ ಪ್ರಭಾವಶಾಲಿಯಾಗಿದ್ದ ದಿನಗಳು. ಆ ದಿನಗಳಲ್ಲಿ ತಮಿಳುನಾಡಿನ ದಕ್ಷಿಣ ಭಾಗದ ಕಾರುಂಗುಳಂ ಎಂಬ ಪುಟ್ಟ ಗ್ರಾಮದ ಹಿನ್ನಲೆಯಲ್ಲಿ ಸಾಗುವ ‘ವಾಳೈ’ ಕತೆ, ಬಾಳೆಗೊನೆಗಳನ್ನು ಕತ್ತರಿಸುವ ಮತ್ತು ಹೊರುವ ಕೃಷಿ ಕೂಲಿ ಕಾರ್ಮಿಕರ ಉದ್ಯೋಗದ ಸುತ್ತ ತಿರುಗುತ್ತದೆ.

ಚಿತ್ರದುದ್ದಕ್ಕೂ ನೈಜವಾದ ದೃಶ್ಯಗಳು. ವಾಸ್ತವದಿಂದ ಬೇರ್ಪಡಿಸಲಾಗದ ಕತೆಗಳಿವೆ. ಶಾಲಾ ಬಾಲಕ ಸಿವನ್ಯೆಂದನ್ (ಪೊನ್ವೇಲ್), ಅವನ ಅಕ್ಕ ವೆಂಬು (ದಿವ್ಯಾ ದುರೈ ಸಾಮಿ), ತಾಯಿ (ಜಾನಕಿ), ಶಾಲಾ ಸ್ನೇಹಿತ ಶೇಖರ್ (ರಾಹುಲ್), ಹಣ್ಣು ಹೊರುವ ಕೂಲಿಕಾ ಕಣಿ (ಕಲೈಯರಸನ್), ಶಾಲೆಯ ಶಿಕ್ಷಕಿ ಬೂಂಗೋಡಿ ಟೀಚರ್ (ನಿಕಿಲಾ ವಿಮಲ್) ಸೇರಿದಂತೆ ಗ್ರಾಮದ ಕೂಲಿಕಾರ್ಮಿಕರ ನೈಜ ಜೀವನವೇ ಚಿತ್ರದ ಕಥೆ.

ಪಾತ್ರದಾರಿಗಳಾಗಿರುವವರಲ್ಲಿ ಹೆಚ್ಚಿನವರು ಹೊಸ ಮುಖಗಳು. ಹೊಡೆದಾಟದ ದೃಶ್ಯಗಳು, ಅದ್ಭುತವಾದ ನೃತ್ಯ, ಹಾಡುಗಳು, ಕಥೆಗೆ ಅಪ್ರಸ್ತುತ ಕಾಮಿಡಿ ದೃಶ್ಯಗಳಿಲ್ಲದೆ ಚಿತ್ರೀಕರಿಸಿದ ಸಿನಿಮಾ. ಒಟ್ಟಿನಲ್ಲಿ ಕಥೆಯೇ ಚಿತ್ರದ ನಾಯಕ. ಶಾಲಾ ವಿದ್ಯಾರ್ಥಿಗಳಾದ ಸಿವನ್ಯೆಂದನ್, ಶೇಖರ್ ಇಬ್ಬರ ಚೇಷ್ಟೆಗಳ ದೃಶ್ಯಗಳನ್ನು ಚಿತ್ರಕಥೆಯೊಂದಿಗೆ ಸಂಯೋಜಿಸಿ ಸ್ವಾಭಾವಿಕವಾಗಿ ರಚಿಸಲಾಗಿದೆ. ಇಬ್ಬರೂ ರಜನಿ, ಕಮಲ್ ಅಭಿಮಾನಿಗಳಾಗಿರುವುದು ಎಂಬುದು ಚಿತ್ರಕಥೆಯ ಕಾಲವನ್ನು ಪ್ರತಿಬಿಂಬಿಸುತ್ತದೆ. (ಎಂಜಿಆರ್ ನಂತರ, ಶಿವಾಜಿ ಚಿತ್ರರಂಗದಲ್ಲಿ ಉಚ್ಛ್ರಾಯ ಸ್ಥಿತಿಯ ನಂತರ ರಜನಿ ಮತ್ತು ಕಮಲ್ ಯುಗ ಬರುತ್ತದೆ).



ಬಾಳೆಗೊನೆಗಳನ್ನು ಹೊರುವ ದುಡಿಯುವ ಕುಟುಂಬಗಳು ಬಡತನದಿಂದ ಮುಕ್ತಿ ಪಡೆಯಲು ಸಾಧ್ಯವಾಗದ ವಾತಾವರಣದಲ್ಲಿ ಒಂದು ರೂಪಾಯಿ ವೇತನ ಹೆಚ್ಚಳ ಮಾಡುವಂತೆ ಕೇಳುತ್ತಾರೆ. ದಲ್ಲಾಳಿ ಇದನ್ನು ನಿರಾಕರಿಸುತ್ತಾನೆ. ಕನಿ ನೇತೃತ್ವದಲ್ಲಿ ಧರಣಿ ನಡೆಸುತ್ತಾರೆ. ವ್ಯಾಪಾರಿ ಒಂದು ರೂಪಾಯಿ ಕೂಲಿ ಹೆಚ್ಚಳ ಘೋಷಿಸಿದ ನಂತರವೇ ಬಾಳೆಹಣ್ಣು ಹೊರುವ ಕೆಲಸ ಮುಂದುವರಿಯುತ್ತದೆ.

ತೀರಿಸಲಾಗದ ಸಾಲವನ್ನು ಒಡವೆ ಮತ್ತು ಇದ್ದ ಒಂದು ಹಸುವನ್ನು ಮಾರಿದರೂ ಬಡತನದಿಂದ ಹೊರಬರಲಾಗದಂತಹ ಪರಿಸ್ಥಿತಿಯಲ್ಲಿ ಶಾಲೆಗೆ ಹೋಗುತ್ತಿರುವ ಮಗ ಸಿವನ್ಯೆಂದನ್ ನನ್ನು ಹಣ್ಣು ಹೊರುವ ಕೆಲಸ ಮಾಡುವಂತೆ ಒತ್ತಾಯಿಸುವ ತಾಯಿ, ಶಾಲೆಯ ವಾರ್ಷಿಕೋತ್ಸವವನ್ನು ತಪ್ಪಿಸಿಕೊಳ್ಳು ಇಷ್ಟಪಡದ ಶಿವಣ್ಣ ಹಣ್ಣಿನ ಗೊನೆ ಹೊತ್ತುಕೊಂಡು ಶಾಲೆಗೆ ಹೋಗುವುದು, ಹಸಿವಾದಾಗ ಹೋಗುವ ದಾರಿಯಲ್ಲಿ ಬಾಳೆ ತೋಟದಲ್ಲಿ ಬಾಳೆ ಕಡಿದಿದ್ದಕ್ಕೆ ರೈತ ಥಳಿಸಿದ ದಾರುಣ ದೃಶ್ಯ, ಬಡ ಕುಟುಂಬಗಳು, ವಿಶೇಷವಾಗಿ ಪರಿಶಿಷ್ಟ ಜಾತಿ ಕುಟುಂಬಗಳಿಗೆ ಸೇರಿದ ಮಕ್ಕಳು ಕೂಲಿ ಕೆಲಸಕ್ಕೆ ಹೋಗುವ ಹಳ್ಳಿಗಳಲ್ಲಿ ಬಾಲಕಾರ್ಮಿಕರ ನಿರಂತರ ದುಃಸ್ಥಿತಿಯನ್ನು ಚಿತ್ರ ಎತ್ತಿ ತೋರಿಸುತ್ತದೆ.

ಪರಿಯೆರುಮ್ ಪೆರುಮಾಳ್, ಕರ್ಣನ್ ಮತ್ತು ಮಾಮನ್ನನ್ ಚಿತ್ರಗಳ ತಿರುಳು ಜಾತಿ ಹಿಂಸೆಯನ್ನು ಆಧರಿಸಿವೆ. ವಾಳೈ ಚಿತ್ರದಲ್ಲಿ ಪರಿಶಿಷ್ಟ ಜಾತಿಯ ಜನರ ಶೋಷಣೆಯನ್ನು ಕೇಂದ್ರೀಕರಿಸಿ ಚಿತ್ರಕಥೆ ರಚಿಸಿದ್ದಾರೆ ನಿರ್ದೇಶಕರು.

ಈ ಸಿನಿಮಾದಲ್ಲಿ ನಟಿಸಿರುವ ಕಲಾವಿದರು, ಹಿನ್ನೆಲೆ ಸಂಗೀತ, ಛಾಯಾಗ್ರಹಣ, ಸಂಕಲನ ಸೇರಿದಂತೆ ಎಲ್ಲಾ ತಾಂತ್ರಿಕ ಕಲಾವಿದರು, ನಿರ್ದೇಶಕರು ಸಾಕಷ್ಟು ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ದಿನವೂ ಕೂಲಿ ಕೆಲಸಕ್ಕೆ ಹೋದರೆ ಮಾತ್ರ ಮನೆಯಲ್ಲಿ ಒಲೆ ಉರಿಯುವ ಪರಿಸ್ಥಿತಿ ಹೋಗಲಾಡಿಸಲು (ಕೂಲಿ ಕೆಲಸ ಎಂದರೆ ಜೀತದಾಳು ಎಂದು ಮಾರ್ಕ್ಸ್ ಹೇಳಿದ್ದಾರೆ) ಪರಿಹಾರವೇನು?

ಸಿವನ್ಯೆಂದನ್ ಕನಿಯನ್ನು ಮದುವೆಯಾಗುವಂತೆ ತನ್ನ ಅಕ್ಕನಿಗೆ ಹೇಳುತ್ತಾನೆ. ಆತ ತನ್ನ ತಂದೆ ಚಳವಳಿ ಕಾಲದಲ್ಲಿ ಬಳಸುತ್ತಿದ್ದ ಸುತ್ತಿಗೆ ಮತ್ತು ಕುಡಗೋಲು ನಕ್ಷತ್ರದ ಬ್ಯಾಡ್ಜ್ ಗಳು, ಧ್ವಜ, ಬ್ಯಾನರ್ ಗಳನ್ನು ತನ್ನ ಅಕ್ಕ ಮತ್ತು ಕನಿಗೆ ನೀಡುತ್ತಾನೆ. ಪಕ್ಷವನ್ನು ಮುನ್ನಡೆಸಿದ ಆ ವ್ಯಕ್ತಿ ಇಂದು ಬದುಕಿಲ್ಲ. ಆದರೆ ಅವರು ಇನ್ನೂ ನನ್ನೊಂದಿಗೆ ವಾಸಿಸುತ್ತಿದ್ದಾನೆ ಎಂದು ಹೇಳುವ ಸಿವನ್ಯೆಂದನ್ ತಾಯಿ, ತನ್ನ ಕೈಯ್ಯಲ್ಲಿ ಅಚ್ಚು ಹಾಕಿಸಿಕೊಂಡಿದ್ದ ಸುತ್ತಿಗೆ ಮತ್ತು ಕುಡಗೋಲು ಚಿನ್ಹೆಯನ್ನು ತೋರಿಸುತ್ತಾ ‘ಇದನ್ನು ನನ್ನ ಕೈಗೆ ಹಾಕಿದ್ದೇನೆ’ ಎಂದು ಹೇಳುವುದನ್ನು, ಸಿವನ್ಯೆಂದನ್ ಕನಿಗೆ ಚಿನ್ಹೆಯನ್ನು ನೀಡುವ ಮೂಲಕ ಬಾವುಟವು ಕೂಲಿಕಾರ್ಮಿಕರಿಗೆ ಪರಿಹಾರ ಎಂದು ಒತ್ತಿಹೇಳುತ್ತದೆ.

ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾಗಿ ಹತ್ತಾರು ಸಹಸ್ರ ಸಂಗಾತಿಗಳು ಇಂದಿಗೂ ದುಡಿಯುವ ಜನರಿಗಾಗಿ ದುಡಿಯುತ್ತಿದ್ದಾರೆ. ಅವರ್ಯಾರೂ ತಮ್ಮ ಸ್ವಂತ ಹಿತಾಶಕ್ತಿಗಾಗಿ ತೊಡಗಿಸಿಕೊಳ್ಳದೆ, ಒಟ್ಟಾರೆಯಾಗಿ ಶ್ರಮಜೀವಿಗಳ ಉನ್ನತಿಗಾಗಿ ಸಮರ್ಪಿಸಿಕೊಂಡಿದ್ದಾರೆ. ಕಮ್ಯುನಿಸಂ ಹೋಗಿದೆ ಎಂದು ಯಾವ ಬಂಡವಾಳಶಾಹಿಗಳ ಮುಖವಾಣಿಗಳು ಹೇಳಿದರೂ, ದುಡಿಯುವ ಜನರ ಕೆಂಪು ಬಾವುಟ ಮಗಳಿಗೆ ಕೈ ಬದಲಾಯಿಸುತ್ತಿರುವ ಅಪ್ಪನ ಕೆಂಪು ಬಾವುಟದ ಬ್ಯಾಡ್ಜ್ ಹೊಸ ಯುವ ಪೀಳಿಗೆಯನ್ನು ತನ್ನತ್ತ ಸೆಳೆಯುತ್ತಿದೆ ಎಂಬುದು "ವಾಳೈ" ಸಿನಿಮಾದ ಸಾರ.

ಈ ಸಣ್ಣ ಹಳ್ಳಿಯಲ್ಲಿ ಹಸಿವು, ಬಡತನ, ಕಷ್ಟಗಳು ಮತ್ತು ಶೋಷಕರ ವಿರುದ್ಧ ಎಡ ಚಳವಳಿ ಪ್ರಭಾವದ ಹೋರಾಟದ ಚಿತ್ರಣ ಪ್ರೇಕ್ಷಕರ ಹೃದಯವನ್ನು ತಲ್ಲಣಗೊಳಿಸುತ್ತದೆ. ಈ ಕಥೆ, ಆರ್ಥಿಕ ಸಂಕಷ್ಟದಲ್ಲಿ ಒದ್ದಾಡುವ ಭಾರತದ ಕತೆಯಾಗಿದೆ. ಸಿನಿಮಾದಲ್ಲಿ ಬಾಳೆ ಕೃಷಿ ಕಾರ್ಮಿಕರ ಜಾಗದಲ್ಲಿ ಯಾವ ಕ್ಷೇತ್ರದ ಕಾರ್ಮಿಕರನ್ನು ಅಳವಡಿಸಿಕೊಂಡು ಯೋಚಿಸಿದರೂ ಸಿನಿಮಾ ಅವರ ಬದುಕಿಗೆ ಅನ್ವಯಿಸುತ್ತದೆ. ವಾಳೈ ಸಿನಿಮಾ ಈ ದೇಶದ ಪ್ರತೀ ಅಸಂಘಟಿತ ಕಾರ್ಮಿಕರ ಕತೆಯಾಗಿದ್ದು, ಪ್ರೇಕ್ಷಕರಲ್ಲಿ ಅಗಾಧವಾದ ಭಾವನಾತ್ಮಕ ಪ್ರತಿಕ್ರಿಯೆ ಹುಟ್ಟಿಸುತ್ತದೆ.

ವಾಳೈ ಸಿನಿಮಾ ತಮಿಳು ಚಿತ್ರರಂಗದಲ್ಲಿ ಒಂದು ಪ್ರಮುಖ ಕೃತಿ. ಜನಜೀವನದ ಬಗ್ಗೆ ಮಾತನಾಡುವ ಇಂತಹ ಕೆಲಸಗಳು ಮತ್ತು ಪ್ರಯತ್ನಗಳು ಮುಂದುವರಿಯಬೇಕು.

ಅವಾಮಿ ಲೀಗ್ ಸ್ಪರ್ಧಿಸಲು ಒಂದು ವೇಳೆ ಅವಕಾಶ ನೀಡದಿದ್ದರೆ, ಆಗ, ಬಲಪಂಥೀಯ ಪಕ್ಷಗಳು ಈ ರಾಜಕೀಯ ಕ್ಷಿಪ್ರಕ್ರಾಂತಿಯ ಮುಖ್ಯ ಫಲಾನುಭವಿಗಳಾಗಿ ಹೊರಹೊಮ್ಮುತ್ತವೆ. ಬಾಂಗ್ಲಾದೇಶವು ಬಲ ಪಂಥದತ್ತ ತಳ್ಳಲ್ಪಡುತ್ತದೆ. ಸಾಮ್ರಾಜ್ಯಶಾಹಿ ಮತ್ತು ದೇಶೀಯ ಬೆರಳೆಣಿಕೆಯ ಕಾರ್ಪೊರೇಟ್ ಕೂಟಾಧಿಪತ್ಯ (oligarchy) ಹಿರಿ ಹಿರಿ ಹಿಗ್ಗುತ್ತವೆ. ಈ ವಿದ್ಯಮಾನವು ವಿಶ್ವಾದ್ಯಂತ ಅನಾವರಣಗೊಳ್ಳುತ್ತಿರುವ ಹೊಸ ಸನ್ನಿವೇಶದ ವಾಸ್ತವ ವಿವರಣೆಯಾಗುತ್ತದೆ. ವಿಶ್ವ ಬಂಡವಾಳಶಾಹಿ ಬಿಕ್ಕಟ್ಟಿನಿಂದಾಗಿ, ನವ ಉದಾರೀಕರಣ ನೀತಿಗಳನ್ನು ಅನುಸರಿಸುತ್ತಿರುವ ಮೂರನೆಯ ಜಗತ್ತಿನ ಅನೇಕ ದೇಶಗಳು ಆರ್ಥಿಕ ಸ್ಥಗಿತತೆ, ಭೀಕರ ನಿರುದ್ಯೋಗ ಮತ್ತು ವೃದ್ಧಿಸುತ್ತಿರುವ ಬಾಹ್ಯ ಸಾಲಕ್ಕೆ ತಳ್ಳಲ್ಪಡುತ್ತವೆ. ಇದು ಸಾಮ್ರಾಜ್ಯಶಾಹಿಯ ವಿರುದ್ಧ ಒಂದು ಸ್ವಾಯತ್ತ ಅಂತರವನ್ನು ಕಾಯ್ದುಕೊಳ್ಳುವ ಮತ್ತು ಅಧಿಕಾರದಲ್ಲಿರುವ ನಡು–ಪಂಥೀಯ ಆಳ್ವಿಕೆಗಳ ಜನಪ್ರಿಯತೆಯನ್ನು ಕುಂದಿಸುತ್ತದೆ. ಮತ್ತು, ಸಾಮ್ರಾಜ್ಯಶಾಹಿಯಿಂದ ಬೆಂಬಲಿತವಾದ ಬಲಪಂಥೀಯ ಆಳ್ವಿಕೆಗಳಿಗೆ ಈ ನಡು–ಪಂಥೀಯ ಆಳ್ವಿಕೆಗಳನ್ನು ಉರುಳಿಸಲು ಮತ್ತು ಅಧಿಕಾರಕ್ಕೆ ಬರಲು ಸಹಾಯಕವಾಗುವ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಈ ಹೊಸ ಆಳ್ವಿಕೆಗಳು ಅವರು ಬದಲಿಸಿದ ಆಳ್ವಿಕೆಗಳಿಗಿಂತ ಕಡಿಮೆ ನಿರಂಕುಶಾಧಿಕಾರಿಗಳಲ್ಲ. ಆದರೆ ನವ ಉದಾರವಾದ ನೀತಿಗಳನ್ನು ಅನುಸರಿಸುವಾಗ ಮತ್ತು ಸಾಮ್ರಾಜ್ಯಶಾಹಿ ನಿಲುಮೆಯನ್ನು ಅನುಸರಿಸುವಾಗ, ಅವರು ‘ಧಾರ್ಮಿಕತೆ’ಯ ಮೂಲಕ ಅಥವಾ ಕೆಲವು ದುರದೃಷ್ಟಕರ ಅಲ್ಪಸಂಖ್ಯಾತ ಗುಂಪುಗಳನ್ನು "ಅನ್ಯ"ರನ್ನಾಗಿಸುವ ಮೂಲಕ ಜನರ ಗಮನವನ್ನು ಬೇರೆಡೆಗೆ ಸೆಳೆಯುತ್ತಾರೆ. ಇದು ಸಾಮ್ರಾಜ್ಯಶಾಹಿಯ "ಹೇಗಾದರೂ ಸರಿಯೇ, ಗೆಲ್ಲುವುದು ನಾನೇ" ಎಂಬ ಕಾರ್ಯತಂತ್ರವನ್ನು ನಿರೂಪಿಸುತ್ತದೆ. ಇದು ನವ ಉದಾರವಾದದ ಬಿಕ್ಕಟ್ಟಿನಿಂದ ನರಳುತ್ತಿರುವ ಜನರು ನವ ಉದಾರವಾದವನ್ನು ಮೀರದಂತೆ ನೋಡಿಕೊಳ್ಳುತ್ತದೆ ಮತ್ತು ಬಲಪಂಥೀಯ ಅಥವಾ ನವ–ಫ್ಯಾಸಿಸ್ಟ್ ಆಳ್ವಿಕೆಯ ಅಡಿಯಲ್ಲಿ ನವ ಉದಾರವಾದದ ಬಲವರ್ಧನೆಯನ್ನು ಖಚಿತಪಡಿಸುತ್ತದೆ. ಹಾಗಾಗಿ, ನವ ಉದಾರವಾದದ ದುಸ್ವಪ್ನದ ದಬ್ಬಾಳಿಕೆಯು ಸ್ಪಷ್ಟವಾಗಿ ಗೋಚರಿಸುತ್ತಿದ್ದಾಗಲೂ ಅದನ್ನು ಹೊರಗೆಸೆಯುವುದು ಕಷ್ಟವಾಗುತ್ತದೆ.

ನವ ಉದಾರವಾದವನ್ನು ಮೀರಿ ಹೋಗಲು ಒಂದು ಪರ್ಯಾಯ ಆರ್ಥಿಕ ಕಾರ್ಯತಂತ್ರದ ಸುತ್ತ ಜನರನ್ನು ಸಜ್ಜುಗೊಳಿಸುವುದು ಅಗತ್ಯವಾಗುತ್ತದೆ. ಈ ಪರ್ಯಾಯದಲ್ಲಿ ಪ್ರಭುತ್ವವು ವಹಿಸುವ ಪಾತ್ರಕ್ಕೆ ಹೆಚ್ಚಿನ ಮಹತ್ವ ಇರುತ್ತದೆ. ಅದು ಆಂತರಿಕ ಮಾರುಕಟ್ಟೆಯ ಮೇಲೆ ಗಮನಹರಿಸುತ್ತದೆ ಮತ್ತು ಖನಿಜ ಮತ್ತು ಇತರ ನೈಸರ್ಗಿಕ ಸಂಪನ್ಮೂಲಗಳ ಮೇಲೆ ರಾಷ್ಟ್ರೀಯ ನಿಯಂತ್ರಣವನ್ನು ಹೊಂದಿರುತ್ತದೆ. ನವ ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ರಫ್ತು–ಪ್ರಧಾನ ಬೆಳವಣಿಗೆಯ ಕಾರ್ಯತಂತ್ರವನ್ನು ಅನುಸರಿಸುವಂತೆ ಒತ್ತಡ ಹೇರಲು ಬಾಂಗ್ಲಾದೇಶವು ಒಂದು ಸಣ್ಣ ದೇಶವಲ್ಲ. 170 ಮಿಲಿಯನ್ ಜನಸಂಖ್ಯೆಯನ್ನು ಹೊಂದಿರುವ ದೇಶವನ್ನು ಯಾವುದೇ ಕಾರಣಕ್ಕೂ "ಸಣ್ಣ"ದು ಎಂದು ಹೇಳಲಾಗದು. ಖಚಿತವಾಗಿ ಹೇಳುವುದಾದರೆ, ಆಂತರಿಕ ಮಾರುಕಟ್ಟೆ–ಆಧಾರಿತ ಅಭಿವೃದ್ಧಿ ಕಾರ್ಯತಂತ್ರವನ್ನು ಅನುಸರಿಸುವ ಪ್ರಯತ್ನವು ಸುಲಭವಲ್ಲ, ನಿಜ. ಆದರೆ, ಈಗ ವಿಶ್ವ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮಗಳನ್ನು ಎದುರಿಸುತ್ತಿರುವ ಮೂರನೇ ಜಗತ್ತಿಗೆ ಬೇರೆ ಪರ್ಯಾಯವಿಲ್ಲ.

ಅನು: ಕೆ.ಎಂ.ನಾಗರಾಜ್

ದಿಲ್ಲಿ ಅಬಕಾರಿ ಕೇಸ್... ಪುಟ 12 ರಿಂದ

ಸಂಗತಿ, ಜೈಲ್ ಅಪವಾದ” ಎಂಬ ನಿಯಮವನ್ನು ನಿರಾಕರಣೆ ಸಾವಾನ್ಯ ಸಂಗತಿ, ಸ್ವಾತಂತ್ರ್ಯ ಅಪವಾದ ಎಂದೇನೂ ಪಿಎಂಎಲ್‌ಎ ಕಾನೂನು ಮರುನಿರೂಪಿಸಿಲ್ಲ ಎಂದು ಹೇಳಿದೆ.

ಇ.ಡಿ. ಹಾಕಿದ ಕಾನೂನುಬಾಹಿರ ಗಣಿಗಾರಿಕೆಗೆ ಸಂಬಂಧಪಟ್ಟ ಕೇಸಿನಲ್ಲಿ ಝಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೆನ್ ಅವರ ಆಪ್ತ ಸಹಾಯಕ ಪ್ರೇಮ್ ಪ್ರಕಾಶ್‌ರವರಿಗೆ ಪರಿಹಾರ ನೀಡುತ್ತ ಸರ್ವೋಚ್ಚ ನ್ಯಾಯಾಲಯ ಈ ಟಿಪ್ಪಣಿ ಮಾಡಿದೆ.

ಈ ಹಿಂದೆ ಪಿಎಂಎಲ್‌ಎ ಪ್ರಕರಣಗಳಲ್ಲಿ ಜಾಮೀನು ನೀಡುವುದಕ್ಕೆ ಫಿರ್ಯಾದಿಗಳ ತೀವ್ರ ವಿರೋಧವನ್ನು ತಳ್ಳಿ ಹಾಕಲು ಹಿಂಜರಿಯುವಂತೆ ಕಾಣುತ್ತಿದ್ದ ಸರ್ವೋಚ್ಚ ನ್ಯಾಯಾಲಯ, ಈಗ ಪಿಎಂಎಲ್‌ಎ ಯ ಜಾಮೀನು ನಿರಾಕರಣೆಯ ಅಂಶವನ್ನು ಬಳಸಿಕೊಂಡು ರಾಜಕೀಯ ವಿರೋಧಿಗಳನ್ನು ದೀರ್ಘಕಾಲ ಜೈಲಿನಲ್ಲಿಡುವಂತೆ ಮಾಡಲಾಗುತ್ತಿದೆ ಎಂಬುದನ್ನು ಕಾಣುತ್ತಿರುವಂತಿದೆ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಒಬ್ಬ ಹಿರಿಯ ಪತ್ರಕರ್ತರು ಹೇಳುತ್ತಾರೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE September 2-8, 2024 Price: Rs. 10/- Date of Publication: 30 August 2024 RNI No. KARKAN /2006/17926 Posted on 03-09-2024
Posted at BG PSO, BG - 560026 **Posted at Periodical Rate -** Rs. 2



ಸಂಖ್ಯೆ: CPRO/PR/PA/14/24-25
ದಿನಾಂಕ:31-08-2024

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**